ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ

ಸಂಪುಟ 11 | ಸಂಚಿಕೆ 17 | ಪುಟ 16 | ಏಪ್ರಿಲ್ 17-23, 2017 | ರೂ. 10/-

web: www.janashakthi.co.in | e-mail : js_weekly@yahoo.com



ಅಂಬೇಡ್ಕರ್: ಮಹತ್ವದ ಸಮಾಜವಾದಿ



ಕಸಾಯಿಖಾನೆ ನಿಷೇಧದ ಸುತ್ತ ಮುತ್ತ

ಬಿಜೆಪಿಗೆ ಮುಖಭಂಗ





ಗುತ್ತಿಗೆ-ಹೊರಗುತ್ತಿಗೆ ಕಾರ್ಮಿಕರ ಸಮಾವೇಶ

ಅಭಿವ್ಯಕ್ತಿ ಸಮಾವೇಶ: ನಿರೀಕ್ಷೆ ಮುಟ್ಟಿತೆ?



ವಿದ್ಯುತ್ ದರ ಏರಿಕೆ ಶಾಕ್

ಚೆನ್ನೈ ಉಪಚುನಾವಣೆ ರದ್ದು

ಕಾವಲುಕೋರ ಪಡೆಗಳನ್ನು ತ್ವರಿತವಾಗಿ ಶಿಕ್ಷಿಸಬೇಕು ಮತ್ತು 'ಹಿಂದೂ ಚೌಕಿ'ಗಳನ್ನು ತೆಗೆಯಬೇಕು

'ಗೋರಕ್ಷಕ'ರ ದಾಳಿಗೆ ಹಾಲು ಉತ್ಪಾದಕ ರೈತರ ಮೇಲೆ ದಾಳಿ ಸ್ಥಳಕ್ಕೆ ಭೇಟಿ ನೀಡಿದ ಸಿಪಿಐ(ಎಂ) ನಿಯೋಗದ ಆಗ್ರಹ

ಎಪ್ರಿಲ್ 8ರಂದು ಸಿಪಿಐ(ಎಂ) ನಿಯೋಗವೊಂದು ರಾಜಸ್ತಾನದ ಬೆಹ್ರೊರ್‌ಗೆ ಭೇಟಿ ನಿಡಿತು ಇದು ಎಪ್ರಿಲ್1 ರಂದು ಗೋರಕ್ಷಕರು ಎಂದು ಹೇಳಿಕೊಳ್ಳುವ ಮಂದಿ ಹಾಲು ಉತ್ಪಾದನೆಯಲ್ಲಿ ತೊಡಗಿದ್ದ ಹರ್ಯಾಣದ ಕೆಲವು ರೈತರ ಮೇಲೆ ಭೀಕರ ದಾಳಿ ಮಾಡಿದ ಸ್ಥಳ. ಅವರಲ್ಲಿ ಒಬ್ಬರಾದ ಪೆಹ್ಲೂಖಾನ್ ಸಾವುಂಟಾಗಿದೆ.

ನಿಯೋಗ ಮೊದಲು ಆ ಸ್ಥಳದ ಪೋಲೀಸ್ ಠಾಣೆಗೆ ಹೋಗಿ ಅಲ್ಲಿನ ಡಿಎಸ್‌ಪಿ ಪರ್ಮಾಲ್ ಅವರನ್ನು ಭೇಟಿ ಮಾಡಿತು. ಇವರು ತನಿಖಾ ಅಧಿಕಾರಿಯಾಗಿದ್ದಾರೆ. 1ನೇ ತಾರೀಕಿನಂದು ಪಹ್ಲೂ ಖಾನ್ ಪ್ರಾಣ ಕಳಕೊಂಡ ಆ ಘಟನೆ ನಡೆಯುವ ಮೊದಲು ಹಸುಗಳಿದ್ದ ನಾಲ್ಕು ವ್ಯಾನ್‌ಗಳನ್ನು ಪೋಲಿಸ್ ಠಾಣೆಗೆ ತರಲಾಯಿತು ಮತ್ತು ಎಲ್ಲರನ್ನು ಬಂಧಿಸಲಾಯಿತು ಎಂದು ಅವರು ಹೇಳಿದರು. ಅವರಿನ್ನೂ ಕಸ್ಟಡಿಯಲ್ಲಿದ್ದಾರೆ. ಆನಂತರ ಇನ್ನೆರಡು ವ್ಯಾನ್‌ಗಳನ್ನು ಜೈಪುರ–ದಿಲ್ಲಿ ಹೆದ್ದಾರಿಯಲ್ಲಿ ಒಂದು ಜನಜಂಗುಳಿ ತಡೆದು ನಿಲ್ಲಿಸಿತು ಮತ್ತು ಅದರಲ್ಲಿ ಇದ್ದವರನ್ನು ಭಯಂಕರವಾಗಿ ಥಳಿಸಿತು. ಪೋಲೀಸರು ನಿಜವಾಗಿ ಜನಜಂಗುಳಿಯನ್ನು ಓಡಿಸಲು ಬಲಪ್ರಯೋಗ ನಡೆಸಿತು ಮತ್ತು ಗಾಯಗೊಂಡವರನ್ನು ಆಸ್ಪತ್ರೆಗೆ ಸೇರಿಸಿತು ಎಂದು ಡಿಎಸ್‌ಪಿ ಹೇಳಿದರು. ಪಹ್ಲೂಖಾನ್ ಬಿಟ್ಟು ಇತರರೆಲ್ಲರೂ ಮರುದಿನ ಆಸ್ಪತ್ರೆಯಿಂದ ಹೋದರು. ಆತ ಎಪ್ರಿಲ್ 3ರಂದು ನಿಧನರಾದರು.

ಎಪ್ರಿಲ್ 1ರಂದು ವ್ಯಾನ್‌ನಲ್ಲಿ ಇದ್ದ ಎಲ್ಲರ ಮೇಲೂ ಮತ್ತು ಹಲ್ಲೆ ಮಾಡಿದವರ ಮೇಲೂ ಎಫ್‌ಐಆರ್ ದಾಖಲಿಸಲಾಯಿತು. ಹಲ್ಲೆ ಮಾಡಿದವರಲ್ಲಿ ಯಾರೂ ಬಂಧಿತರಾಗಿಲ್ಲ. ಪಹ್ಲೂ ಖಾನ್ ಸಾವಿನ ನಂತರ ಹಲ್ಲೆ ಮಾಡಿದ ಜನಜಂಗುಳಿಯ ವಿರುದ್ಧ ಸೆಕ್ಷನ್ 302ನ್ನು ಎಫ್‌ಐಆರ್‌ಗೆ ಸೇರಿಸಲಾಯಿತು. "ಇತರ"ರೊಂದಿಗೆ ಆರು ಜನರ ಹೆಸರು ಸೇರಿಸಲಾಯಿತು. ಅವರಲ್ಲಿ ಯಾರನ್ನೂ ಬಂಧಿಸಿಲ್ಲ. ಇತರರಲ್ಲಿ 3 ಮಂದಿಯನ್ನು ಬಂಧಿಸಲಾಗಿದೆ, ಮತ್ತು ಒಬ್ಬನನ್ನು ನಿಯೋಗದ ಮುಂದೆಯೇ ಠಾಣೆಗೆ ತರಲಾಯಿತು. ಬಂಧಿತರಾದ ಅಥವ ಹಲ್ಲೆಗೊಳಗಾದ ಯಾರ ಬಳಿಯೂ ಆ ಪ್ರಾಣಿಗಳನ್ನು ಕಾನೂನುಬದ್ಧವಾಗಿ ಖರೀದಿಸಲಾಗಿದೆ ಮತ್ತು ಅದನ್ನು ಕಾನೂನುಬದ್ಧವಾಗಿ ಸಾಗಿಸಲಾಗುತ್ತಿತ್ತು ಎಂಬ ಬಗ್ಗೆ ಯಾವುದೇ ದಸ್ತಾವೇಜು ಇರಲಿಲ್ಲ ಎಂದು ಡಿಎಸ್‌ಪಿ ಹೇಳಿದರು. ಆದರೆ ಇದು ಒಂದು ಸುಳ್ಳು ಹೇಳಿಕೆ ಎಂದು ಸಾಬೀತಾಗಿದೆ. ಏಕೆಂದರೆ ದಸೀದಿಗಳ ಫೋಟೋಗಳು ಪತ್ರಿಕೆಗಳಲ್ಲಿ ಪ್ರಕಟವಾಗಿವೆ ಎಂದು ನಿಯೋಗ ಹೇಳಿದೆ.

ಹಲ್ಲೆಗೊಳಗಾದವರ ಜೇಬುಗಳಲ್ಲಿ ಒಟ್ಟು 25,000 ರೂ. ಸಿಕ್ಕಿತು, ಅದು ಅವರ ಇತರ ಪೇಪರುಗಳೊಂದಿಗೆ ಆಸ್ಪತ್ರೆ ಆಡಳಿತದ ಬಳಿ ಸುರಕ್ಷಿತವಾಗಿ ಇಡಲ್ಪಟ್ಟಿದೆ ಎಂದೂ ತನಿಖಾಧಿಕಾರಿ ಹೇಳಿದರು.

ನಂತರ ಸಿಪಿಐ(ಎಂ) ನಿಯೋಗ ಜಿಲ್ಲಾ ಕಲೆಕ್ಟರ್ ಮುಕ್ತಾನಂದ ಅಗ್ರವಾಲ್ ಅವರನ್ನು ಅಲವರ್‌ನಲ್ಲಿ ಭೇಟಿ ಮಾಡಿತು. ನಿಯೋಗ ಅವರೊಂದಿಗೆ ಘಟನೆಯ ಬಗ್ಗೆ ಚರ್ಚಿಸಿದಾಗ ಅವರು ನಡೆದದ್ದೆಲ್ಲ ಬಹಳ ತಪ್ಪು ಎಂದು ಒಪ್ಪಿಕೊಂಡರು. ಹಲ್ಲೆಗೊಳಗಾದವರ ಬಳಿ ಹಸುಗಳ ಕುರಿತಾದ ರಸೀದಿಗಳಿದ್ದವು ಎಂದೂ ಅವರು ಹೇಳಿದರು.



ಸಿಪಿಐ(ಎಂ) ನಿಯೋಗ ಈ ಕೆಳಗಿನ ಆಗ್ರಹಗಳನ್ನು ಮುಂದಿಟ್ಟಿದೆ:

1. ಕಾವಲು ಕೋರತನ ನಡೆಸುವ ಗುಂಪುಗಳ ವಿರುದ್ಧ ಬಲವಾದ ಮತ್ತು ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳಬೇಕು, "ಹಿಂದೂ ಚೌಕಿ"ಗಳು ಎಂಬುದನ್ನು ರಚಿಸುತ್ತಿದ್ದರೆ ಅವನ್ನು ತೆಗೆಯಬೇಕು. ಕಾವಲುಗಿರಿ ಕೃತ್ಯದಲ್ಲಿ ತೊಡಗಿರುವವರನ್ನು ಮತ್ತು ಬೆಂಬಲಿಸುವವರನ್ನು ಶಿಕ್ಷಿಸಬೇಕು.
2. ಜಿಲ್ಲಾ ಆಡಳಿತ ಜೈಪುರ ಮಹಾನಗರಪಾಲಿಕೆ ಸಂಘಟಿಸಿದ ಜೈಪುರ ಹಾಟ್‌ವಾಡದಲ್ಲಿ ಪಶುಗಳನ್ನು ಖರೀದಿಸಿದ ಎಲ್ಲ ವಿವರಗಳನ್ನು ಪಡೆಯಬೇಕು. ಈ ರಸೀದಿಗಳಲ್ಲಿ ಹಲ್ಲೆಗೊಳಗಾದವರ ಹೆಸರುಗಳಲ್ಲದೆ ಅವರ ವಿಳಾಸಗಳೂ ಇರುತ್ತವೆ. ಹಾಗಿದ್ದಲ್ಲಿ ಮಹಾನಗರಪಾಲಿಕೆ ಅಧಿಕಾರಿಗಳು ರಾಜ್ಯದ ಹೊರಗಿನವರಿಗೆ ಹಸುಗಳನ್ನು ಏಕೆ ಮಾರಿತು ಎಂದು ವಿವರಣೆ ಕೊಡಬೇಕಾಗುತ್ತದೆ. ಇದು ಅಗತ್ಯವೇಕೆಂದರೆ, ಇನ್ನೊಂದು ರಾಜ್ಯಕ್ಕೆ ಅಗತ್ಯ ಅನುಮತಿ ಇಲ್ಲದೆ ಪಶುಗಳನ್ನು ಸಾಗಿಸುವುದು ಕಾನೂನುಬಾಹಿರ ಎಂದು ಪೋಲಿಸರು ಒತ್ತಿ ಹೇಳುತ್ತಿದ್ದಾರೆ. ಮಾರಾಟದ ಮೊದಲು ಮಹಾನಗರಪಾಲಿಕೆ ಅಗತ್ಯ ಅನುಮತಿ ಒದಗಿಸಬೇಕಾಗಿತ್ತು.
3. ಹಲ್ಲೆಗೊಳಗಾದವರ ಬಳಿಯಿದ್ದುದ್ದೆಲ್ಲವೂ ಆಸ್ಪತ್ರೆಯಲ್ಲಿವೆ, ಅವನ್ನು ಜಿಲ್ಲಾ ಆಡಳಿತ ಅವರಿಗೆ ಹಿಂದಿರುಗಿಸಬೇಕು.
4. ಹಿಂಸಾಚಾರ ಮತ್ತು ಕೊಲೆಯ ಆಪಾದನೆ ಇರುವವರೆಲ್ಲರನ್ನೂ ಬಂಧಿಸಬೇಕು ಮತ್ತು ಈ ಕೇಸನ್ನು ತ್ವರಿತವಾಗಿ ಇತ್ಯರ್ಥ ಮಾಡಬೇಕು.
5. ಪಹ್ಲೂ ಖಾನ್ ಕುಟುಂಬಕ್ಕೆ ಪರಿಹಾರ ನೀಡಬೇಕು ಮತ್ತು ಅವರ ಮರುವಸತಿಗೆ ನೆರವಾಗಬೇಕು. ಗಾಯಗೊಂಡ ಇತರರಿಗೆ ಪರಿಹಾರ ಒದಗಿಸಬೇಕು ಮತ್ತು ಅವರ ಹಸುಗಳನ್ನು ಅವರಿಗೆ ಹಿಂದಿರುಗಿಸಬೇಕು. ಮತ್ತು ಅವರನ್ನು ಬಿಡುಗಡೆ ಮಾಡಬೇಕು.

ಸಿಪಿಐ(ಎಂ)ನ ಈ ನಿಯೋಗದಲ್ಲಿ ಪೊಲಿಟ್‌ಬ್ಯುರೊ ಸದಸ್ಯೆ ಸುಭಾಷಿಣಿ ಅಲಿ, ಪಶ್ಚಿಮ ಬಂಗಾಲದ ಲೋಕಸಭಾ ಸದಸ್ಯ ಬದ್ರುದ್ದುಜ ಖಾನ್, ತ್ರಿಪುರಾದ ಲೋಕಸಭಾ ಸದಸ್ಯ ಶಂಕರ ಪ್ರಸಾದ್ ದತ್ತ, ಸಿಪಿಐ(ಎಂ) ರಾಜಸ್ತಾನ ಕಾರ್ಯದರ್ಶಿ ಆಮ್ರ ರಾಮ್ ಮತ್ತು ಸಿಪಿಐ(ಎಂ) ರಾಜ್ಯ ಮುಖಂಡರಾದ ಸುಮಿತ್ರ ಚೋಪ್ರ, ರಯಿಸ ಹಾಗೂ ಗುರುಚರಣ್‌ಸಿಂಗ್ ಮೋರ್ ಇದ್ದರು.

ಮಾತೆಂದರೆ ಇದು

"ಅಧಿಕಾರ ಇದ್ದವರಿಗೆ ಸ್ವಾತಂತ್ರ್ಯವಿದೆ ಎಂಬ ಮಾತನ್ನು ಯಾರು ಅಲ್ಲಗಳೆಯಲಾರರು. ಅಧಿಕಾರದಿಂದ ಮಾತ್ರ ಎಲ್ಲ ಅಡೆತಡೆ ದಾಟಿ ಸ್ವಾತಂತ್ರ್ಯ ಗಳಿಸಲು ಸಾಧ್ಯ. ರಾಜಕೀಯ ಅಧಿಕಾರ, ಧಾರ್ಮಿಕ ಅಥವಾ ಆರ್ಥಿಕ ಅಧಿಕಾರದಷ್ಟು ಪ್ರಭಾವಶಾಲಿಯಲ್ಲದಿದ್ದರೂ ಅದು ಪರಿಣಾಮಕಾರಿ ಮತ್ತು ನೈಜ ಅಧಿಕಾರವಾಗಿದೆ ಎನ್ನಬಹುದು. ಸಂಘಟನೆ ಬೆಂಬಲವಿಲ್ಲದ ಅಧಿಕಾರ, ಅರಿವಿಲ್ಲದ ಅಧಿಕಾರ ಅಧಿಕಾರವೇ ಅಲ್ಲ. ಸದ್ಯದಲ್ಲಿ ಶೋಷಿತ ವರ್ಗಗಳು ಒಂದಲ್ಲ ಒಂದು ದಿನ ಸಂಘಟಿತ ರಾಗುತ್ತಾರೆ; ತಮಗೆ ದೊರೆತ ಅಧಿಕಾರದ ಅರಿವು ಹೊಂದುತ್ತಾರೆ, ಸಾಮಾಜಿಕವಾಗಿ ಸಬಲಗೊಳ್ಳಲು ಅದನ್ನು ಉಪಯೋಗಿಸಿ ಕೊಳ್ಳುತ್ತಾರೆ ಎಂದು ನಂಬಿದ್ದೇನೆ".

1930 ರ ದಶಕದಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ರೈಲ್ವೆ ಕಾರ್ಮಿಕರನ್ನು ಉದ್ದೇಶಿಸಿ ಮಾತನಾಡುತ್ತಾ

ಹಾಲು ಉತ್ಪಾದಕ ರೈತನನ್ನು ಕಾವಿಪಡೆಗಳು ಬಡಿದು ಸಾಯಿಸಿದ್ದೇಕೆ? ಉನ್ನತ ಮಟ್ಟದ ತನಿಖೆ ಅಗತ್ಯ: ಅಖಿಲ ಭಾರತ ಕಿಸಾನ್ ಸಭಾ

ಕಳೆದ ವಾರ ರಾಜಸ್ತಾನದಲ್ಲಿ ವಿಹೆಚ್‌ಪಿ ಮತ್ತು ಭಜರಂಗ ದಳದ ಮಂದಿ 'ಗೋರಕ್ಷಕ'ರ ವೇಷದಲ್ಲಿ ಬಡಿದು ಸಾಯಿಸಿದ ಹರ್ಯಾಣದ ರೈತ ಪೆಹ್ಲೂ ಖಾನ್‌ರ ಹಳ್ಳಿ ಜೈಸಿಂಗ್‌ಪುರಕ್ಕೆ ದೇಶದ ರೈತರ ಒಂದು ಪ್ರಮುಖ ಸಂಘಟನೆ ಅಖಿಲ ಭಾರತ ಕಿಸಾನ್ ಸಭಾ(ಎಐಕೆಎಸ್)ದ ಪ್ರಧಾನ ಕಾರ್ಯದರ್ಶಿ ಹನ್ನನ್ ಮೊಲ್ಲ ನೇತೃತ್ವದ ತಂಡ ಭೇಟಿ ನೀಡಿ ಅವರ ಕುಟುಂಬದ ಸದಸ್ಯರು ಮತ್ತು 'ಗೋರಕ್ಷಕ'ರ ಹಲ್ಲೆಗೆ ಗುರಿಯಾದ ಇತರರ ರೈತರನ್ನು ಭೇಟಿ ಮಾಡಿದರು. ಎಐಕೆಎಸ್ ಹಣಕಾಸು ಕಾರ್ಯದರ್ಶಿ ಪಿ.ಕೃಷ್ಣಪ್ರಸಾದ್, ಹರ್ಯಾಣ ಕಿಸಾನ್ ಸಭಾದ ಅಧ್ಯಕ್ಷ ಮಾಸ್ಟರ್ ಶೇರ್ ಸಿಂಗ್ ಮತ್ತು ಮನೋಜ್ ಸಿಂಗ್ ಅಲ್ಲದೆ ಸಿಐಟಿಯುನ ಹರ್ಯಾಣ ರಾಜ್ಯ ಅಧ್ಯಕ್ಷ ಸತ್ಬೀರ್ ಸಿಂಗ್ ಮತ್ತು ಗುರ್‌ಗಾಂವ್ ಜಿಲ್ಲಾ ಸಿಪಿಐ(ಎಂ) ಕಾರ್ಯದರ್ಶಿ ಮೇಜರ್ ಎಸ್‌ಎಲ್ ಪ್ರಜಾಪತಿ ಈ ತಂಡದಲ್ಲಿದ್ದರು.

ಪುಟ 7 ನೋಡಿ



ಹಲ್ಲೆಗೊಳಗಾದವರ ಕುಟಂಬಗಳಿಗೆ ಪರಿಹಾರ:' ಭೂಮಿ ಅಧಿಕಾರ ಆಂದೋಲನ'ದ ಹತ್ತು ಬೇಡಿಕೆಗಳು

ಹರ್ಯಾಣದ ಹಾಲು ಉತ್ಪಾದಕ ರೈತರ ಮೇಲೆ ರಾಜಸ್ತಾನದಲ್ಲಿ ಕಾವಿ ಪಡೆಗಳ ಅಮಾನುಷ ಹಲ್ಲೆ ಮತ್ತು ಪೆಹ್ಲೂ ಖಾನ್ ಕೊಲೆ ಸಮಾಜದಲ್ಲಿ ವಿಷ ಹರಡಿಸುವ ವ್ಯವಸ್ಥಿತ ಪ್ರಯತ್ನ ಎಂದು ದೇಶದ ರೈತರು ಮತ್ತು ಕೃಷಿಕೂಲಿಕಾರರನ್ನು ಪ್ರತಿನಿಧಿಸುವ ಸುಮಾರು 300 ಸಂಘಟನೆಗಳ ಅಖಿಲ ಭಾರತ ವೇದಿಕೆಯಾದ 'ಭೂಮಿ ಅಧಿಕಾರ್ ಆಂದೋಲನ್' (ಬಿ.ಎ.ಎ.) ಬಲವಾಗಿ ಖಂಡಿಸಿದೆ. ರೈತರ ಜಾನುವಾರುಗಳ ರಕ್ಷಣೆಯ ಪ್ರಶ್ನೆ ನಮ್ಮ ಮಟ್ಟಿಗೆ ಒಂದು ಧಾರ್ಮಿಕ ಪ್ರಶ್ನೆ ಅಲ್ಲ, ಹಿಂದೂ–ಮುಸ್ಲಿಂ ಪ್ರಶ್ನೆಯೂ ಅಲ್ಲ, ಅದು ರೈತ ಆರ್ಥಿಕದ ಮೇಲೆ ಗಂಭೀರ ಪರಿಣಾಮ ಬೀರುವಂತಹ ಒಂದು ಕೃಷಿ ಸಮಸ್ಯೆ ಎಂದಿರುವ ಬಿ.ಎ.ಎ. ಇತ್ತೀಚೆಗೆ ಬಿಜೆಪಿ ನೇತೃತ್ವದ ಸರಕಾರಗಳು ಗೋರಕ್ಷಣೆಯ ಹೆಸರಲ್ಲಿ ತಂದಿರುವ ಶಾಸನಗಳು ಜಾನುವಾರುಗಳ ವ್ಯಾಪಾರಕ್ಕೆ ಸಂಬಂಧಪಟ್ಟಂತೆ ರೈತಾಪಿಗಳ ಹಕ್ಕಿನ ಉಲ್ಲಂಘನೆ ಎಂದು ಅಭಿಪ್ರಾಯ ಪಟ್ಟಿದೆ. ಈ ಶಾಸನಗಳನ್ನು ತಂದಿರುವ ಸರಕಾರಗಳು ರೈತರ ಜಾನುವಾರುಗಳಷ್ಟೇ ರೈತರನ್ನೂ ರಕ್ಷಿಸಲೂ ಬಾಧ್ಯರಾಗಿವೆ ಎಂದು ಬಿ.ಎ.ಎ. ಹೇಳುತ್ತ ಈ ಕೆಳಗಿನ ಆಗ್ರಹಗಳನ್ನು ಮಾಡಿದೆ:

1. ರಾಜಸ್ತಾನದ ವಸುಂಧರ ರಾಜೇ ಸರಕಾರ ಪೆಹ್ಲೂ ಖಾನ್ ರವರ ಕುಟುಂಬಕ್ಕೆ 1 ಕೋಟಿ ರೂ. ಮತ್ತು ಹಲ್ಲೆಗೊಳಗಾಗಿರುವ ಇತರರಿಗೆ ತಲಾ 25ಲಕ್ಷ ರೂ. ಪರಿಹಾರ ಒದಗಿಸಬೇಕು. ಈ ಘಟನೆಯ ಹೊಣೆಯನ್ನು ತೆಗೆದುಕೊಂಡು ನಾಗರಿಕ ಮತ್ತು ಪ್ರಜಾಪ್ರಭುತ್ವ ಹಕ್ಕುಗಳು ಇರುವಂತೆ ಮಾಡಬೇಕು ಮತ್ತು ಕೋಮು ಸೌಹಾರ್ದವನ್ನು ಕದಡುವ ರಾಷ್ಟ್ರ–ವಿರೋಧಿ ವ್ಯಕ್ತಿಗಳಿಗೆ ಬಲವಾದ ಸಂದೇಶವನ್ನು ಕಳಿಸಬೇಕು.
2. ಹರ್ಯಾಣದ ಮನೋಹರಲಾಲ್ ಖಟ್ಟರ್ ಸರಕಾರ ಹಲ್ಲೆಗೊಳಗಾಗಿರುವ ಎಲ್ಲರಿಗೂ ತಕ್ಷಣ ಪುಕ್ಕಟೆ ವೈದ್ಯಕೀಯ ಶುಶ್ರೂಷೆ ಒದಗಿಸಬೇಕು.
3. ಪೆಹ್ಲೂ ಖಾನ್' ಕುಟುಂಬದ ಒಬ್ಬ ಸದಸ್ಯರಿಗೆ ಸರಕಾರಿ ಉದ್ಯೋಗ ಒದಗಿಸಬೇಕು.
4. ಎಲ್ಲ ಅಪರಾಧಿಗಳನ್ನು ತಕ್ಷಣವೇ ಬಂಧಿಸಿ ಕಠಿಣ ಶಿಕ್ಷೆ ವಿಧಿಸಬೇಕು.
5. ಈ ಅಪರಾಧ ಮತ್ತು ಪೋಲೀಸರ ಪಾತ್ರದ ಬಗ್ಗೆ ನಿಷ್ಪಕ್ಷಪಾತ ತನಿಖೆಗೆ ಸುಪ್ರಿಂ ಕೋರ್ಟ್‌ನ ನೇರ ಉಸ್ತುವಾರಿಯಲ್ಲಿ ಒಂದು ವಿಶೇಷ ತನಿಖಾ ತಂಡವನ್ನು ರಚಿಸಬೇಕು.
6. ಗೋಹತ್ಯೆಯ ಪ್ರಶ್ನೆಯ ಮೇಲೆ ಕೋಮುವಾದಿ ಗಲಭೆ ಸೃಷ್ಟಿಸುವ ಆರೆಸ್ಸೆಸ್ ಪಿತೂರಿಯನ್ನು ಹೊರತೆಗೆಯಲು ಸುಪ್ರಿಂ ಕೋರ್ಟ್ ಉಸ್ತುವಾರಿಯಲ್ಲಿ ಒಂದು ಉನ್ನತ ಮಟ್ಟದ ತನಿಖೆ ನಡೆಸಬೇಕು.
7. ರೈತರ ಜಾನುವಾರು ವ್ಯಾಪಾರದ ಹಕ್ಕಿಗೆ ಬಾಧೆಯುಂಟಾಗಬಾರದು. ತಕ್ಷಣವೇ ಸರಕಾರಗಳು ಮುಚ್ಚಿರುವ ಎಲ್ಲ ಜಾನುವಾರು ಮಾರುಕಟ್ಟೆಗಳನ್ನು ಪುನರಾರಂಭಿಸಬೇಕು.
8. ಜಾನುವಾರು ರಕ್ಷಣಾ ಕಾಯ್ದೆಗಳಲ್ಲಿ ರೈತರ ಅನುತ್ಪಾದಕ ಜಾನುವಾರುಗಳನ್ನು ಮಾರುಕಟ್ಟೆ ಬೆಲೆಗಳಲ್ಲಿ ಸರಕಾರ ಖರೀದಿಸಬೇಕೆಂಬುದನ್ನು ಸೇರಿಸಬೇಕು.
9. ರಾಜ್ಯ ಸರಕಾರ ಎಲ್ಲ ಬೀದಿ ಜಾನುವಾರುಗಳಿಗೆ ಸಾಕಷ್ಟು ಮೇವು, ನೀರು ಮತ್ತು ಪಶುವೈದ್ಯಕೀಯ ಸೇವೆಗಳನ್ನು ಆಶ್ರಯತಾಣಗಳಲ್ಲಿ ಒದಗಿಸಬೇಕೆನ್ನುವ ಅಂಶಗಳನ್ನು ಕಾಯ್ದೆಯಲ್ಲಿ ಅಳವಡಿಸಿ ಇಂತಹ ಜಾನುವಾರುಗಳಿಂದ ಬೆಳೆಗಳಿಗೆ ರಕ್ಷಣೆ ಒದಗಿಸಬೇಕು.
10. ಕೇಂದ್ರ ಕೃಷಿ ಇಲಾಖೆ ರೈತರ ಜಾನುವಾರು ಸಂಪತ್ತು ಕುರಿತ ಹಕ್ಕುಗಳ ರಕ್ಷಣೆಯ ಬಗ್ಗೆ ಚರ್ಚಿಸಲು ಎಲ್ಲ ರೈತ ಮತ್ತು ಕೃಷಿಕೂಲಿಕಾರ ಸಂಘಟನೆಗಳ ಸಭೆಯನ್ನು ಕರೆಯಬೇಕು.

ಮುಂಬರುವ ದಿನಗಳಲ್ಲಿ ಈ ಬೇಡಿಕೆಗಳ ಮೇಲೆ ಮತ್ತು ಹಲ್ಲೆಗೊಳಗಾದವರಿಗೆ ನ್ಯಾಯ ಸಿಗುವ ವರೆಗೆ ಹೋರಾಟಗಳನ್ನು ಬಿ.ಎ.ಎ. ಎತ್ತಿಕೊಳ್ಳುತ್ತದೆ ಎಂದಿರುವ ವಿವಿಧ ರೈತ ಮತ್ತು ಕೃಷಿಕೂಲಿಕಾರ ಸಂಘಟನೆಗಳ ಮುಖಂಡರು ರೈತಾಪಿ ಜನಗಳು ಹಲ್ಲೆಗೊಳಗಾದವರ ಪರವಾಗಿ ನಿಂತು, ಕೋಮುವಾದಿ ಶಕ್ತಿಗಳ ಅನಿಷ್ಟಕಾರಿ ತಂತ್ರಗಳ ವಿರುದ್ಧ ಅಣಿನೆರೆಯಬೇಕು ಎಂದು ಕರೆ ನೀಡಿದ್ದಾರೆ.

ಬರದ ಗಾಯದ ಮೇಲೆ ವಿದ್ಯುತ್ ಬೆಲೆ ಏರಿಕೆಯ ಶಾಕ್

ಸಂಪಾದಕೀಯ

ರಾಜ್ಯದ ಜನತೆ ಬರದ ಗಾಯದಿಂದ ತೊಳಲುತ್ತಿದ್ದಾರೆ. ಉಪಚುನಾವಣೆಗಳು ಮುಗಿಯುವುದನ್ನೇ ಕಾಯುತ್ತಿದ್ದ ರಾಜ್ಯ ಸರಕಾರ ವಿದ್ಯುತ್ ಬೆಲೆ ಏರಿಕೆಯ ಶಾಕ್ ಕೊಟ್ಟಿದೆ. ವಿದ್ಯುತ್ ದರವನ್ನು ಯೂನಿಟ್ಗೆ ಸರಾಸರಿ 48 ಪೈಸೆ ಹೆಚ್ಚಳ (ಸುಮಾರು ಶೇ. 8) ಮಾಡಲಾಗಿದೆ. ಪರಿಷ್ಕೃತ ದರ ಈ ತಿಂಗಳ ಒಂದರಿಂದಲೇ ಜಾರಿಗೆ ಬರಲಿದೆ. ಬೆಸ್ಕಾಂ(ವಿದ್ಯುತ್ ಸರಬರಾಜು ಕಂಪೆನಿ)ಗಳು ಯೂನಿಟ್ಗೆ ರೂ. 1.48 ಪೈಸೆ ಹೆಚ್ಚಳ ಮಾಡುವಂತೆ ಪ್ರಸ್ತಾವ ಸಲ್ಲಿಸಿದ್ದವು. ಪರಿಶೀಲನೆ ಬಳಿಕ ಯೂನಿಟ್ಗೆ ಸರಾಸರಿ 48 ಪೈಸೆ ಹೆಚ್ಚಳ ಮಾಡಲು ಒಪ್ಪಿಗೆ ನೀಡಲಾಗಿದೆ ಎಂದು ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗದ (ಕೆಇಆರ್ಸಿ) ಅಧ್ಯಕ್ಷ ಎಂ.ಕೆ. ಶಂಕರಲಿಂಗೇಗೌಡ ತಿಳಿಸಿದ್ದಾರೆ.

ಗೃಹ ಬಳಕೆಯ ವಿದ್ಯುತ್ ದರವನ್ನು ಯೂನಿಟ್ಗೆ 25ರಿಂದ 50ಪೈಸೆವರೆಗೆ ಏರಿಸಲಾಗಿದೆ. ಕೈಗಾರಿಕಾ ಬಳಕೆ ವಿದ್ಯುತ್ ದರವು 20 ಪೈಸೆಯಿಂದ 40 ಪೈಸೆವರೆಗೆ, ವಾಣಿಜ್ಯ ಬಳಕೆ ವಿದ್ಯುತ್ಗೆ 35 ಪೈಸೆಯಿಂದ 40 ಪೈಸೆವರೆಗೆ ಹೆಚ್ಚಿದೆ. ಕಳೆದ ವರ್ಷವೂ ಯೂನಿಟ್ಗೆ ಸರಾಸರಿ 48 ಪೈಸೆ ಏರಿಕೆ ಮಾಡಲಾಗಿತ್ತು. ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಬೇರೆ ಬೇರೆ (ಗ್ರಾಮೀಣ ಪ್ರದೇಶಗಳಲ್ಲಿ ಕಡಿಮೆ, ನಗರ ಪ್ರದೇಶಗಳಲ್ಲಿ ಹೆಚ್ಚು) ಏರಿಕೆ ಮಾಡಲಾಗಿದೆ.

ಕೃಷಿ ಪಂಪ್ಸೆಟ್, ಭಾಗ್ಯಜ್ಯೋತಿ ಮತ್ತು ಕುಟೀರ ಜ್ಯೋತಿ ಯೋಜನೆಗಳಿಗೂ ಮೀಟರ್ ಅಳವಡಿಸಲು ಆಯೋಗ ಶಿಫಾರಸು ಮಾಡಿದೆ. ಈ ಫಲಾನುಭವಿಗಳಿಂದ ಮೊದಲು ವಿದ್ಯುತ್ ಬಿಲ್ ಪಾವತಿಸಿಕೊಂಡು ಬಳಿಕ ಸಹಾಯಧನವನ್ನು ಅವರ ಬ್ಯಾಂಕ್ ಖಾತೆಗಳಿಗೆ ನೇರವಾಗಿ ಜಮೆ ಮಾಡುವಂತೆ ಸರ್ಕಾರಕ್ಕೆ ಸಲಹೆ ಮಾಡಿದೆ.

ಬೆಂಗಳೂರಿನ ಗೃಹ ಬಳಕೆದಾರರಿಗೆ ದರ ಏರಿಕೆಯು ಹೆಚ್ಚು ಬಿಸಿ ಮುಟ್ಟಿಸಿದೆ. 200 ಯೂನಿಟ್ ಒಳಗಿನ ಬಳಕೆಗೆ (ಪ್ರತಿ ಯೂನಿಟ್ಗೆ) 25 ಪೈಸೆ, 300 ಯೂನಿಟ್ವರೆಗೆ 40 ಪೈಸೆ ಹಾಗೂ 400 ಯೂನಿಟ್ ಮೀರಿದರೆ 50 ಪೈಸೆ ಹೆಚ್ಚು ಪಾವತಿಸಬೇಕಾಗುತ್ತದೆ.

ಆದರೆ ಎಚ್.ಟಿ. ಕೈಗಾರಿಕಾ ಬಳಕೆದಾರರಿಗೆ ತಿರುವು ಮುರುವು, ಹೆಚ್ಚು ವಿದ್ಯುತ್ ಹೆಚ್ಚು ಖರ್ಚು ಮಾಡುವ ಬಳಕೆದಾರರಿಗೆ ಏರಿಕೆ ಕಡಿಮೆ. 2 ಲಕ್ಷ ಯುನಿಟುಗಳ ವರೆಗೆ ಖರ್ಚು ಮಾಡುವ ಎಚ್.ಟಿ. ಕೈಗಾರಿಕೆಗಳಿಗೆ ಯುನಿಟಿಗೆ 40 ಪೈಸೆ ಹೆಚ್ಚಳ. 2 ಲಕ್ಷ ಯುನಿಟುಗಳ ವರೆಗೆ ಖರ್ಚು ಮಾಡುವ ಎಚ್.ಟಿ. ಕೈಗಾರಿಕೆಗಳಿಗೆ ಯುನಿಟಿಗೆ 20 ಪೈಸೆ ಹೆಚ್ಚಳ. ಹೆಚ್ಚು ವಿದ್ಯುತ್ ಬಳಸುವಂತೆ ಕೈಗಾರಿಕೆಗಳನ್ನು ಪ್ರೋತ್ಸಾಹಿಸಲು ಬೆಂಗಳೂರು ವಿದ್ಯುತ್ ಸರಬರಾಜು ಕಂಪೆನಿ (ಬೆಸ್ಕಾಂ) ಪ್ರತ್ಯೇಕ ಪ್ರಸ್ತಾವನೆ ಸಲ್ಲಿಸಿತ್ತು. ಆಯೋಗವೂ ಅದನ್ನು ಒಪ್ಪಿಕೊಂಡಿದೆ. ಬಹುತೇಕ ಕೈಗಾರಿಕೆಗಳು ಹೊರರಾಜ್ಯಗಳಿಂದ ಮುಕ್ತ ಮಾರುಕಟ್ಟೆಯಲ್ಲಿ ವಿದ್ಯುತ್ ಖರೀದಿ ಮಾಡುತ್ತಿವೆ. ಇಲ್ಲಿನ ಕಂಪೆನಿಗಳಿಂದ ವಿದ್ಯುತ್ ಖರೀದಿಸುವ ಪ್ರಮಾಣ ಕಡಿಮೆಯಾಗಿದೆ. ಕೈಗಾರಿಕೆಗಳಿಗೆ ಪ್ರೋತ್ಸಾಹ ನೀಡಿದರೆ ಹೆಚ್ಚಿನ ಉದ್ಯೋಗ ಸೃಷ್ಟಿಯಾಗುತ್ತದೆ. ಅಲ್ಲದೆ, ಜಿಡಿಪಿಗೆ ಕೊಡುಗೆ ನೀಡಲಿದೆ. ಆದ್ದರಿಂದ ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದರು.

2015–16ನೇ ಸಾಲಿನಲ್ಲಿ ಮಳೆ ಕೊರತೆಯಾಗಿದೆ. ಇದರಿಂದಾಗಿ ಜಲ ವಿದ್ಯುತ್ ಉತ್ಪಾದನೆ ಕುಸಿದಿದೆ. ಪರಿಣಾಮ ಹೊರ ರಾಜ್ಯಗಳಿಂದ ಶಾಖೋತ್ಪನ್ನ ವಿದ್ಯುತ್ ಖರೀದಿಸಲಾಗಿದೆ. ಪರಿಣಾಮವಾಗಿ ಎಲ್ಲ ಕಂಪೆನಿಗಳಿಗೂ ಒಟ್ಟು ರೂ2,296 ಕೋಟಿ ಆದಾಯ ಕೊರತೆಯಾಗಿದೆ. ಇದನ್ನು ಸರಿದೂಗಿಸಲೇ ಯುನಿಟಿಗೆ 42 ಪೈಸೆ ಹೆಚ್ಚಳ ಬೇಕಾಗುತ್ತದೆ. ಇದಲ್ಲದೆ ಶಾಖೋತ್ಪನ್ನ ವಿದ್ಯುತ್ ಘಟಕಗಳ ಇಂಧನ ಬೆಲೆ ಹೆಚ್ಚಾಗಿದೆ. ಆದ್ದರಿಂದ 48 ಪೈಸೆ ಹೆಚ್ಚಳ ಮಾಡುವುದು ಅನಿವಾರ್ಯವಾಗಿದೆ ಎಂದು ಕೆಇಆರ್ಸಿ ಹೇಳಿದೆ.

ಆದರೆ ಈ ವಿದ್ಯುತ್ ಏರಿಕೆ ಅನಿವಾರ್ಯವೇನಲ್ಲ. ಮಳೆ ಕೊರತೆಗಿಂತಲೂ ಹೆಚ್ಚಾಗಿ ಜಲ ವಿದ್ಯುತ್ ಘಟಕಗಳು ಪ್ರಮುಖ ರಿಪೇರಿಗೆ ಬಂದಿದ್ದರಿಂದ ಜಲವಿದ್ಯುತ್ ಕೊರತೆಯಾಗಿದೆ. ಅದೇ ರೀತಿ ವಿದ್ಯುತ್ ಖಾಸಗೀಕರಣವಾದ ದಶಕಗಳಿಂದಲೂ ಕೊರತೆ ಬಿದ್ದಾಗ (ಕೆಲವೊಮ್ಮೆ ಕೊರತೆಯ ನೆಪ ಮಾಡಿ)ಖಾಸಗಿ ವಿದ್ಯುತ್ ಉತ್ಪಾದಕರಿಂದ ದುಬಾರಿ ಬೆಲೆಯಲ್ಲಿ ಖರೀದಿ ಮಾಡುವ “ಗೋಲ್ ಮಾಲ್” ಆರಂಭವಾಗಿದೆ. ಕಳೆದ ವರ್ಷವೂ ಈ ಗೋಲ್ ಮಾಲ್ ನಡೆದಿದೆ ಎಂದು ಹೇಳಲಾಗಿದೆ. ಶಾಖೋತ್ಪನ್ನ ಘಟಕಗಳ ಯೋಜನಾಬದ್ಧ ನಿಯಮಿತ ನಿರ್ವಹಣೆಗಳ ಅಭಾವದಿಂದ ಅನಿರೀಕ್ಷಿತ ಕೊರತೆಗಳು ಉಂಟಾಗಿವೆ. ಇವಲ್ಲದೆ ದೂರಸಂವಹನ ಮತ್ತು ವಿತರಣೆಯಲ್ಲಿ ಉಂಟಾಗುವ ವಿದ್ಯುತ್ ನಷ್ಟ ಈಗಳು ಸುಮಾರು ಶೇ. 18ರಷ್ಟು ಇದೆ. ಅದನ್ನು ಕಡಿಮೆ ಮಾಡುವ ಸಾಧ್ಯತೆ ಇದೆ. ಈ ಎಲ್ಲವನ್ನೂ ದಕ್ಷತೆಯಿಂದ ನಿರ್ವಹಿಸಿದರೆ ವಿದ್ಯುತ್ ಏರಿಕೆ ಅನಿವಾರ್ಯವೇನಲ್ಲ.



ಕೃಪೆ: ಪಿ. ಮಹಮ್ಮದ್, ವಿಜಯ ಕರ್ನಾಟಕ

ಕೃಷಿ ಪಂಪ್ಸೆಟ್, ಭಾಗ್ಯಜ್ಯೋತಿ ಮತ್ತು ಕುಟೀರ ಜ್ಯೋತಿ ಯೋಜನೆಗಳಿಗೂ ಮೀಟರ್ ಅಳವಡಿಸಿ, ಈ ಫಲಾನುಭವಿಗಳಿಂದ ಮೊದಲು ವಿದ್ಯುತ್ ಬಿಲ್ ಪಾವತಿಸಿಕೊಂಡು ಬಳಿಕ ಸಹಾಯಧನವನ್ನು ಅವರ ಬ್ಯಾಂಕ್ ಖಾತೆಗಳಿಗೆ ನೇರವಾಗಿ ಜಮೆ ಮಾಡುವ ಸಲಹೆ, ರೇಶನ್ ಬದಲು ಕೂಪನ್ ವ್ಯವಸ್ಥೆಯಂತೆ ಕೊನೆಗೂ ಈ ಸಬ್ಸಿಡಿಗಳನ್ನು ಕೊನೆಗೊಳಿಸುವ ಉದ್ದೇಶ ಹೊಂದಿದೆ, ಈಗಾಗಲೇ ನೊಂದಿರುವ ರೈತರಿಗೆ ಬಡವರಿಗೆ ಈ ಸಬ್ಸಿಡಿಗಳನ್ನು ಕೊನೆಗೊಳಿಸುವ ಹುನ್ನಾರಗಳನ್ನು ದೃಢವಾಗಿ ವಿರೋಧಿಸಬೇಕಾಗಿದೆ.

ಜನ–ವಿರೋಧಿ ವಿದ್ಯುತ್ ಏರಿಕೆ ಮತ್ತು ಸಬ್ಸಿಡಿಗಳನ್ನು ಕೊನೆಗೊಳಿಸುವ ಹುನ್ನಾರಗಳನ್ನು ಹಿಂತೆಗೆದುಕೊಳ್ಳಲು ಹೋರಾಟ ಮಾಡಬೇಕಾಗಿದೆ.

ನಾಳಿನ ಕಾರ್ಯಕ್ರಮಗಳು

- **ಸಾಮಾಜಿಕ ನ್ಯಾಯ ಮತ್ತು ಸಮಾಜವಾದಿ ಕ್ರಾಂತಿ, ಏಪ್ರಿಲ್ 23**
  ದಲಿತ ಹಕ್ಕುಗಳ ಸಮಿತಿ ಇತರ ಸಂಘಟನೆಗಳ ಜತೆ
- **ಕರ್ನಾಟಕ ಪ್ರಾಂತ ರೈತ ಸಂಘ ರಾಜ್ಯ ಸಮ್ಮೇಳನ ಏಪ್ರಿಲ್ 25–27,** ಹುಬ್ಬಳ್ಳಿ
- **“ಕಾರ್ಮಿಕ ಹಕ್ಕುಗಳ ರಕ್ಷಣೆ, ಅಸಂಘಟಿತ ಕಾರ್ಮಿಕರಿಗೆ ಸಾಮಾಜಿಕ ರಕ್ಷಣಾ ಯೋಜನೆಗಳ ಜಾರಿ ಹಾಗು ಸಾರ್ವಜನಿಕ ಉದ್ದಿಮೆಗಳ ಉಳಿವಿಗಾಗಿ”** ಮೇ 1 2017 ಕಾರ್ಮಿಕ ದಿನಾಚರಣೆ
- **“ಕೆಲಸದ ಸ್ಥಳಗಳಲ್ಲಿನ ಲೈಂಗಿಕ ಕಿರುಕುಳ”** ಕಾರ್ಯಾಗಾರ, ಜೂನ್ 3–4, ಬೆಂಗಳೂರು
- **ಕಟ್ಟಡ ಕಾರ್ಮಿಕರ ರಾಜ್ಯ ಸಮ್ಮೇಳನ** ಜುಲೈ 1–2, ಕುಂದಾಪುರ

ರಾಜ್ಯ ಅಂಗನವಾಡಿ ನೌಕರರ ನಿರ್ಣಾಯಕ ವಿಜಯ


ಕರ್ನಾಟಕ ರಾಜ್ಯದ ಅಂಗನವಾಡಿ ನೌಕರರು ಸಿಐಟಿಯುಗೆ ಸೇರಿದ ತಮ್ಮ ಸಂಘಟನೆಯ ನೇತೃತ್ವದಲ್ಲಿ ಒಂದು ನಿರ್ಣಾಯಕ ವಿಜಯ ಸಾಧಿಸಿದ್ದಾರೆ. ಕಳೆದ ತಿಂಗಳ ನಾಲ್ಕು ದಿನಗಳ ಚಾರಿತ್ರಿಕ ಹೋರಾಟದ ಕೊನೆಯಲ್ಲಿ ಸರಕಾರದಿಂದ ಬಂದ ಭರವಸೆಯಂತೆ ಎಪ್ರಿಲ್ 10 ರಂದು ಮಾತುಕತೆಗಳು ನಡೆದು ಗೌರವವ ಧನದಲ್ಲಿ ಮತ್ತಷ್ಟು ಹೆಚ್ಚಳವಾಗಿದೆ. ಇದು ಮತ್ತು ಈ ಬಾರಿಯ ಬಜೆಟ್‌ನಲ್ಲಿ ಪ್ರಕಟಿಸಿದ ಹೆಚ್ಚಳಗಳ ನಂತರ ಈಗ ರಾಜ್ಯದಲ್ಲಿ ಅಂಗನವಾಡಿ ನೌಕರರ ಗೌರವಧನ ರೂ. 8000, ಮಿನಿ ನೌಕರರದ್ದು ರೂ.5250 ಮತ್ತು ಸಹಾಯಕರದ್ದು ರೂ.4000 ಆಗುತ್ತದೆ. ಇದು ಕರ್ನಾಟಕದ ಐಸಿಡಿಎಸ್ ಇತ್ತಿಹಾಸದಲ್ಲಿ ಅಂಗನವಾಡಿ ನೌಕರರು ಸಾಧಿಸಿರುವ ಅತಿ ಹೆಚ್ಚು ಹೆಚ್ಚಳ.

ಇದಲ್ಲದೆ ಇನ್ನೂ ಕೆಲವು ಬೇಡಿಕೆಗಳನ್ನು ಒಪ್ಪಿಕೊಳ್ಳಲಾಗಿದೆ. ಅಂಗನವಾಡಿ ನೌಕರರ ಸೇವಾ ನಿಯಮಗಳನ್ನು ಪರಿಶೀಲಿಸಲು ಒಂದು ಪರಿಣತರ ಸಮಿತಿಯನ್ನು ರಚಿಸಲಾಗಿದೆ. ವೈದ್ಯಕೀಯ ಪರಿಹಾರದ ಮಿತಿಯನ್ನು 20,000 ರೂ.ನಿಂದ 50,000 ರೂ.ಗೆ ಏರಿಸಲಾಗಿದೆ. ಈಗ ಇವರು ಅನುಭವಿಸುತ್ತಿರುವ ಆರ್‌ಟಿಐ ಸಂಬಂಧಿತ ಕಿರುಕುಳ, ಹೊರೆಯನ್ನೂ ಇಳಿಸಲಾಗಿದೆ.

ಈ ಮಾತುಕತೆಗಳಲ್ಲಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಜಿ.ವಿ.ಶ್ರೀರಾಮರೆಡ್ಡಿ ಮತ್ತು ಸಿಪಿಐ(ಎಂ) ಕಾರ್ಯದರ್ಶಿ ಮಂಡಳಿ ಸದಸ್ಯರೂರಾಜ್ಯ ಸಿಐಟಿಯು ಉಪಾಧ್ಯಕ್ಷರೂಆಗಿರುವ ವಿಜೆಕೆ ನಾಯರ್‌ಕೂಡ ಭಾಗವಹಿಸಿದ್ದರು.

ಮುಖ್ಯಮಂತ್ರಿಗಳ ಪ್ರಕಟಣೆಯ ನಂತರ ಪತ್ರಿಕಾ ವರದಿಗಾರರೊಂದಿಗೆ ಮಾತಾಡುತ್ತ ಅಂಗನವಾಡಿ ನೌಕರರ ಮುಖಂಡರಾದ ಎಸ್. ವರಲಕ್ಷ್ಮಿಯವರು ಇದು ಅಂಗನವಾಡಿ ನೌಕರರ ಹೋರಾಟದ ಅಂತ್ಯವಲ್ಲ, ಕೇಂದ್ರ ಸರಕಾರದ ವಿರುದ್ಧ ಹೋರಾಟ ಮುಂದುವರೆಯುತ್ತದೆ ಎಂದಿದ್ದಾರೆ. ಅಂಗನವಾಡಿ ನೌಕರರನ್ನು ಕಾರ್ಮಿಕರು ಎಂದು ಗುರುತಿಸಿ ಅವರಿಗೆ ಶಾಸನಬದ್ಧ ಕನಿಷ್ಟ ವೇತನ ಸಿಗುವ ವರೆಗೂ ಹೋರಾಟ ನಡೆಯುತ್ತದೆ ಎಂದು ಅವರು ಹೇಳಿದ್ದಾರೆ.

ಉಪ ಚುನಾವಣೆ: ಬೀಗುತ್ತಿದ್ದ ಬಿಜೆಪಿಗೆ ಭಾರೀ ಮುಖಭಂಗ



ಕೃಪೆ : ಸತೀಶ್ ಆಚಾರ್ಯ

ಗುಂಡ್ಲುಪೇಟೆ ಮತ್ತು ನಂಜನಗೂಡು ವಿಧಾನಸಭಾ ಕ್ಷೇತ್ರಗಳ ಉಪ ಚುನಾವಣೆಯಲ್ಲಿ ಬಿಜೆಪಿಯ ಸೋಲು ಕೇವಲ ಸೋಲಲ್ಲ, ಅದು ತೀವ್ರ ಮುಖಭಂಗ. ಇತ್ತೀಚಿಗಿನ ಐದು ರಾಜ್ಯಗಳ ಚುನಾವಣಾ ಫಲಿತಾಂಶದಿಂದ ಬೀಗುತ್ತಿದ್ದ ಬಿಜೆಪಿ ಈ ಚುನಾವಣಾ ಫಲಿತಾಂಶದಿಂದಲೇ ಮುಂಬರುವ ವಿಧಾನಸಭಾ ಚುನಾವಣೆಯ ದಿಗ್ವಿಜಯ ಆರಂಭ ಎಂಬ ಭಾರೀ ಭ್ರಮೆಯಲ್ಲಿತ್ತು. ಶ್ರೀನಿವಾಸ್‌ಪ್ರಸಾದ್‌ರ ಮೂಲಕ ದಲಿತರನ್ನೂ, ಎಸ್.ಎಂ. ಕೃಷ್ಣರ ಮೂಲಕ ಒಕ್ಕಲಿಗರನ್ನೂ, ಹೇಗೂ ಯಡಿಯೂರಪ್ಪರಿಂದ ಲಿಂಗಾಯತರನ್ನೂ ಸೆಳೆಯಬಹುದು ಎಂಬಂತಹ ಜಾತಿ ಸಮೀಕರಣದಿಂದಲೇ ಚುನಾವಣೆ ಗೆಲ್ಲಬಹುದು, ಮುಂದಿನ ಚುನಾವಣೆಯಲ್ಲಿಯೂ ಹೀಗೇ ಗೆಲುವು ನಿಶ್ಚಿತ ಎಂದೂ ಅದು ಹಾಕಿದ ಲೆಕ್ಕಾಚಾರವನ್ನು ಜಾಗೃತ ಮತದಾರರು ಪೂರಾ ತಲೆ ಕೆಳಗಾಗಿಸಿದ್ದಾರೆ. ಮಾತ್ರವಲ್ಲ, ದಕ್ಷಿಣ ಕರ್ನಾಟಕದಲ್ಲಿ ನೆಲೆಯೂರುವ ಕೋಮುವಾದಿಗಳ ಯತ್ನ-ಕ್ಕೆ ಒಂದು ತಾತ್ಕಾಲಿಕ ಬ್ರೇಕ್ ಸಹ ಹಾಕಿದ್ದಾರೆ. ಇಲ್ಲಿ ಗೆದ್ದರೆ ಅದನ್ನೇ ಮುಖ್ಯಮಂತ್ರಿ ಸ್ಥಾನ ದಕ್ಕಿಸಿಕೊಳ್ಳುವ ಕೆಲವರ 'ದೂರಾಲೋಚನೆ'ಗೂ ಕಲ್ಲು ಎಸೆದಿದ್ದಾರೆ. ಹೀಗೆ ಯಡಿಯೂರಪ್ಪನವರಿಗೆ ಈ ಒಳ ಆಸೆಗೆ ಭಂಗವಾಗಿದೆ. ಇಲ್ಲಿ ಕಾಂಗ್ರೆಸ್ ಸೋತರೆ ಸಿದ್ಧರಾಮಯ್ಯನವರ ಕುರ್ಚಿಗೆ ಕಂಟಕ ತರುವ ಆಂತರಿಕ ಹಂಚಿಕೆಗೂ ನಿರಾಸೆಯ ತಣ್ಣೀರು ಎರಚಿದೆ. ಅಂದರೆ ಮತದಾರರು ಇಂತಹ ಒಳ ಹಂಚಿಕೆಗೂ ಗುದ್ದು ಕೊಟ್ಟಿದ್ದಾರೆ ಎನ್ನಲೂಬಹುದು.

ಧಾವಂತಕ್ಕೆ ತಡೆ

ಪ್ರತಿಯೊಂದು ಪಕ್ಷವೂ, ಮತ್ತು ಅದರ ನಾಯಕರು, ಕಣದಲ್ಲಿದ್ದ ಅಭ್ಯರ್ಥಿಗಳು ಈ ಕ್ಷೇತ್ರದಲ್ಲಿ ತಮ್ಮ ಸೆಣಸಾಟ-ತಿಣುಕಾಟಗಳನ್ನು ಅತ್ಯಂತ 'ಪ್ರತಿಷ್ಠೆಯ ಪ್ರಶ್ನೆ'ಯನ್ನಾಗಿಸಿದ್ದರು! ಅದನ್ನೇ ಚುನಾವಣಾ ವಿಷಯವಾಗಿಸಿದ್ದರು. ಈ ಅಬ್ಬರದಲ್ಲಿ ಜನರ ಬದುಕಿನ ತತ್ತರಗಳನ್ನು ಮರೆಯಾಗಿಸಿ ಮೂಲೆಗೊತ್ತಿಬಿಟ್ಟಿದ್ದರು. ಕಾಂಗ್ರೆಸ್ ಸರಕಾರದ ವೈಫಲ್ಯಗಳನ್ನು, ಅದರ ವಿರುದ್ಧದ ಅತೃಪ್ತಿಯನ್ನು ಬಳಸಿಕೊಳ್ಳಬೇಕೆಂಬ ಧಾವಂತದಲ್ಲಿದ್ದ ವಿರೋಧ ಪಕ್ಷವು ತನ್ನ ನಾಯಕರ ಅಧಿಕಾರದ ಹಪಾಹಪಿತನವನ್ನೇ ಅಜೆಂಡಾವಾಗಿಸಿತ್ತು. ಜನರ ಜ್ವಲಂತ ಪ್ರಶ್ನೆಗಳನ್ನೇ ಕಿಂಚಿತ್ತೂಗಣಿಸದವರಿಗೆ ಜನರು ಪರಿಗಣಿಸುವುದಾದರೂ ಹೇಗೆ?

ಸಂದರ್ಭ ಸಾಧಕತೆ

ಕಾಂಗ್ರೆಸ್ ಪಕ್ಷದ ವರ್ತನೆಯೂ ಭಿನ್ನವಾಗಿಯೇನೂ ಇರಲಿಲ್ಲ. ಆದರೆ ಬಿಜೆಪಿಯ ಮತ್ತು ಅದರ ಅಭ್ಯರ್ಥಿಗಳ ನಕಾರಾತ್ಮಕ ನಡೆ ನುಡಿಗಳನ್ನು ಒಪ್ಪದ ಜನರ ಮನೋಭಾವದ ಲಾಭ ಗಿಟ್ಟಿಸಿತು. ಅಲ್ಲೆಲ್ಲಾ ಪ್ರಬಲವಾದ ಮೂರನೆಯ ಅಭ್ಯರ್ಥಿಯೂ ಇಲ್ಲವಾಗಿತ್ತು. ತಾನು ಅಧಿಕಾರ ಕಳೆದು ಕೊಂಡದ್ದನ್ನು ದಲಿತರ ಸ್ವಾಭಿಮಾನದ ಪ್ರಶ್ನೆಯೆಂಬಂತೆ ಬಿಂಬಿಸಿದ ಶ್ರೀನಿವಾಸ್ ಪ್ರಸಾದ್ ಒಳ ಹೊಕ್ಕದ್ದು ಬಿಜೆಪಿಯಂತಹ ಮನುವಾದಿ ಪಕ್ಷವನ್ನು. ಅವರ ಸೋಲು, ಸೇರಿ ಮತ್ತು ಸೇರಿಸಿಕೊಂಡ ಇಬ್ಬರ ಈ ಸಂದರ್ಭ ಸಾಧಕತೆಗೆ ಕೊಟ್ಟ ಏಟೂ ಕೂಡ.

ಹಲವು ಅಂಶಗಳು

ಗುಂಡ್ಲುಪೇಟೆಯಲ್ಲಿ ಅಕಾಲಿಕ ಮರಣ ಹೊಂದಿದ ಮಹದೇವ್ ಪ್ರಸಾದ್‌ರ ಪತ್ನಿ ಮೋಹನ್ ಕುಮಾರಿಯವರ ವಿರುದ್ಧಸಂಸದ ಪ್ರತಾಪ್‌ಸಿಂಹ ಮತ್ತವರ ನಾಯಕರು ಅತ್ಯಂತ ಅವಮಾನಕರವಾಗಿ ಪ್ರಚಾರಿಸಿ ತಮ್ಮ ಕುಸಂಸ್ಕೃತಿಯನ್ನು ಪ್ರದರ್ಶಿಸಿದ್ದನ್ನು ಜನ ಒಪ್ಪಲಿಲ್ಲ. ಅನುಕಂಪವನ್ನೂ ಒಳಗೊಂಡು ಭಾವನಾತ್ಮಕ ವಿಷಯಗಳನ್ನು ಕಾಂಗ್ರೆಸ್ ಬಳಸಿಕೊಂಡದ್ದಕ್ಕೆ ಇದು ಉದಾಹರಣೆ. ಜಾತಿ ಕ್ರೋಢೀಕರಣ ಮತ್ತು ಹಣಇಲ್ಲಿ ಸಮಬಲದಿಂದ ಕೆಲಸ ಮಾಡಿರುವ ಅಂಶವನ್ನು ಅಲ್ಲಗೆಳೆಯುವುದು ಅಸಾಧ್ಯ.

ಎರಡು ಕ್ಷೇತ್ರಗಳ ಮತ ಗಳಿಕೆಯೂ ಗಮನಾರ್ಹ. ಹಿಂದೆಲ್ಲಾ ಸತತವಾಗಿ ಹಲವರು ಚುನಾವಣೆಗಳಲ್ಲಿ ಗೆಲುವು ಸಾಧಿಸುತ್ತಿದ್ದ ಶ್ರೀನಿವಾಸ ಪ್ರಸಾದರು ಈ ಬಾರಿ ಗಳಿಸಿದ್ದು 64,828 ಮತಗಳನ್ನು. ಅಲ್ಲಿ ಗೆದ್ದ ಕಾಂಗ್ರೆಸ್ ಅಭ್ಯರ್ಥಿ ಕಳಲೆ ಕೇಶವಮೂರ್ತಿಗೆ 86,212. ಇವರು ಮೊದಲು ಇದ್ದ ಜೆಡಿಎಸ್ ಪಕ್ಷ ಈ ಬಾರಿ ಸ್ಪರ್ಧಿಸಿರದೇ ಇರೋದು ಸಹ ಅವರಿಗೆ ವರದಾನವಂತೆ. ಗುಂಡ್ಲುಪೇಟೆಯಲ್ಲಿ ಕಾಂಗ್ರೆಸ್‌ಗೆ 90258, ಬಿಜೆಪಿ 79381. ಇಲ್ಲೆಲ್ಲಾ ಬಿಜೆಪಿಯದ್ದು ಕಳಪೆ ಪ್ರದರ್ಶನವೇನೂ ಅಲ್ಲ. ಆದರೆ ಅವರು ಪಟ್ಟ ಹರಸಾಹಸ, ಹಣ ಮುಂತಾದ ಸಂಪನ್ಮೂಲಗಳ ಬಳಕೆಗೆ ಹೋಲಿಸಿದರೆ ಅದು ನಿರಾಶೆಯಾಗುವುದು ಖಂಡಿತ. ಎರಡನೆಯ ಸ್ಥಾನದಲ್ಲಿರುವುದನ್ನೇ ಬಿಜೆಪಿ ಬಳಸಿಕೊಳ್ಳುವುದಿಲ್ಲ ಎಂದು ಹೇಳಲು ಸಾಧ್ಯವಿಲ್ಲ. ಅದು ದಕ್ಷಿಣ ಕರ್ನಾಟಕದಲ್ಲಿ ತನ್ನ ಬೇರು ಇಳಿಸಲು ಬುಡಮಟ್ಟದಲ್ಲಿ ಕೆಲಸ ನಡೆಸುತ್ತದೆ. ವಿಶೇಷವಾಗಿ ದಲಿತರ ನಡುವೆ. ಲಿಂಗಾಯತರೆ ಹೆಚ್ಚಿರುವಲ್ಲಿ ಯಡ್ಯೂರಪ್ಪನವರ ವರ್ಚಸ್ಸು ಏನೂ ಕೆಲಸ ಮಾಡಲಿಲ್ಲ ಎಂಬುದು ಕಂಡರೂ ಉಳಿದೆಡೆ ಲಿಂಗಾಯತರು ಮತ್ತು ಸಂಘಪರಿವಾರ-ಬಿಜೆಪಿ ಪ್ರಭಾವ, ಸಂಬಂಧಗಳು ದುರ್ಬಲವಾಗುವವು ಎನ್ನಲಾಗುವುದಿಲ್ಲ.

ಗರಿಗೆದರಬಹುದೇ?

ಒಂದು ಸಾಧ್ಯತೆಯಂತೂ ಇದೆ. ಅದೆಂದರೆ ಎರಡು ಪಕ್ಷಗಳಲ್ಲಿ ಗುಂಪುಗಾರಿಕೆ ಗರಿಗೆದರಬಹುದು. ಬಿಜೆಪಿಯಲ್ಲಿ ಯಡ್ಯೂರಪ್ಪನವರ ವಿರುದ್ಧ ಇದನ್ನು ಬಳಸಬಹುದು. ಸಿದ್ದರಾಮಯ್ಯನವರಿಗೆ ಬಲ ತಂದಿದೆ ಎಂದರೂ ಮುಂದೆ ಕಾಂಗ್ರೆಸ್ ಅಧ್ಯಕ್ಷ ಸ್ಥಾನಕ್ಕಾಗಿ ಪೈಪೋಟಿ ಹೆಚ್ಚಬಹುದು. ಈ ಚುನಾವಣೆಯಲ್ಲಿ ತುಂಬಾ ಸಕ್ರಿಯವಾಗಿದ್ದ ಸಚಿವ ಡಿ.ಕೆ.ಶಿವಕುಮಾರ್ ಇದನ್ನು ಬಳಸಬಹುದು ಎಂಬ ಸುದ್ದಿಗಳನ್ನು ತಳ್ಳಿ ಹಾಕುವಂತಿಲ್ಲ. ಅದು ಅವರ ಅಂತರಿಕ ವಿಷಯ. ಆದರೆ ಬಹಿರಂಗ ಕದನವಾಗುವುದಿಲ್ಲ ಎಂದು ಹೇಳಲಾಗುವುದಿಲ್ಲ.

ಮಂಕಾದ ಮೋದಿ ವರ್ಚಸ್ಸು

ಬಹಳ ಮುಖ್ಯ ಪ್ರಶ್ನೆಯೆಂದರೆ ಐದು ರಾಜ್ಯಗಳ ಚುನಾವಣಾ ಫಲಿತಾಂಶ, ನೋಟು ಅಮಾನ್ಯೀಕರಣದ ಹುಸಿ ಸಾಧನೆಯ ಪ್ರಭಾವ ಮುಂತಾದವುಗಳಿಂದ ತೇಲಾಡುತ್ತಿದ್ದ ಮೋದಿ ವರ್ಚಸ್ಸು ಇಲ್ಲಿ ಏನೂ ಮಾಡದೇ ಮಣ್ಣು ಮುಕ್ಕಿದ್ದು ವಿಶೇಷ ರಾಜಕೀಯ ಅಂಶ. ಅಂದರೆ ಜನ ಉಳಿದ ರಾಜ್ಯಗಳಲ್ಲಿ ಅಧಿಕಾರದಲ್ಲಿದ್ದ ಜನ ವಿರೋಧಿ ನೀತಿಗಳಿಗೆ ಸೂಕ್ತ ಪರ್ಯಾಯ ಕಾಣದೇ ಬಿಜೆಪಿಯತ್ತ ಕೈಚಾಚಿರುವುದು ಬಿಟ್ಟರೆ ಮೋದಿ, ಅಮಿತ್ ಶಾ ಗಳ ವರ್ಚಸ್ಸು ಹವಾ ಏನೂ ಅಲ್ಲ. ಮೋದಿ ಹವಾ ಇದೆ-ಯೆಂದರೆ ಅದು ಹಾರಿ ಹೋಯಿತು ಎಂಬುದನ್ನು ಭಕ್ತರು ಒಪ್ಪುವರೇ? ಜನರ ತೀರ್ಪಿನಿಂದ ಇವರಿಗೆ ವರ್ಚಸ್ಸು ಬರುತ್ತದೆ ಅಷ್ಟೇ.

ಅಪಾಯ ತಪ್ಪಿಲ್ಲ

ಇಲ್ಲಿ ಮುಖ್ಯ ಪ್ರಶ್ನೆ ಈ ಉಪ ಚುನಾವಣೆಯ ಫಲಿತಾಂಶವೇ ಮುಂದೆಯೂ ಪ್ರತಿಫಲಿಸುತ್ತದೆ ಎಂದು ಯಾರಾದರೂ ಭಾವಿಸಿದರೆ ಅದು ಮೂರ್ಖತನ. ಆಡಳಿತಕ್ಕೆ ಸಿಕ್ಕ ಮನ್ನಣೆ ಎಂದು ಹೇಳಿಕೊಳ್ಳುವುದೂ ಅರ್ಥಹೀನ. ಹಾಗೆ ಅದು ಹೇಳುತ್ತಾ ಅದೇ ಜನವಿರೋಧಿ, ದಿವಾಳಿ ಖೋರ ನೀತಿಗಳನ್ನು ಅನುಸರಿಸಿದರೆ ಅಥವಾ ಅವನ್ನು ಕೈ ಬಿಡದಿದ್ದರೆ ಜನ ಪಾಠ ಕಲಿಸುತ್ತಾರೆ ಕೂಡ. ಇದರ ಲಾಭ ಯಾರು ಹೊಡೆಯುವರು? ಬಿಜೆಪಿ ಅದಕ್ಕಾಗಿ ಹೊಂಚು ಹಾಕಿ ಕೆಲಸ ನಡೆಸಿದೆ. ಚುನಾವಣಾ ಫಲಿತಾಂಶದಿಂದ ಅದು ಕೆಲವು ತಿದ್ದುಪಡಿಗಳನ್ನು ಮಾಡಿಕೊಳ್ಳಬಹುದೂ ಕೂಡ. ಕರ್ನಾಟಕದಲ್ಲಿ ಅದರ ಗುರಿ 150 ಸ್ಥಾನಗಳ ಗಳಿಕೆ. ಆ ಕಡೆಗೇ ಅದರ ನಡೆಯಿದೆ.

ಊಹೆಗಳು

ಇಲ್ಲಿ ಚುನಾವಣಾ ಫಲಿತಾಂಶದ ಬಗ್ಗೆ ಮತ್ತೊಂದು ಅಂಶದ ಬಗ್ಗೆಯೂ ಚರ್ಚೆ ನಡೆ-ಯುತ್ತಿದೆ. ಅಲ್ಲಿ ಸ್ಪರ್ಧಿಸದ ಜೆಡಿಎಸ್‌ನ ನಡೆ ಮತ್ತು ಅದರ 'ಅರ್ಥ'ದ ಬಗ್ಗೆ. ಮುಂಬರುವ ಚುನಾವಣೆಯಲ್ಲಿ ಬಿಜೆಪಿಯನ್ನು ಎದುರಿಸಲು ಎಲ್ಲಾ ಸೆಕ್ಯುಲರ್ ಶಕ್ತಿಗಳು ಒಂದಾದರೆ ಹೇಗೆ? ಎಂಬುದರ ಬಗ್ಗೆ, ಅಂತಹ ರಾಜಕೀಯ ಸೂತ್ರ ರೂಪಗೊಳಿಸುವ ಇಂಗಿತವಿದೆ ಅಲ್ಲಿ. ಆದರೆ ಈ ಎರಡು ಶಕ್ತಿಗಳ ನಡುವೆ ರಾಜಕೀಯ ಕ್ರೋಢೀಕರಣ ತರುವ ಅಪಾಯಗಳ ಬಗ್ಗೆ ಎಚ್ಚರ ಇರಬೇಕಾದ್ದದ್ದು ಅಗತ್ಯ. ಬಿಜೆಪಿಯನ್ನು ಕಾಂಗ್ರೆಸ್ ಸಮರ್ಥವಾಗಿ ಎದುರಿಸುತ್ತದೆ ಎಂಬುದೇ ಒಂದು ಭ್ರಮೆ. ಮೇಲಾಗಿ ಕಾಂಗ್ರೆಸ್ ವಿರೋಧಿ ಶಕ್ತಿಗಳು ಬಿಜೆಪಿಯತ್ತಲೇ ಕ್ರೋಢೀಕರಣಗೊಳ್ಳಲು ಅವಕಾಶ ಮಾಡಿಕೊಡುತ್ತದೆ. ಒಂದೇ ನೀತಿಗಳನ್ನು ಅನುಸರಿಸುವ ಕಾಂಗ್ರೆಸ್ ಮತ್ತು ಬಿಜೆಪಿಯ ವಿರುದ್ದ ಪರ್ಯಾಯಕ್ಕಾಗಿ ಹೋರಾಡುವ ಮೂರನೆಯ ಶಕ್ತಿಗಳನ್ನು ದುರ್ಬಲಗೊಳಿಸುವುದು ಸಹ. ಮೂರನೆಯ ಪರ್ಯಾಯಕ್ಕೆ ವಿಪುಲ ಅವಕಾಶಗಳು ಇರುವ ರಾಜ್ಯ ಕರ್ನಾಟಕ ಎಂಬುದನ್ನು ಮರೆಯಬಾರದು ಕೂಡ. ಜೆಡಿಎಸ್‌ನಂತಹ ಪ್ರಾದೇಶಿಕ ಪಕ್ಷಗಳು ಮುಂದೆ ಏನು ಮಾಡುತ್ತವೆ ಎಂದು ಈಗ ಹೇಳಲಾಗದು ನಿಜ. ಹಾಗೇ ಒಟ್ಟಾರೆ ಮುಂದಿನ ಬೆಳವಣಿಗೆಗಳನ್ನು ಈಗಲೇ ವ್ಯಾಖ್ಯಾನಿಸುವುದು ಊಹಾಪೋಹಕ್ಕೆ ಇಂಬು ಅಷ್ಟೆ.

ಸಾರ ಇಷ್ಟು

ಈ ಫಲಿತಾಂಶದಿಂದ ತಿಳಿಯಬಹುದಾದ್ದು ಕರ್ನಾಟಕದಲ್ಲಿ ಅಧಿಕಾರ ಹಿಡಿದೇ ಬಿಡುತ್ತೇವೆ ಎಂಬ ಬಿಜೆಪಿಯ ಬೀಗುವಿಕೆಯನ್ನು ಭಗ್ನಗೊಳಿಸಿದ್ದಾರೆ, ಅದನ್ನು ಸೋಲಿಸಲು ರಾಜ್ಯದ ಜನ ಸಿದ್ಧರಿದ್ದಾರೆ. ಅದಕ್ಕೆ ಒಂದು ಬಲಯುತ ಪರ್ಯಾಯ ಬೇಕು ಎಂಬುದು.

-ಎಸ್.ವೈ. ಗುರುಶಾಂತ್

ಯಡ್ಡಿಯೂರಪ್ಪ ಶ್ರೀನಿವಾಸ ಪ್ರಸಾದ್ ರ ಅಹಂಗೆ ತುಪ್ಪ ಸವರಿ ರಾಜೀನಾಮೆ ಮಾಡಿಸಿದ ಕುತಂತ್ರ ಅವರಿಗೇ ತಿರುಗಿ ಬಡಿದಿದೆ. ಈ ಚುನಾವಣೆಗಳಲ್ಲಿ ಅಕಸ್ಮಾತ್ ಗೆದ್ದಿದ್ದರೆ ಕಾಂಗ್ರೆಸ್, ಜೆಡಿಎಸ್ ಗಳಿಂದ ಮತ್ತಷ್ಟು ಆಪರೇಷನ್ ಕಮಲಕ್ಕೆ ಅವಕಾಶವಾಗುತ್ತಿತ್ತು. ಇಂತಹ ಅವರ ಅಬ್ಬರಗಳಿಗೆ ಕೊಂಚ ಕಾಲ ಕಡಿವಾಣ ಬೀಳಲಿದೆ ನಿರೀಕ್ಷೆ ನಮ್ಮೆಲ್ಲರದು. ಅದಷ್ಟೇ ಈ ಚುನಾವಣೆಗಳ ಪ್ರಾಮುಖ್ಯತೆ.

ಅದಕ್ಕಿಂತ ಹೆಚ್ಚು ಸಂತೋಷ ಬಹಳಷ್ಟು ಪ್ರಗತಿಪರರಿಗೆ.ಈ ಚುನಾವಣೆಗಳಿಗೆ ಇನ್ನಿಲ್ಲದ ಪ್ರಾಮುಖ್ಯತೆ ನೀಡಲಾಗಿದೆ. ಅದಕ್ಕೆ ಮುಖ್ಯ ಕಾರಣ ಯು.ಪಿ.ಯಲ್ಲಿ ಬಿಜೆಪಿ ಗಳಿಸಿದ ಬಹುಮತದ ಪ್ರಮಾಣದಿಂದ ಉಂಟಾದ ಆತಂಕ. ಆದಿತ್ಯನಾಥನ ಮುಖ್ಯಮಂತ್ರಿತ್ವ ಕೂಡಾ.

ಅಂದಿನಿಂದಲೇ ಕರ್ನಾಟಕದ ಪ್ರಗತಿಪರರಲ್ಲಿ ಬಿಜೆಪಿಯ ವಿರುದ್ಧ ಬೇರೆಲ್ಲ ಪಕ್ಷಗಳೂ ಒಂದಾಗಿ ಚುನಾವಣೆ ಎದುರಿಸಬೇಕು ಎಂಬ ಧ್ವನಿ ಏಳತೊಡಗಿದೆ. ಈಗ ಉಪ ಚುನಾವಣೆಗಳ ನಂತರ ಮತ್ತಷ್ಟು ಗಟ್ಟಿಯಾಗಿದೆ.

ಆದರೆ ಉಪ ಚುನಾವಣೆಗಳಲ್ಲಿ ಕಾಂಗ್ರೆಸ್ ಗೆಲುವು ಜನತೆಯ ಸೋಲೂ ಆಗಿದೆ. ಏಕೆ-ಂದರೆ ಇಂದು ಜನ ಸಾಮಾನ್ಯರು ಅನುಭವಿಸುತ್ತಿರುವ ಸಂಕಟಗಳ ಯಾವ ಪ್ರಸ್ತಾಪವೂ ಅವುಗಳಿಗೆ ಪರಿಹಾರವೂ ಕೂಡ ಈ ಚುನಾವಣೆಗಳಲ್ಲಿ ಆಗಿಲ್ಲ. ಬರಗಾಲ, ರೈತರ ಸಮಸ್ಯೆಗಳು?...

ಗೆಲುವಿಗೆ ಕಾರಣವಾದದ್ದು ಹಣದ ಚೆಲ್ಲಾಟ, ಇತರೆಲ್ಲಾ ಪಕ್ಷ, ಗುಂಪುಗಳ ಕೊಳ್ಳಾಟ, ಜಾತಿಗಳ ಕೂಟ, ಜೆಡಿ ಎಸ್ ನ ಮುಂದಿನ ಅಧಿಕಾರದ ಆಕಾಂಕ್ಷೆ. ಕೆಲ ಭಾಗ್ಯಗಳೂ ಕೂಡ ಕೆಲ ಮತಗಳಿಗೆ ಕಾರಣ ಎಂದು ಹೇಳಬಹುದು.

ಇದು ಕರ್ನಾಟಕದ ಜನರ ಭಾಗ್ಯವಾಗಬಹುದೇ? ಮುಂದಿನ ಚುನಾವಣೆಗಳಲ್ಲಿ ಮತದಾರರನ್ನು ಮತ್ತಷ್ಟು ಭ್ರಷ್ಟಗೊಳಿಸುವ ಇದೇ ದಾರಿಯಲ್ಲದೇ ಬೇರೇನನ್ನಾದರೂ ನಿರೀಕ್ಷಿಸಬಹುದೇ?


- ಜಿ.ಎನ್. ನಾಗರಾಜ್

ಅಸ್ಪೃಶ್ಯತೆ ಆಚರಣೆ ವಿರುದ್ಧ ದೂರು ನೀಡಿದವರ ವಿರುದ್ಧವೇ ಕಾನೂನು ಕ್ರಮಕ್ಕೆ ಮುಂದಾಗಿರುವ ಪೋಲೀಸ್ ಇಲಾಖೆ

ಹಾಸನ ಜಿಲ್ಲೆಯ ಹೊಳೇನರಸೀಪುರ ತಾಲ್ಲೂಕು ಹಳೇಕೋಟೆ ಹೋಬಳಿ ಹರಿಹರಪುರ ಗ್ರಾಮದಲ್ಲಿ ಮಾರ್ಚ್ 24 ಮತ್ತು 25ರಂದು ನಡೆದ ಜಾತ್ರೆಯಲ್ಲಿ ದಲಿತರನ್ನು 'ಸಿಡಿ' ಕಟ್ಟಿ ಆಡಿಸುವ ಅನಾಗರೀಕ ಅಸ್ಪೃಶ್ಯತಾಚರಣೆಯನ್ನು ತಡೆಯುವಂತೆ ಮನವಿ ಮಾಡಿಕೊಂಡವರ ವಿರುದ್ಧವೇ ಕಾನೂನು ಕ್ರಮ ಕೈಗೊಳ್ಳುವ ಬೆದರಿಕೆ ಒಡ್ಡಿರುವ ಪೋಲೀಸು ಇಲಾಖೆಯ ಕ್ರಮವನ್ನು ಜಿಲ್ಲೆಯ ದಲಿತ ಮತ್ತು ಜನಪರ ಸಂಘಟನೆಗಳು ಖಂಡಿಸುತ್ತವೆ.

ಹರಿಹರಪುರ ಗ್ರಾಮದಲ್ಲಿ ಬಹಳ ಹಿಂದಿನಿಂದಲೂ ಉಡುಸಲಮ್ಮದೇವಿ ಜಾತ್ರೆ ಯ ಸಂಧರ್ಭದಲ್ಲಿ ಚಾಕೆನಹಳ್ಳಿ ಗ್ರಾಮದ ಪರಿಶಿಷ್ಟ ಜಾತಿಗೆ ಸೇರಿದ ದಲಿತರ ಬೆನ್ನಿಗೆ ಕಬ್ಬಿಣದ ಸಲಾಕೆ ಚುಚ್ಚಿಸಿ ಬಾಯಿಗೆ ಬೀಗ ಹಾಕಿಸಿ ದೊಡ್ಡ ಕಂಬಕ್ಕೆ ನೇತುಹಾಕಿ 'ಸಿಡಿ' ಸುತ್ತಿಸುವ ಅನಿಷ್ಟ ಪದ್ಧತಿ ನಡೆಯುತ್ತದೆ. ಇದೊಂದು ಅಮಾನುಷ ಆಚರಣೆಯಾಗಿದ್ದು ಸಂಪ್ರದಾಯದ ಹೆಸರಿನಲ್ಲಿ ನಿರ್ಧಿಷ್ಟವಾಗಿ ದಲಿತರನ್ನೇ ಈ ಆಚರಣೆಗೆ ಒಳಪಡಿಸುವ ಮುಖಾಂತರ ಅಸ್ಪೃಶ್ಯತೆ ಆಚರಿಸಲಾಗುತ್ತಿದೆ ಇಂತಹ ಅನಾಗರೀಕ ಆಚರಣೆಯನ್ನು ತಡೆಯಬೇಕೆಂದು ದಲಿತ ಸಂಘಟನೆಗಳು ಜಿಲ್ಲಾಡಳಿತ ತಾಲ್ಲೂಕು ಆಡಳಿತ ಹಾಗೂ ಪೋಲೀಸು ಇಲಾಖೆಗೆ ಮನವಿ ಮಾಡಿಕೊಂಡಿದ್ದವು.

ಇಂತಹ ಮೂಡನಂಬಿಕೆಯ ಅನಿಷ್ಟ ಆಚರಣೆಯನ್ನು ತಡೆಯುವ ಬದಲು ಮಾರ್ಚ್ 25ರಂದು ಹರಿಹರಪುರದಲ್ಲಿ ದಲಿತರು 'ಸಿಡಿ' ಏರಿರುವುದನ್ನು ಧೃಡೀಕರಿಸಿರುವ ಪೋಲೀಸರು ಅನಾಗರೀಕ ಆಚರಣೆಯನ್ನು ತಡೆಯುವಂತೆ



ನಂ/ಎಸ್.ಡಿ.ಪಿ.ಒ/ಹೆಚ್.ಎನ್.ಪಿ/ಹೆಚ್.ಸಿ.63 /2017

ಪೋಲೀಸ್ ಉಪಾಧೀಕ್ಷಕ ರವರ ಕಛೇರಿ
ಹೊಳೆನರಸೀಪುರ ಉಪ-ವಿಭಾಗ
ಹೊಳೆನರಸೀಪುರ ದಿ:03-04-2017

ಹಿಂಬರಹ

ಈ ಮೂಲಕ ನಿಮಗೆ ತಿಳಿಯ ಪಡಿಸುವುದೇನೆಂದರೆ ಅರ್ಜಿದಾರರಾದ ನೀವು ಹೊಳೆನರಸೀಪುರ ತಾಲ್ಲೂಕ್ ಹಳೇಕೋಟೆ ಹೋಬಳಿ ಹರಿಹರಪುರ ಗ್ರಾಮದಲ್ಲಿ 2017 ನೇ ಮಾರ್ಚ್ 24 ಮತ್ತು 25 ರಂದು ಎರಡು ದಿನಗಳ ಕಾಲ ಶ್ರೀ. ಉಡಸಲಮ್ಮ ದೇವಿಯ ಜಾತ್ರಾ ಮಹೋತ್ಸವ ನಡೆಯುತ್ತಿದ್ದು, ಸುತ್ತಮುತ್ತಲ 7 ಗ್ರಾಮಗಳು ಸೇರಿ ಹಬ್ಬ ಆಚರಣೆ ಮಾಡುತ್ತಿರುತ್ತಾರೆ. ಈ ಜಾತ್ರೆಯಲ್ಲಿ ಮೂಢನಂಬಿಕೆ ಭಾಗವಾಗಿ ಚಾಕೇನಹಳ್ಳಿ ಪರಿಶಿಷ್ಟ ಜಾತಿಗೆ ಸೇರಿದ ದಲಿತ ಕುಟುಂಬದ ಬೆನ್ನಿಗೆ ಕಬ್ಬಿಣದ ಸಲಾಕೆಯನ್ನು ಚುಚ್ಚಿಸಿಕೊಂಡು ಹಾಗೂ ಬಾಯಿಗೆ ಸಲಾಕೆಯನ್ನು ಚುಚ್ಚಿ ಹರಿಹರಪುರದ ಜಾತ್ರೆಯಲ್ಲಿ ದೊಡ್ಡಕಂಬಕ್ಕೆ ಕಟ್ಟಿ ನೇತು ಹಾಕಿ ಮೇಲೆ ಏರಿಸಿ ಸುತ್ತಿಸುವ ಕ್ರೂರ ಸಿಡಿ ಎಂಬ ಅನಿಷ್ಟ ಪದ್ಧತಿಯನ್ನು ಹಿಂದಿನಿಂದಲೂ ನಡೆಸಿಕೊಂಡು ಬಂದು ಈಗಲೂ ಮುಂದುವರಿಸಿಕೊಂಡು ಬಂದಿರುವುದು ನಾಗರೀಕ ಸಮಾಜ ತಲೆತಗ್ಗಿಸುವಂತಹ ಅಮಾನುಷ ಆಚರಣೆಯಾಗಿದೆ. ಇದು ದಲಿತರ ಮೇಲಿನ ದೌರ್ಜನ್ಯವಾಗಿದೆ. ಇದನ್ನು ತಡೆಹಿಡಿಯಬೇಕೆಂದು ಇತ್ಯಾದಿಯಾಗಿ ಮಾನ್ಯ ಪೋಲೀಸ್ ಅಧೀಕ್ಷಕರು, ಹಾಸನ ಜಿಲ್ಲೆ, ಹಾಸನ ರವರಿಗೆ ಮನವಿ ಸಲ್ಲಿಸಿರುವುದಾಗಿರುತ್ತದೆ.

ಈ ಸಂಬಂಧ ಮಾನ್ಯ ಪೋಲೀಸ್ ಅಧೀಕ್ಷಕರು, ಹಾಸನ ಜಿಲ್ಲೆ, ಹಾಸನ ರವರು ಮತ್ತು ನಾನು ಸಹ ಖುದ್ದು ಸಿಡಿ ಏರುವ ಜನರೊಂದಿಗೆ ಚರ್ಚಿಸಲಾಗಿ ನಮ್ಮಿಷ್ಟದಂತೆ ಸಿಡಿ ಏರುತ್ತೇವೆಯೇ ಹೊರತು ನಮಗೆ ಯಾರು ಸಹ ಸಿಡಿ ಏರುವ ಬಗ್ಗೆ ಒತ್ತಾಯ ಮಾಡಿರುವುದಿಲ್ಲ. ಇದರಲ್ಲಿ ಬೇರೆಯವರ ಒತ್ತಾಯವಾಗಲಿ ಅಥವ ಪ್ರಭಾವವಾಗಲಿ ಇರುವುದಿಲ್ಲ, ನಾವು ಹರಿಹರಪುರ ಗ್ರಾಮದಲ್ಲಿ ನಡೆಯುವ ಶ್ರೀ. ಉಡಸಲಮ್ಮ ದೇವರ ಜಾತ್ರಾ ಮಹೋತ್ಸವದಲ್ಲಿ ಪ್ರತಿ ವರ್ಷದಂತೆ ಈ ವರ್ಷವು ಸಹ ಸ್ವಯಂ ಪ್ರೇರಣೆಯಿಂದ ಸಿಡಿ ಪದ್ಧತಿ ಆಚರಣೆ ಮಾಡುತ್ತೇವೆಂದು ಹೇಳಿದ್ದು. ಅವರಿಗೆ ತಿಳುವಳಿಕೆ ಹೇಳಿದರೂ ಸಹ ಒಪ್ಪದೇ ದಿ:25-03-2017 ರಂದು ಜಾತ್ರೆ ಸಮಯದಲ್ಲಿ ಸಿಡಿ ಏರಿ ಹಬ್ಬ ಆಚರಣೆ ಮಾಡಿರುತ್ತಾರೆ. ಸಿಡಿ ಪದ್ಧತಿಯನ್ನು ಸ್ವತಃ ಅವರೆ ಮಾಡಿರುತ್ತಾರೆಯೇ ಹೊರತು ಯಾರು ಸಹ ಬಲವಂತವಾಗಿ ಮಾಡಿಸಿರುವುದು ಕಂಡು ಬಂದಿಲ್ಲ.

ದಲಿತ ಹಕ್ಕುಗಳ ಸಮಿತಿಯವರಾದ ನೀವುಗಳು ಈ ತರಹದ ಆಚರಣೆಗಳು ನಡೆಯುವ ಹಬ್ಬಗಳು ಸಮೀಪಿಸುವ ಸಮಯದಲ್ಲಿ ಈ ರೀತಿಯ ಗೊಂದಲ ಸೃಷ್ಟಿ ಮಾಡುವುದನ್ನು ಬಿಟ್ಟು ನೀವುಗಳು ಎಲ್ಲೆಲ್ಲಿ ಈ ರೀತಿಯ ಆಚರಣೆಗಳು ನಡೆಯುತ್ತವೆ ಎಂಬ ಬಗ್ಗೆ ಮಾಹಿತಿ ಪಡೆದು ಒಂದು ವರ್ಷ ಮುಂಚಿತವಾಗಿ ಅಲ್ಲಿಗೆ ಭೇಟಿ ನೀಡಿ ಅವರೊಂದಿಗೆ ಚರ್ಚಿಸಿ ಅವರ ಮನಒಲಿಸಿ ಇಂತಹ ಪದ್ಧತಿಯಿಂದ ದೂರ ಇರುವಂತೆ ತಿಳುವಳಿಕೆ ನೀಡುವುದು. ಒಂದು ವೇಳೆ ಅನಗತ್ಯವಾಗಿ ಹಬ್ಬ ಸಮೀಪಿಸುವ ಸಮಯದಲ್ಲಿ ಸ್ಥಳಕ್ಕೆ ಭೇಟಿ ನೀಡಿ ಗೊಂದಲ ಉಂಟು ಮಾಡಿ ಸ್ಥಳದಲ್ಲಿ ಯಾವುದೇ ಅಹಿತಕರ ಘಟನೆಗಳು ಸಂಭವಿಸಲು ಕಾರಣರಾದರೆ ನಿಮ್ಮ ಮೇಲೆ ಕಾನೂನು ರೀತಿ ಕ್ರಮ ಕೈಗೊಳ್ಳಲಾಗುವುದೆಂದು ಹೇಳಿ ನಿಮ್ಮ ಅರ್ಜಿಯನ್ನು ಮುಕ್ತಾಯ ಮಾಡಲಾಗಿದೆ ಎಂದು ತಿಳಿಯ ಬಯಸುತ್ತೇನೆ.

ಸಹಾಯಕ ಪೋಲೀಸ್ ಅಧೀಕ್ಷಕರು
ಹೊಳೆನರಸೀಪುರ ಉಪ-ವಿಭಾಗ
ಹೊಳೆನರಸೀಪುರ

ರವರಿಗೆ
1. ಶ್ರೀ. ರಾಜು. ಎಸ್.ಎ. ದಲಿತ ಹಕ್ಕುಗಳ ಸಮಿತಿ, ಕರ್ನಾಟಕ, ಹೊಳೆನರಸೀಪುರ ತಾಲ್ಲೂಕ್ ಸಂಚಾಲಕರು
2. ಶ್ರೀ. ವೃಷ್ಟಿ, ಎಂ.ಜಿ. ದಲಿತ ಹಕ್ಕುಗಳ ಸಮಿತಿ, ಕರ್ನಾಟಕ, ಜಿಲ್ಲಾ ಸಂಚಾಲಕರು, ಹಾಸನ ಜಿಲ್ಲೆ, ಹಾಸನ.
3. ಶ್ರೀ. ನಾರಾಯಣದಾಸ್, ಹಿರಿಯ ದಲಿತ ಮುಖಂಡರು ಮತ್ತು ಕೆ.ಡಿ.ಪಿ ಸದಸ್ಯರು.

ಪ್ರತಿಯನ್ನು : ಮಾನ್ಯ ಪೋಲೀಸ್ ಅಧೀಕ್ಷಕರು, ಹಾಸನ ಜಿಲ್ಲೆ, ಹಾಸನ ರವರಿಗೆ ಮಾಹಿತಿಗಾಗಿ ನಿವೇದಿಸಿದೆ.

ಮನವಿ ಮಾಡಿಕೊಂಡಿದ್ದವರ ವಿರುದ್ಧವೇ ಕಾನೂನು ಕ್ರಮ ಕೈಗೊಳ್ಳುವ ಕುರಿತು ಹಿಂಬರಹ ನೀಡುವ ಮುಖಾಂತರ ಹೊಳೆನರಸಿಪುರ ಉಪ ವಿಭಾಗದ ಮಾನ್ಯ ಸಹಾಯಕ ಪೋಲೀಸ್ ಅಧೀಕ್ಷಕರು ದಲಿತ ವಿರೋಧಿ ಹಾಗೂ ಮೂಡನಂಬಿಕೆಗಳ ಆಚರಣೆಯ ಪರವಾಗಿರುವವರು ಎನ್ನುವುದನ್ನು ನಿರೂಪಿಸಿದ್ದಾರೆ.

ಮಾನ್ಯ ಸಹಾಯಕ ಪೋಲೀಸ್ ಅಧೀಕ್ಷಕರು ತಮ್ಮ ಹಿಂಬರಹದಲ್ಲಿ ತಿಳಿಸಿರುವಂತೆ ಜಾತ್ರೆಯಲ್ಲಿ ದಲಿತರು ಸ್ವಯಂ ಪ್ರೇರಣೆಯಿಂದ 'ಸಿಡಿ' ಏರಿದ್ದಾರೆಂದೂ ಅವರು ಯಾವುದೇ ಪ್ರಚೋದನೆಗೆ ಒಳಗಾಗಿಲ್ಲವೆಂದು ತಿಳಿಸಿರುತ್ತಾರೆ. ಅಂದರೆ, ಬಾಲ್ಯ ವಿವಾಹ, ವರದಕ್ಷಿಣೆ, ಮಲ ಹೊರುವುದು, ಅಸ್ಪೃಶ್ಯತೆ, ಜಾತಿತಾರತಮ್ಯದಂತಹ ಪ್ರಕರಣಗಳು ನಡೆಯುವಾಗ ಈ ಪ್ರಕರಣಗಳಲ್ಲಿ ಭಾಗಿಯಾಗಿರುವವರು 'ನಾವು ಸ್ವಯಂ ಪ್ರೇರಣೆಯಿಂದ' ಬಾಲ್ಯ ವಿವಾಹ, ವರಧಕ್ಷಿಣೆ, ಮಲ ಹೊರುವುದು, ಅಸ್ಪೃಶ್ಯತೆಯಂತಹ ಆಚರಣೆಯಲ್ಲಿ ತೊಡಗಿದ್ದೇವೆ ಎಂದರೆ ಪೋಲೀಸರು ಸುಮ್ಮನಿರುತ್ತಾರೆ ಎಂದಾಯಿತು. ಜೊತೆಗೆ ಇಂತಹ ಅನಿಷ್ಟಗಳು ನಡೆಯದಂತೆ ತಡೆಯಬೇಕೆಂದು ಮನವಿ ಮಾಡಿಕೊಂಡವರ ವಿರುದ್ಧವೇ ಕಾನೂನು ಕ್ರಮ ಕೈಗೊಳ್ಳುತ್ತಾರೆ ಎಂದಾಯಿತು. ಅನಿಷ್ಟ, ಅನಾಗರೀಕ ಆಚರಣೆಗಳು ನಡೆಯದಂತೆ ತಡೆಯಬೇಕಾದ ಪೋಲೀಸರೇ ಇಂತಹ ಕೃತ್ಯಗಳನ್ನು ಸಮರ್ಥಿಸಿಕೊಂಡು ದೂರುದಾರರ ವಿರುದ್ಧವೇ ಕಾನೂನು ಕ್ರಮಕ್ಕೆ ಮುಂದಾದಲ್ಲಿ ನಾಗರೀಕ ಸಮಾಜದಲ್ಲಿ ನಡೆಯುವ ಅನಿಷ್ಟ ಆಚರಣೆಗಳನ್ನು ನಿಲ್ಲಿಸುವುದೆ ಹೇಗೆ ಹಾಗೂ ಅದರ ವಿರುದ್ಧ ಯಾರಾದರೂ ದೂರು ನೀಡಲು ಸಾಧ್ಯವೇ ಎನ್ನುವುದನ್ನು ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿಗಳು ಉತ್ತರಿಸಬೇಕು.

ಪೋಲೀಸ್ ಇಲಾಖೆಯ ಇಂತಹ ಬೇಜವಾಬ್ದಾರಿ ವರ್ತನೆಯನ್ನು ನಾವು ಖಂಡಿಸುತ್ತೇವೆ. ಜಿಲ್ಲಾ ಪೋಲೀಸ್ ಅಧೀಕ್ಷಕರು ಈ ಬಗ್ಗೆ ಸ್ಪಷ್ಟೀಕರಣ ನೀಡಬೇಕು ಇಲ್ಲದಿದ್ದರೆ ಪೋಲೀಸು ಇಲಾಖೆಯ ಇಂತಹ ಬೇಜವಾಬ್ದಾರಿ ನಡವಳಿಕೆ ಹೇಳಿಕೆಗಳ ವಿರುದ್ಧವೇ ಹೋರಾಡುವ ಅನಿವಾರ್ಯತೆ ಎದುರಾಗಲಿದೆ. ಹಾಗೂ ಈಗ ಎಲ್ಲೆಡ ಜಾತ್ರೆಗಳು ನಡೆಯುತ್ತಿದ್ದು, ಹಲವಾರು ಕಡೆಗಳಲ್ಲಿ ಇಂತಹ ಅನಿಷ್ಟ ಆಚರಣೆಗಳು ನಡೆಯುತ್ತಿರುವ ವರದಿಯಿದ್ದು ಇವುಗಳ ತಡೆಗೆ ಜಿಲ್ಲಾಡಳಿತ ಸೂಕ್ತ ಕ್ರಮ ಕೈಗೊಳ್ಳಬೇಕು ಇಲ್ಲದಿದ್ದರೆ ಜಿಲ್ಲೆಯ ಎಲ್ಲಾ ಜನಪರ ಸಂಘಟನೆಗಳು ಜಿಲ್ಲಾಡಳಿತದ ವಿರುದ್ಧ ಹೋರಾಟ ನಡೆಸಬೇಕಾದ ಅನಿವಾರ್ಯತೆ ಎದುರಾಗಲಿದೆ.

(12/04/2017 ರಂದು ನಡೆದ ಜಂಟಿ ಸುದ್ದಿಗೋಷ್ಠಿಯಲ್ಲಿ ಬಿಡುಗಡೆ ಮಾಡಲಾದ ಪತ್ರಿಕಾ ಹೇಳಿಕೆ,) **– ಧರ್ಮೇಶ್**

ಸರ್ಕಾರದ ಆದೇಶದಂತೆ ಬಗರ್‌ಹುಕುಂ ಸಾಗುವಳಿಯನ್ನು ಸಕ್ರಮ ಮಾಡಲು ಕೋರಿ

ಹಾಸನ ತಾಲ್ಲೂಕಿನಲ್ಲಿ ಹಲವು ವರ್ಷಗಳಿಂದ ಬಗರ್‌ಹುಕುಂ ಸಾಗುವಳಿ ಮಾಡಿಕೊಂಡು ಬಂದಿರುವ ಸಾವಿರಾರು ಜನ ರೈತರು ಸಾಗುವಳಿಯ ಸಕ್ರಮಕ್ಕಾಗಿ ಬಗರ್‌ಹುಕುಂ ಸಕ್ರಮೀಕರಣ ಸಮಿತಿಯ ಮುಂದೆ ಅರ್ಜಿ ನಮೂನೆ 50 ಮತ್ತು 53 ರಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ಆದರೆ ಈ ಭೂಮಿಯನ್ನು ಮಂಜೂರುಮಾಡಲು ಕಾನೂನಿನ ತೊಡಕುಗಳು ಇದ್ದ ಕಾರಣ ಈ ಅರ್ಜಿಗಳನ್ನು ವಿಲೇವಾರಿಮಾಡದೆ ಇಡಲಾಗಿತ್ತು. ಕರ್ನಾಟಕ ಪ್ರಾಂತ ರೈತ ಸಂಘ ಹಲವು ವರ್ಷಗಳಿಂದ ನಡೆಸಿದ ಹೋರಾಟದ ಫಲವಾಗಿ ಈಗ ಸರ್ಕಾರ ಆ ಕಾನೂನಿನ ತೊಡಕಿಗೆ ತಿದ್ದುಪಡಿ ತಂದು ಬಾಕಿ ಇರುವ ಅರ್ಜಿಗಳನ್ನು ಪರಿಶೀಲಿಸಿ ಸಕ್ರಮ ಮಾಡಲು ಆದೇಶ ಮಾಡಿದೆ. (ರಾಜ್ಯ ಸರ್ಕಾರದ ಆದೇಶದ ಪ್ರತಿಯನ್ನು ಲಗತಿಸಲಾಗಿದೆ.)

ಆದ್ದರಿಂದ ತಾವುಗಳು ಈ ಕೂಡಲೇ ಹಾಸನ ತಾಲ್ಲೂಕಿನಲ್ಲಿ ಸಾಗುವಳಿ ಮಾಡುತ್ತಿರುವ ಅರ್ಜಿದಾರರಿಗೆ ಬಗರ್‌ಹುಕುಂ ಸಕ್ರಮಕ್ಕೆ ವ್ಯವಸ್ಥೆ ಮಾಡಬೇಕು. ಜೊತೆಗೆ ಈ ಹಿಂದೆ ಸಕ್ರಮೀಕರಣ ಸಮಿತಿ ಮುಂದೆ ಸಕಾರಣವಿಲ್ಲದೆ ತಿರಸ್ಕರಿಸಲ್ಪಟ್ಟ ಅರ್ಜಿಗಳನ್ನು ಮತ್ತೆ ಪುನರ್ ಪರಿಶೀಲಿಸಬೇಕು ಜೊತೆಗೆ ಹತ್ತಾರು ವರ್ಷಗಳಿಂದ ಸಾಗುವಳಿ ಮಾಡುತ್ತಿದ್ದರೂ ಇದುವರೆಗು ಅರ್ಜಿಸಲ್ಲಿಸಲು ಅವಕಾಶವಾಗದಿರುವವರಿಗೆ



ಕೂಡಲೇ ಹೊಸದಾಗಿ ಅರ್ಜಿಗಳನ್ನು ಹಾಕಲು ಅವಕಾಶ ಮಾಡಿಕೊಡಬೇಕೆಂದು ಈ ಮೂಲಕ ವಿನಂತಿಸುತ್ತೇವೆ.

ಹಾಸನ ತಾಲ್ಲೂಕಿನ ಕೆಲವು ಪ್ರದೇಶಗಳಲ್ಲಿ ಗೋಮಾಳವನ್ನು ಹೊರತುಪಡಿಸಿದ ಸಾಲಗಾಮೆ ಹೋಬಳಿಯ ತಿರುಮಲದೇವರ ಗುಡ್ಡ ಕಾವಲಿನಲ್ಲಿ ರೈತರು ಸಾಗುವಳಿ ಮಾಡಿಕೊಂಡು ಬಂದಿದ್ದು ಸಾಗುವಳಿ ಚೀಟಿಗಳನ್ನು ಪಡೆದಿದ್ದರೂ ಅವುಗಳನ್ನು ಪೋಡಿ ಮಾಡಿ ದುರಸ್ತು ಮಾಡಬೇಕಾಗಿದೆ.

ಬಗರ್ ಹುಕುಂ ಸಾಗುವಳಿಗೆ ಸಂಭಂದಿಸಿದ ಯಾವುದೇ ಅರ್ಜಿಗಳನ್ನು ವಿಲೇವಾರಿ ಮಾಡುವಾಗ ಅರ್ಜಿದಾರರ ಅನುಭವವನ್ನು ಪರಿಗಣಿಸಲು ಗ್ರಾಮ ಸಭೆಗಳನ್ನು ನಡೆಸಬೇಕೆಂದು ಒತ್ತಾಯಿಸುತ್ತೇವೆ.

ಎಚ್.ಆರ್. ನವೀನ್‌ಕುಮಾರ್

ಮಾಂಸ ಮೀನು ಮಾರಾಟ ನಿಷೇಧ : ಡಾ: ಅಂಬೇಡ್ಕರ್ ಅವರಿಗೆ ಅವಮಾನ;

ದಾವಣಗೆರೆ ಮಹಾನಗರದಲ್ಲಿ ಪಾಲಿಕೆ ಉಪ ಆಯುಕ್ತರು ನಾಳೆ ಡಾ; ಬಾಬಾ ಸಾಹೇಬರ ಅಂಬೇಡ್ಕರ್ ದಿನಾಚರಣೆ ಅಂಗವಾಗಿ ಪಾಲಿಕೆ ವ್ಯಾಪ್ತಿಯಲ್ಲಿ ಮಾಂಸ ಮತ್ತು ಮೀನು ಮಾರಾಟದ ಮೇಲೆ ನಿಷೇಧ ಹೇರುವ ಮೂಲಕ ಬಹುಜನರ ಆಹಾರ ಸೇವನೆ ಮೇಲೆ ಗದಾಪ್ರಹಾರ ನಡೆಸಿರುವ ಕ್ರಮ ಖಂಡನೀಯ.

ರಾಷ್ಟ್ರೀಯ ನಾಯಕರ ದಿನಾಚರಣೆಯ ಹಿಂದಿರುವ ಉದ್ದೇಶವು ಅವರು ಜೀವನದಲ್ಲಿ ಅಳವಡಿಸಿಕೊಂಡಿದ್ದ ತತ್ವ ಮತ್ತು ಆದರ್ಶಗಳು ಇವತ್ತಿನ ಪೀಳಿಗೆಯ ಜನರಿಗೆ ಪ್ರೇರಣೆಯಾಗಿರಲಿ ಎಂಬುದಾಗಿರುತ್ತದೆ. ಆ ಬಗ್ಗೆ ನಮ್ಮ ಆಡಳಿತವು ವಿವಿಧ ಪ್ರಕಾರದ ಕಾರ್ಯಕ್ರಮಗಳನ್ನು ರೂಪಿಸಿ ಅಂತಹ ನಾಯಕರ ಆದರ್ಶಗಳನ್ನು ಪ್ರಚಾರಪಡಿಸಬೇಕೆ ಹೊರತು ಅನಗತ್ಯವಾಗಿ ಜನರ ಆಹಾರದ ಪ್ರಶ್ನೆಯನ್ನು ಮುಂದು ಮಾಡಿ ಜನರಲ್ಲಿ ಸಸ್ಯಹಾರವೆಂದರೆ ಶ್ರೇಷ್ಠ ಮಾಂಸಹಾರವೆಂದರೆ ಅದು ನಿಕೃಷ್ಟ ಎನ್ನುವಂತಹ ಮನೋಭಾವನೆಯನ್ನು ಭಿತ್ತಲು ಪ್ರಯತ್ನಿಸಿರುವುದು ಸರಿಯಲ್ಲ. ಅದರಲ್ಲೂ ಈ ದೇಶದಲ್ಲಿ ಇರುವ ಕೋಟ್ಯಾಂತರ ಸಂಖ್ಯೆಯ ಡಾ: ಅಂಬೇಡ್ಕರ್ ಅನುಯಾಯಿಗಳಿಗಂತೂ ಅವರು ಹುಟ್ಟಿನಿಂದಲೂ ಮಾಂಸಹಾರಿಗಳು. ಹೀಗಿರುವಾಗ ದಾವಣಗೆರೆ ಮಹಾನಗರದಲ್ಲಿ ಪಾಲಿಕೆಯು ಕೈಗೊಂಡ ಇಂತಹ ನಿರ್ಧಾರವು ಬಹುಜನರ ವಿರೋಧಿಯಾಗಿದೆ ಮಾತ್ರವಲ್ಲ ಅದು ಸ್ವತಃ ಬಾಬಾ ಸಾಹೇಬರ ದಿನಾಚರಣೆಗೆ ಮತ್ತು ಅವರು ಪ್ರತಿಪಾದಿಸಿದ ಮೌಲ್ಯಗಳಿಗೆ ಮಾಡಿದ ಅಗೌರವಾಗಿದೆ. ಆದ್ದರಿಂದ ಕೂಡಲೇ ಈ ನಿರ್ಧಾರವನ್ನು ಪಾಲಿಕೆ ಆಡಳಿತ ಹಿಂಪಡೆಯಬೇಕು.

– ಮಹಾಂತೇಶ್ ಕೆ

ಶಾಸಕರ ಮನೆಯ ಮುಂದೆ ನಿವೇಶನ ರಹಿತರ ಧರಣಿ ಸತ್ಯಾಗ್ರಹ ಸಿಪಿಐ(ಎಂ) ಬೆಂಬಲ

ಉಡುಪಿ ಜಿಲ್ಲೆಯ 3 ತಾಲೂಕುಗಳಲ್ಲಿ ಸುಮಾರು 21,000ಕ್ಕೂ ಹೆಚ್ಚು ಜನರು ನಿವೇಶನಕ್ಕಾಗಿ ಅರ್ಜಿ ಸಲ್ಲಿಸಿರುತ್ತಾರೆ. ಇದಲ್ಲದೆ ಸರ್ಕಾರದಿಂದ ಪ್ರಕಟವಾದ 94 ಸಿ ಮತ್ತು 94 ಸಿಸಿ ಅಡಿಯಲ್ಲಿ ಹಲವಾರು ಅರ್ಜಿ ಹಾಕಿರುತ್ತಾರೆ. ಆದರೆ ಈವರೆಗೆ ಕೆಲವೇ ಕೆಲವು ಅರ್ಜಿಗಳನ್ನು ಮಾತ್ರ ಪುರಸ್ಕರಿಸಲಾಗಿದೆ.

ನಿವೇಶನ ರಹಿತರು ಬಹುತೇಕ ಬಡವರೇ ಆಗಿರುತ್ತಾರೆ. ಹೆಚ್ಚಿಗೆ ಆದಾಯ ಇರುವುದಿಲ್ಲ. ಆದಾಯದ ಶೇ 50ಕ್ಕಿಂತ ಹೆಚ್ಚಿಗೆ ಬಾಡಿಗೆ ತೆರಬೇಕಾಗುತ್ತದೆ. ಉಳಿದ ಹಣದಲ್ಲಿ ಊಟ, ಆರೋಗ್ಯ, ಮಕ್ಕಳಿಗೆ ಶಿಕ್ಷಣ ನಿಭಾಯಿಸುವುದು ಕಷ್ಟ. ಆದ್ದರಿಂದ ನಿವೇಶನ ರಹಿತರಿಗೆ ನಿವೇಶನ ಒದಗಿಸುವುದು ಸರಕಾರದ ಮತ್ತು ಜನಪ್ರತಿನಿಧಿಗಳ ಕರ್ತವ್ಯ. ಆದರೆ ಬಹುತೇಕ ಜನಪ್ರತಿನಿಧಿಗಳು ಈ ಬಗ್ಗೆ ಗಮನ ನೀಡುತ್ತಿಲ್ಲ. ಬದಲಾಗಿ ಹೋರಾಟ ಮಾಡುವವರ ಕುರಿತು ನಿಂದಿಸುವ, ವ್ಯಂಗ್ಯ ಮಾಡುವ ಕೆಲಸ ಮಾಡುತ್ತಿದ್ದಾರೆ.

ಈ ಎಲ್ಲ ಹಿನ್ನೆಲೆಯಲ್ಲಿ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ, ಕರ್ನಾಟಕ ಪ್ರಾಂತ ರೈತ ಸಂಘ ಮತ್ತು ಸಿಐಟಿಯು ಉಡುಪಿ ಜಿಲ್ಲಾ ಘಟಕಗಳು ಶಾಸಕರ ಮನೆ ಮುಂದೆ ಧರಣಿ ಸತ್ಯಾಗ್ರಹ ನಡೆಸಲು ನಿರ್ಧರಿಸಿವೆ. ಇದರ ಪ್ರಥಮ ಹಂತವಾಗಿ ನಾಳೆ (11.04.2017) ಕುಂದಾಪುರ ವಿಧಾನಸಭಾ ಕ್ಷೇತ್ರ ಶಾಸಕರ ಮನೆಯ ಮುಂದೆ ಹಾಗೂ 18.04.2017ರಂದು ಬೈಂದೂರು ವಿಧಾನಸಭಾ ಕ್ಷೇತ್ರದ ಶಾಸಕರ ಮನೆಯ ಮುಂದೆ ಧರಣಿ ನಡೆಸಲು ನಿರ್ಧರಿಸಿರುತ್ತಾರೆ.

ನಿವೇಶನ ರಹಿತರ ಪರವಾಗಿ ನಡೆಯುತ್ತಿರುವ ಈ ಧರಣಿ ಸತ್ಯಾಗ್ರಹಕ್ಕೆ ಸಿಪಿಐ(ಎಂ) ಉಡುಪಿ ಜಿಲ್ಲಾ ಸಮಿತಿ ಸಂಪೂರ್ಣ ಬೆಂಬಲ ಸೂಚಿಸುತ್ತದೆ ಹಾಗೂ ವಿಧಾನಸಭೆಯಲ್ಲಿ ಶಾಸಕರು ನಿವೇಶನ ರಹಿತರಿಗೆ ನಿವೇಶನ ಒದಗಿಸುವ ಕುರಿತು ಸರಕಾರವನ್ನು ತರಾಟೆಗೆ ತೆಗೆದುಕೊಳ್ಳಬೇಕೆಂದು ಆಗ್ರಹಿಸುತ್ತದೆ.

ಬಾಲಕೃಷ್ಣ ಶೆಟ್ಟಿ
ಉಡುಪಿ ಜಿಲ್ಲಾ ಕಾರ್ಯದರ್ಶಿ

ತೀರ್ಪು ಜಾರಿ ಮಾಡದಿದ್ದರೆ ನಾನೂ ನಿಮ್ಮ ಜತೆ ಹೋರಾಟಕ್ಕೆ ಬರುವೆ : ನ್ಯಾ. ಹೆಗಡೆ

ಹೀಗೆಂದವರು ವಿಶ್ರಾಂತ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಸಂತೋಷ ಹೆಗಡೆ ಅವರು. "ಸಮಾನ ಕೆಲಸಕ್ಕೆ ಸಮಾನ ವೇತನ : ಸರ್ವೋಚ್ಚ ನ್ಯಾಯಾಲಯದ ಐತಿಹಾಸಿಕ ತೀರ್ಪು" ಕುರಿತು ವಿಚಾರ ಸಂಕಿರಣವನ್ನು 9 ಏಪ್ರಿಲ್ 2017 ರಂದು, ಬೆಂಗಳೂರಿನ ಜೈನ್ ಕಾಲೇಜು ಸಭಾಂಗಣದಲ್ಲಿ ಉದ್ಘಾಟಿಸಿ ಮಾತನಾಡುತ್ತಿದ್ದರು. ಅವರು ಅಕ್ಟೋಬರ್ 21, 2016 ರಂದು ಸರ್ವೋಚ್ಚ ನ್ಯಾಯಾಲಯ ಕೊಟ್ಟ ತೀರ್ಪಿನ ಪ್ರಮುಖ ಅಂಶಗಳನ್ನು (ಬಾಕ್ಸಿನಲ್ಲಿ ಕೊಡಲಾಗಿದೆ) ವಿವರಿಸಿ ಅದರ ಜಾರಿಯ ಅಗತ್ಯದ ಬಗ್ಗೆ ಮಾತನಾಡಿದರು. ಮುಖ್ಯ ಅತಿಥಿಗಳಾಗಿದ್ದ ಖ್ಯಾತ ಹಿರಿಯ ವಕೀಲರಾದ ಕೆ. ಸುಬ್ಬರಾವ್, ಹಿರಿಯ ಕಾರ್ಮಿಕ ಮುಖಂಡರಾದ ವಿ.ಜೆ.ಕೆ. ನಾಯರ್ ಹಾಗೂ ಆಂಧ್ರ ಪ್ರದೇಶ ಗುತ್ತಿಗೆ ನೌಕರರ



ಫೆಡರೇಶನಿನ ಅಧ್ಯಕ್ಷರಾದ ಎ.ವಿ. ನಾಗೇಶ್ವರ ರಾವ್ ವಿಚಾರ ಸಂಕಿರಣದ ವಿಷಯದ ಹಲವು ಆಯಾಮಗಳ ಬಗ್ಗೆ ಮಾತನಾಡಿದರು. "ಸರ್ಕಾರಗಳ ಖಾಯಂ ಹುದ್ದೆಗಳಿಗೆ ಖಾಯಮೇತರ ನೌಕರರ ಸೇರ್ಪಡೆ ಏಕೆ?" ಮತ್ತು "ಗುತ್ತಿಗೆ ಹಾಗೂ ಹೊರ ಮೂಲ ನೌಕರರ ಸೇವೆ ಕುರಿತು ಕಾನೂನಿನಲ್ಲಿರುವ ಅಂಶಗಳು" ಎಂಬ ಬಗೆಗೂ ವಿಷಯ ಮಂಡನೆ ಮಾಡಲಾಯಿತು. ಸಿಐಟಿಯು ಕರ್ನಾಟಕ ಅಧ್ಯಕ್ಷರಾದ ಎಸ್ ವರಲಕ್ಷ್ಮಿ ಅಧ್ಯಕ್ಷತೆ ವಹಿಸಿದ್ದರು.

ಸಿಐಟಿಯು ಕರ್ನಾಟಕ ಕಾರ್ಯದರ್ಶಿಗಳಾದ ಕೆ. ಎನ್. ಉಮೇಶ್, ಮಾಜಿ ಡೆಪ್ಯುಟಿ ಲೇಬರ್ ಕಮಿಶನರ್ ಹಿಟ್ಟಂಗಿ, ರಾಜ್ಯ ಸರಕಾರಿ ನೌಕರರ ನಾಯಕ ಮಹಾದೇವಯ್ಯ ಮಠಪತಿ, ಕರ್ನಾಟಕ ರಾಜ್ಯ ವಿದ್ಯುತ್ ಕಾರ್ಮಿಕರ ಫೆಡರೇಶನ್ ಅಧ್ಯಕ್ಷರಾದ ಸತ್ಯಬಾಬು, ವಿಚಾರ ಸಂಕಿರಣ ಮತ್ತು ಸಮಾವೇಶದಲ್ಲಿ ಭಾಗವಹಿದ್ದರು. ಈ ವಿಚಾರ ಸಂಕಿರಣವನ್ನು ರಾಜ್ಯ ಸರಕಾರದ ಅಡಿಯಲ್ಲಿ ದುಡಿಯುವ ಗುತ್ತಿಗೆ–ಹೊರಗುತ್ತಿಗೆ ಹಾಗೂ ಅತಿಥಿ ಉಪನ್ಯಾಸಕರ ಸಂಗಟನೆಗಳು ಸಿಐಟಿಯು ಕರ್ನಾಟಕದ ಸಹಯೋಗದೊಂದಿಗೆ ಸಂಘಟಿಸಿತ್ತು.

ವಿಚಾರ ಸಂಕಿರಣ ಮತ್ತು ಸಮಾವೇಶದಲ್ಲಿ ಅಬಕಾರಿ, ರೇಷ್ಮೆ, ಕೃಷಿ ಇಲಾಖೆಗಳ; 108, ಜಲಮಂಡಳಿ, **KPCTL, KPTL, ES-COM** ಗಳ; ಗುಲ್ಬರ್ಗ, ಕೃಷಿ ವಿ.ವಿ.ಗಳ; ಎಂ.ಎಸ್ ಬಿಲ್ಡಿಂಗ್ ಹಾಗೂ ವಿಕಾಸಸೌಧದಲ್ಲಿ ಹಲವು ರೀತಿಯ ಕೆಲಸಗಳಲ್ಲಿ ತೊಡಗಿರುವ – ಗುತ್ತಿಗೆ–ಹೊರಗುತ್ತಿಗೆ ನೂರಾರು ನೌಕರರು ಭಾಗವಹಿಸಿದ್ದರು. ಸಮಾವೇಶದಲ್ಲಿ ಸತ್ಯಬಾಬು, ಧರ್ಮೇಶ್ ಸೇರಿದಂತೆ 7 ಸಂಚಾಲಕರನ್ನು 25 ಸದಸ್ಯರ ಸಮನ್ವಯ ಸಮಿತಿಯನ್ನು ಆರಿಸಲಾಯಿತು. ಸಮಾವೇಶ ನಿರ್ಣಯವೊಂದನ್ನು ಅಂಗೀಕರಿಸಿತು. ಈ ನಿರ್ಣಯದ ಪೂರ್ಣಪಾಠವನ್ನು ಇಲ್ಲಿ ಕೊಡಲಾಗಿದೆ.

"ಸಮಾನ ಕೆಲಸಕ್ಕೆ ಸಮಾನ ವೇತನ ಪ್ರತಿ ನೌಕರನ ಹಕ್ಕು"

"ಸಮಾನ ಕೆಲಸಕ್ಕಾಗಿ ನೇಮಕಗೊಂಡಿರುವ ಒಬ್ಬ ನೌಕರನಿಗೆ ಅದಕ್ಕೆ ಸಮಾನವಾದ ಕರ್ತವ್ಯ ಮತ್ತು ಜವಾಬ್ದಾರಿ ನಿರ್ವಹಿಸುತ್ತಿರುವ ಮತ್ತೊಬ್ಬನಿಗಿಂತ ಕಡಿಮೆ ವೇತನ ನೀಡುವುದು, ಅದರಲ್ಲೂ ಒಂದು ಕಲ್ಯಾಣ ರಾಜ್ಯದಲ್ಲಿ ಸರಿಯಲ್ಲ. ಅಂತಹ ಕ್ರಮ ಹೀನಾಯವಾಗಿರುವಂತಹದು ಮಾತ್ರವಲ್ಲ ಅದು ಮನುಷ್ಯನ ಘನತೆಯ ತಳಹದಿಯ ಮೇಲೆಯೇ ಧಾಳಿ ಮಾಡುವಂತಹದ್ದಾಗಿದೆ. ಯಾರನ್ನಾದರೂ ಕಡಿಮೆ ವೇತನಕ್ಕಾಗಿ ದುಡಿಯಲು ನಿರ್ಬಂಧಿಸಿದರೆ, ಅದನ್ನು ಆತ ಸ್ವಇಚ್ಛೆಯಿಂದ ಒಪ್ಪಿಕೊಳ್ಳುವುದಿಲ್ಲ. ಬದಲಾಗಿ ಅವನು/ ಅವಳು ತಮ್ಮ ಕುಟುಂಬಕ್ಕೆ ಆಹಾರ ಮತ್ತು ವಸತಿ ಒದಗಿಸಬೇಕಾದ ಅನಿವಾರ್ಯತೆಯಿಂದ, ತಮ್ಮ ಸ್ವಗೌರವ ಹಾಗೂ ಘನತೆಯ ವೆಚ್ಚದಲ್ಲಿ ಮಾಡಬೇಕಾಗುತ್ತದೆ. ತಮ್ಮಂತೆ ಕೆಲಸ ನಿರ್ವಹಿಸುವ ಇತರರಿಗಿಂತ ಕಡಿಮೆ ವೇತನ ನೀಡುವ ಯಾವುದೇ ಕೆಲಸವೂ ದರ್ಪದ ಸ್ಥಾನದಿಂದ ಹೊರ ಹೊಮ್ಮುವ, ಶೋಷಣಾತ್ಮಕ ಗುಲಾಮಗಿರಿಯನ್ನು ಹೊಂದಿರುತ್ತದೆ. ನಿಸ್ಸಂದೇಹವಾಗಿ ಅಂತಹ ಕೆಲಸವು ಬರ್ಬರ ದಮನಕಾರಿ ಮತ್ತು ದಬ್ಬಾಳಿಕೆಯ ಕ್ರಮ. ಏಕೆಂದರೆ ಅದು ಸ್ವಯಂ ಪ್ರೇರಿತವಲ್ಲದ ಅಡಿಯಾಳುತನವನ್ನು ಒಳಪಟ್ಟಿದೆ. ಭಾರತ ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಹಕ್ಕುಗಳ ಅಂತರಾಷ್ಟ್ರೀಯ ಒಡಂಬಡಿಕೆ 1996 ಕ್ಕೆ ಸಹಿ ಹಾಕಿರುವ ಕಾರಣ, ಸಂವಿಧಾನ ವಿಧಿ 141 ಕ್ಕೆ ಅನುಗುಣವಾಗಿ ಈ ನಿಬಂಧನೆಗಳನ್ನು ಜಾರಿಗೊಳಿಸದೇ ಬೇರೆ ಮಾರ್ಗವಿಲ್ಲ. ಈ ರೀತಿ "ಸಮಾನ ಕೆಲಸಕ್ಕೆ ಸಮಾನ ವೇತನ" ತತ್ವವು ಪ್ರತಿಯೊಬ್ಬ ನೌಕರನು, ಆತನನ್ನು ಖಾಯಂ ಆಗಿ ಅಥವಾ ತಾತ್ಕಾಲಿಕ ತಳಹದಿಯಲ್ಲಿ ಕೆಲಸಕ್ಕೆ ಆಯೋಜಿಸಿದರೂ ಸಹ ಅವನ ಸ್ಪಷ್ಟವಾದ ಮತ್ತು ಅನಿರ್ಬಂಧಿತವಾದ ಹಕ್ಕಾಗಿರುತ್ತದೆ"

– ಅಕ್ಟೋಬರ್ 21, 2016 ರಂದು ಸರ್ವೋಚ್ಚ ನ್ಯಾಯಾಲಯ ಕೊಟ್ಟ ತೀರ್ಪಿನ ಭಾಗ



ಕರ್ನಾಟಕ ಸರ್ಕಾರದ ಅಡಿಯಲ್ಲಿ ಗುತ್ತಿಗೆ, ಹೊರಗುತ್ತಿಗೆ, ಅರೆಕಾಲಿಕ, ಹಂಗಾಮಿ, ತಾತ್ಕಾಲಿಕ, ಅತಿಥಿ, ಗೌರವ ಪ್ರೋತ್ಸಾಹಧನ, ಸಂಭಾವನೆ ಮುಂತಾದ ಹೆಸರುಗಳಲ್ಲಿ ಲಕ್ಷಾಂತರ ನೌಕರರು ದುಡಿಯುತ್ತಿದ್ದಾರೆ. ಇವರು ಸರ್ಕಾರದ ಇಲಾಖೆಗಳಾದ ವಿದ್ಯುತ್ ಉತ್ಪಾದನೆ, ವಿತರಣೆ, ರಸ್ತೆಸಾರಿಗೆ, ಅರಣ್ಯ, ಕೃಷಿ, ಪ್ರವಾಸೋದ್ಯಮ, ಗಣಿ, ಡೈರಿಗಳು, ಕೈಗಾರಿಕಾ ಅಭಿವೃದ್ಧಿ ನಿಗಮ, ಮೂಲಸೌಕರ್ಯ ಅಭಿವೃದ್ಧಿ ನಿಗಮ ಸ್ಥಳೀಯ ಸಂಸ್ಥೆಗಳಾದ ಗ್ರಾಮ–ತಾಲ್ಲೂಕು–ಜಿಲ್ಲಾ ಪಂಚಾಯ್ತಿಗಳಲ್ಲಿ, ಮುನ್ಸಿಪಾಲಿಟಿ–ಕಾರ್ಪೋರೇಷನ್‌ಗಳು, ವಿಶ್ವವಿದ್ಯಾನಿಲಯಗಳು, ಕೃಷಿ ವಿಶ್ವವಿದ್ಯಾನಿಲಯಗಳು, ಸರ್ವ ಶಿಕ್ಷಣ ಅಭಿಯಾನ, NRHM, AIDS ಯೋಜನೆಗಳಲ್ಲಿ, ದುಡಿಯುವ ಹೊರಗುತ್ತಿಗೆ ನೌಕರರು. ವಿಧಾನಸೌಧ, ವಿಕಾಸಸೌಧ, ಮಲ್ಟಿಸ್ಟೋರ್ ಬಿಲ್ಡಿಂಗ್‌ಗಳಲ್ಲಿ, ಸಾವಿರಾರು ಡಾಟಾ ಎಂಟ್ರಿ ಆಪರೇಟ್‌ರ್ ಡ್ರೈವರಗಳು, ಕೃಷಿ ಇಲಾಖೆಗಳ ಸಂಪರ್ಕ ಕೇಂದ್ರಗಳಲ್ಲಿ ಅಕೌಂಟೆಂಟ್‌ಗಳು, ಮಣ್ಣನ್ನು ಪರೀಕ್ಷಿಸುವ ATM - PTM ಗಳು, ರೈತ ಅನುವುಗಾರರು, ಇನ್ನೂ ಹಲವಾರು ವಿಭಾಗಗಳಲ್ಲಿ ಸರ್ಕಾರದ ಸೇವೆಯನ್ನು ಮಾಡುತ್ತಿದ್ದಾರೆ. ಇವರಿಗೆ 1970 ರ ಗುತ್ತಿಗೆ ಕೆಲಸದ ಕಾಯ್ದೆಯ ಪ್ರಕಾರ ಸಿಗಬೇಕಿದ್ದ ಸವಲತ್ತುಗಳು ಸರಿಯಾಗಿ ಸಿಗುತ್ತಿಲ್ಲ. ಅತ್ಯಂತ ಉನ್ನತ ಪದವಿಗಳನ್ನು ಪಡೆದ ಉಪನ್ಯಾಸಕರು, ಶಿಕ್ಷಕರು, ಪ್ರಾಂಶುಪಾಲರು ಕೂಡಾ 'ಅತಿಥಿ' ಮತ್ತು 'ಆದರ್ಶ'ದ ಆಧಾರದಲ್ಲಿ ಯಾವ ಸವಲತ್ತುಗಳಿಲ್ಲದೆ ದುಡಿದು ಇಂದು ಬರಿಗೈಯಲ್ಲಿ ಹೋಗುವ ಪರಿಸ್ಥಿತಿಯಲ್ಲಿದ್ದಾರೆ.

ಯಾಕೀ ವ್ಯವಸ್ಥೆ:

ರಾಜ್ಯದಲ್ಲಿ 2001 ರಲ್ಲಿ ಕರ್ನಾಟಕ ಆಡಳಿತ ಸುಧಾರಣೆಯ ಹೆಸರಿನಲ್ಲಿ ಹಾರನಹಳ್ಳಿ ರಾಮಸ್ವಾಮಿಯವರ ನೇತೃತ್ವದ ಆಯೋಗ ಕೊಟ್ಟಂತಹ ವರದಿಯಲ್ಲಿ ಈ ಕೆಳಕಂಡಂತೆ ಶಿಫ಼ಾರಸ್ಸು ಮಾಡಲಾಗಿದೆ.

."...... **ಸರ್ಕಾರಿ ಚಟುವಟಿಕೆಗಳ ಖಾಸಗೀಕರಣದಿಂದ ದಕ್ಷತೆ ಹೆಚ್ಚುವುದು ಮತ್ತು ವೆಚ್ಚ ತಗ್ಗುವುದೆಂದೂ ನಿರೀಕ್ಷಿಸಲಾಗಿದೆ. ಹೊರಗಿನ ಸಂಪನ್ಮೂಲಗಳಿಂದ ಮತ್ತು ಖಾಸಗೀಕರಣದಿಂದ ಚಟುವಟಿಕೆಗಳನ್ನು ನಡೆಸಬೇಕಿದೆ, ಖಾಸಗೀಕರಣ ಒಂದು ಬಾರಿ ನಡೆಸಬೇಕಾದ ಪ್ರಕ್ರಿಯೆಯಲ್ಲ. ಕರ್ನಾಟಕದಲ್ಲಿ 50 ವರ್ಷಗಳ ಹಿಂದೆ ಅನೇಕ ಮಂಡಳಿ ಮತ್ತು ನಿಗಮಗಳು ಆ ಕಾಲಕ್ಕೆ ತುಂಬಾ ಪ್ರಸ್ತುತವಾಗಿದ್ದವು. ಆದರೆ ಉದಾರೀಕರಣದ ಪರಿಣಾಮವಾಗಿ ಆರ್ಥಿಕ ವಾತಾವರಣ ಬದಲಾಯಿತು. ಒಂದು ಕಾಲದಲ್ಲಿ ಏಕಸ್ವಾಮ್ಯ ಹೊಂದಿದ್ದ ನಿಗಮಗಳ ಚಟುವಟಿಕೆಯನ್ನು ಇದೀಗ ಖಾಸಗಿ ಕ್ಷೇತ್ರದ ಹಲವರು ವಹಿಸಿಕೊಂಡಿದ್ದಾರೆ. ಅವರು ಉತ್ಪಾದಿತ ವಸ್ತುಗಳನ್ನು, ಸೇವೆಗಳನ್ನು ಇನ್ನು ಕಡಿಮೆ ವೆಚ್ಚದಲ್ಲಿ ದಕ್ಷತೆಯಿಂದ ನೀಡುವುದರಿಂದ ಸರ್ಕಾರ ಇಂಥ ವಲಯಗಳಿಂದ ದೂರ ಸರಿಯಬೇಕಾಗಿದೆ."**

2001–02ರಲ್ಲಿ ಸರ್ಕಾರಿ ನೌಕರರಿಗೆ ತಗಲುತ್ತಿದ್ದ ವೆಚ್ಚವು ಆರ್ಥಿಕ ಸಮಸ್ಯೆ ಅಲ್ಲ ಎಂದು ಹೇಳುವಾಗಲೇ ಈ ಕೆಳಗಿನ **ಖಾಲಿ ಹುದ್ದೆಗಳ ರದ್ಧತಿ, ನೇಮಕಾತಿ ಸ್ಥಗಿತ, ಹೊಸ ಹುದ್ದೆಗಳ ಸೃಷ್ಟಿಗೆ ಕಾನೂನು ನಿರ್ಬಂಧ, ಸ್ವಯಂ ನಿವೃತ್ತಿ, ಕಡ್ಡಾಯ ನಿವೃತ್ತಿಗಳನ್ನು** ಜಾರಿ ಮಾಡುವಂತೆ ವರದಿ ಶಿಫಾರಸ್ಸು ಮಾಡಿತು :

- ಗೃಹ ನಿರ್ವಹಣಾ ಕೆಲಸಗಳಾದ ಕಛೇರಿಗಳ ನೈರ್ಮಲ್ಯ, ಶೌಚಾಲಯ ಸ್ವಚ್ಛತೆ ತೋಟಗಾರಿಕೆ ಮುಂತಾದವು.

ನಿರ್ಣಯ

- ಸರ್ಕಾರಿ ಕಛೇರಿಗಳಿಗೆ ಟೀ ಕಾಫಿ ಮುಂತಾದ ಪಾನೀಯಗಳ ಸರಬರಾಜು
- ಕಛೇರಿ ರಕ್ಷಣಾ ವ್ಯವಸ್ಥೆ
- ವಾಹನ ಚಾಲಕರ ಸೇವೆ
- ಜೈಲುಗಳು, ಸಮಾಜಕಲ್ಯಾಣ, ಹಿಂದುಳಿದ ವರ್ಗ, ಅಲ್ಪಸಂಖ್ಯಾತರ ಮಹಿಳಾ ಹಾಗೂ ಮಕ್ಕಳ ಕಲ್ಯಾಣ ಇಲಾಖೆಗಳ ವಿದ್ಯಾರ್ಥಿ ನಿಲಯಗಳು.
- ಸಿಂಪಡಿಸುವಿಕೆ, ರಾಸಾಯನಿಕಗಳಾದ ಬ್ಲೀಚಿಂಗ್ ಪೌಡರ್ ಮುಂತಾದವುಗಳ ವಿತರಣೆಗಳ ಸೇವೆಯನ್ನು ಬಾಹ್ಯ ಮೂಲಗಳಿಂದ ಪಡೆಯಬಹುದು. ರೇಷ್ಮೆ ಕೈಗಾರಿಕೆಗಳನ್ನು ಮುಚ್ಚುವುದು.
- ಕೈಗಾರಿಕಾ ಇಲಾಖೆಯ ಚಟುವಟಿಕೆಗಳಾದ ಕೈಗಾರಿಕಾ ಉತ್ತೇಜನ, ವಸ್ತು ಪ್ರದರ್ಶನಗಳು, ಮಾರುಕಟ್ಟೆ ಅಧ್ಯಯನ, ಯೋಜನಾ ವರದಿಗಳನ್ನು ಸಿದ್ಧಪಡಿಸುವುದು.
- ಕೃಷಿ ಇಲಾಖೆಯಲ್ಲಿ ಬೀಜೋತ್ಪನ್ನ ಮತ್ತು ವಿತರಣೆ–ಯ ಕಾರ್ಯಕ್ರಮಗಳು.
- ಜನರಲ್ ತಿಮ್ಮಯ ರಾಷ್ಟ್ರೀಯ ಸಾಹಸ ಅಕಾಡೆಮಿಯ ಚಟುವಟಿಕೆ.
- ನಗರಾಭಿವೃದ್ಧಿ ಇಲಾಖೆಯಲ್ಲಿ ನಗರದ ನಕ್ಷೆ ಸಿದ್ಧಪಡಿಸುವಿಕೆ, ಒಳಪಟ್ಟ ಸ್ವಚ್ಛತೆ, ಕೊಳವೆ ನೀರಿನ ನಿರ್ವಹಣೆ ಮತ್ತು ಕಸ ಸಂಗ್ರಹಣೆ.
- ಲೋಕೋಪಯೋಗಿ ಮತ್ತು ಜಲಸಂಪನ್ಮೂಲ ಇಲಾಖೆಯ ಭೂ ಸಮೀಕ್ಷೆ ಮತ್ತು ತನಿಖೆ, ಗುಣಮಟ್ಟ ನಿಯಂತ್ರಣದ ಚಟುವಟಿಕೆಗಳು.
- ಹಲವು ಮಂಡಳಿ ಮತ್ತು ನಿಗಮಗಳನ್ನು ಮುಚ್ಚುವುದು ಹಾಗೂ ಅವುಗಳ ಚಟುವಟಿಕೆಗಳನ್ನು ಬಾಹ್ಯ ಮೂಲಗಳಿಂದ ನಿರ್ವಹಿಸುವುದು.

ಈ ಎಲ್ಲಾ ಸೂಚನೆಗಳನ್ನು ರಾಜ್ಯ ಸರ್ಕಾರ–ಕ್ಕೆ ನೀಡಿತು. ಜೊತೆಗೆ 2000–02ರಲ್ಲಿ ಮಂಜೂರಾದ 6,25,199 ಸರ್ಕಾರಿ ನೌಕರರ ಹುದ್ದೆಗಳಲ್ಲಿ ಆಗಲೇ ಖಾಲಿಯಿದ್ದ 95,254 ಹುದ್ದೆಗಳಲ್ಲಿ 34,397 ಹುದ್ದೆಗಳನ್ನು ರದ್ದು ಮಾಡಿ ಪ್ರತಿ ಇಲಾಖಾವಾರು ಶೇ.5% ಹುದ್ದೆಗಳ ರದ್ಧತಿಗೆ ಶಿಫ಼ಾರಸ್ಸು ಮಾಡಲಾಗಿತ್ತು.

ಹೀಗೆ ರದ್ದು ಮಾಡಿದ ಹುದ್ದೆಗಳಲ್ಲಿ ಮತ್ತು ನೇಮಕಾತಿ ನಿರ್ಬಂಧದ ಹಿನ್ನೆಲೆಯಲ್ಲೇ, ಇಂದು ಎಲ್ಲಾ ಇಲಾಖೆಗಳಲ್ಲಿ ಮತ್ತು ನಿಗಮಗಳಲ್ಲಿ 'ಸಿ' ಮತ್ತು 'ಡಿ' ದರ್ಜೆಯ ಹುದ್ದೆಗಳಿಗೆ ಮಾತ್ರವಲ್ಲದೆ ಎಲ್ಲಾ ಹಂತಗಳಲ್ಲಿ ಗುತ್ತಿಗೆ ಆಧಾರದಲ್ಲಿ ನೇಮಕ ಮಾಡಿಕೊಳ್ಳಲಾಗುತ್ತಿದೆ.

ಉದಾರೀಕರಣದ ನೀತಿಗಳಿಗಿಂತ ಮುಂಚೆ ನಿರಂತರ ಮತ್ತು ಮೂಲಭೂತ ಸ್ವರೂಪದ ಕೆಲಸಗಳಿಗೆ ಗುತ್ತಿಗೆ ಮತ್ತು ಹೊರಗುತ್ತಿಗೆ ನೌಕರರನ್ನು ನೇಮಿಸಬಾರದೆಂದು '1970ರ ಗುತ್ತಿಗೆ ಕಾರ್ಮಿಕ ಪದ್ಧತಿ ನಿಯಂತ್ರಣ ಮತ್ತು ನಿಷೇಧ ಕಾಯ್ದೆ" ಯಲ್ಲಿ ಇದ್ದರೂ ಕೂಡಾ ಮಾದರಿ ಮಾಲೀಕನಾಗಬೇಕಾದ ಸರ್ಕಾರವೇ ಎಲ್ಲಾ ನಿಯಮಗಳನ್ನು ಗಾಳಿಗೆ ತೂರಿದೆ.

ಇಂದು ಸರ್ಕಾರ ಅಡಿಯಲ್ಲೇ ಲಕ್ಷಾಂತರ



ಪುಟ 15 ಕ್ಕೆ

ಸಿರಿಯಾದಲ್ಲಿ ಟ್ರಂಪ್ ಆಕ್ರಮಣ

ಮತ್ತೊಮ್ಮೆ ಸಾಮ್ರಾಜ್ಯಶಾಹಿ ಸ್ವರೂಪ ದರ್ಶನ





ಪ್ರಕಾಶ್ ಕಾರಟ್

ಅಮೆರಿಕದ ಅಧ್ಯಕ್ಷರು ಯಾರೇ ಆಗಿರಲಿ, ಅವರು ಅಮೆರಿಕದ ಸಾಮ್ರಾಜ್ಯಶಾಹಿ ವ್ಯವಸ್ಥೆಯ ಹಿತಗಳನ್ನು ಎತ್ತಿ ಹಿಡಿಯುತ್ತಾರೆ.ಅಮೆರಿಕದ್ದು ಒಂದು ಸಾಮ್ರಾಜ್ಯಶಾಹಿ ಪ್ರಭುತ್ವ ಏಕಸ್ವಾಮ್ಯದ ಸಂರಚನೆ, ಅದು ತನ್ನ ಜಾಗತಿಕ ಯಜಮಾನಿಕೆಯನ್ನು ಮುಂದುವರೆಸಲು ಯುದ್ಧಕೋರತನ ಮತ್ತು ಆಕ್ರಮಣವನ್ನೇ ನೆಚ್ಚಿಕೊಂಡಿದೆ ಎಂಬ ಅದರ ಪ್ರಭುತ್ವದ ಸ್ವರೂಪವನ್ನು ಸಿರಿಯಾ ಮೇಲಿನ ಮಿಲಿಟರಿ ದಾಳಿ ಮತ್ತೊಮ್ಮೆ ತೋರಿಸಿದೆ.

ಸಿರಿಯಾದ ವಾಯುಪಡೆ ನೆಲೆಯ ಮೇಲೆ ಕ್ಷಿಪಣಿ ದಾಳಿ ಆರಂಭಿಸುವ ಮೂಲಕ ಡೊನಾಲ್ಡ್ ಟ್ರಂಪ್ ಸ್ವತಂತ್ರ ದೇಶಗಳ ಸಾರ್ವಭೌಮತ್ವವನ್ನು ಉಲ್ಲಂಘಿಸುವ ಮತ್ತು ಅಂತಾರ್ರಾಷ್ಟ್ರೀಯ ಕಾನೂನನ್ನು ಹೊಸಕಿ ಹಾಕುವ ಅಮೆರಿಕನ್ ಅಧ್ಯಕ್ಷರುಗಳ ಜಾಡಿನಲ್ಲೇ ಸಾಗಿದ್ದಾರೆ.

ಸಿರಿಯಾ ಸರಕಾರ ಮತ್ತು ಅದರ ಸಶಸ್ತ್ರ ಪಡೆಗಳ ವಿರುದ್ಧ ಪ್ರಥಮ ಸೇನಾ ಕಾರ್ಯಾಚರಣೆಗೆ ಆದೇಶ ನೀಡುವ ಮೂಲಕ, ಟ್ರಂಪ್ ತಾವೇ ತಮ್ಮ ಬಗ್ಗೆ ಹರಡಿದ್ದ ಕೆಲವು ಖೋಟಾ ಸುದ್ದಿಗಳನ್ನು ಹೋಗಲಾಡಿಸಿದ್ದಾರೆ. ಅಧ್ಯಕ್ಷೀಯ ಚುನಾವಣೆಯ ಪ್ರಚಾರದ ವೇಳೆ, 'ಆಳ್ವಿಕೆಯ ಬದಲಾವಣೆ' ತರಲು ಅಮೆರಿಕ ಸೇನಾ ಹಸ್ತಕ್ಷೇಪ ನಡೆಸುವುದನ್ನು ಮತ್ತು ಇರಾಕ್ ಹಾಗೂ ಅಫಘಾನಿಸ್ತಾನಗಳಲ್ಲಿ ಯುದ್ಧಕ್ಕಾಗಿ ಅಪಾರ ಪ್ರಮಾಣದ ಹಣ ಖರ್ಚು ಮಾಡುವ ಮೂರ್ಖತನವನ್ನು ಟ್ರಂಪ್ ಟೀಕಿಸಿದ್ದರು. ವಾಸ್ತವವಾಗಿ, ಸಿರಿಯಾ ವಿರುದ್ಧ ಸೇನಾ ಕ್ರಮವನ್ನು ಕೈಗೊಳ್ಳದಂತೆ 2013ರಲ್ಲಿ ಅವರು ಬರಾಕ್ ಒಬಾಮಾ ಅವರಿಗೆ ಎಚ್ಚರಿಕೆ ನೀಡಿದ್ದರು. ಆಗ ಸಿರಿಯಾ ಆಡಳಿತ ರಾಸಾಯನಿಕ ಅಸ್ತ್ರಗಳನ್ನು ಬಳಸುತ್ತಿದೆ ಎಂಬ ಆರೋಪ ಎದುರಿಸುತ್ತಿತ್ತು.

ಇದೀಗ ಈ ಮಿಲಿಟರಿ ಆಕ್ರಮಣದ ಕ್ರಿಯೆಗೆ ಕಾರಣವಾಗಿ ಸಿರಿಯಾದ ವಾಯುಪಡೆ ಇದ್ಲಿಬ್ ಪ್ರಾಂತ್ಯದ ಖಾನ್ ಶೀಕುನ್ ಪಟ್ಟಣದ ಮೇಲೆ ಸರಿನ್ ಗ್ಯಾಸ್ (ಒಂದು ರಾಸಾಯನಿಕ ಅಸ್ತ್ರ) ಹಾಕಿದೆ ಎಂಬ ಸಬೂಬು ನೀಡಲಾಗಿದೆ. ಶಿಕುನ್ ಪಟ್ಟಣ ಅಲ್ ಖೈದಾ ಸಂಯೋಜಿತ ಉಗ್ರಗಾಮಿ ಸಂಘಟನೆ ಅಲ್ ಷಮ್ಸ್ ನಿಯಂತ್ರಣದಲ್ಲಿದೆ. ಅನಿಲ ದಾಳಿಯಿಂದ ಅನೇಕ ಮಕ್ಕಳ ಸಹಿತ 70 ಜನರು ಮೃತಪಟ್ಟಿದ್ದಾರೆ ಎಂದು ವರದಿಯಾಗಿದೆ. ಸಿರಿಯಾ ಸರಕಾರ ರಾಸಾಯನಿಕ ಅಸ್ತ್ರಗಳನ್ನು ಬಳಸಿದೆ ಎಂಬ ಬಂಡುಕೋರರ ದಾವೆಯನ್ನು ಅಮೆರಿಕ ಸಹಿತ ಎಲ್ಲಾ ಪಾಶ್ಚಿಮಾತ್ಯ ಸರಕಾರಗಳು ಒಪ್ಪಿಕೊಂಡಿವೆ.

ಸರಿನ್ ಅನಿಲವನ್ನು ಒಂದು ರಾಸಾಯನಿಕ ಅಸ್ತ್ರವನ್ನಾಗಿ ಬಳಸುವುದನ್ನು ಅಂತಾರ್ರಾಷ್ಟ್ರೀಯ ಒಡಂಬಡಿಕೆ ನಿಷೇಧಿಸಿದೆ. ಪಟ್ಟಣಗಳಲ್ಲಿ ಈ ಅನಿಲವನ್ನು ಬಳಸಿದರೆ ಅದು ಘೋರ ಅಪರಾಧವಾಗುತ್ತದೆ. ಆದರೆ ಈ ರಾಸಾಯನಿಕ ಅಸ್ತ್ರ ಬಳಸಲು ಕಾರಣರಾದವರು ಯಾರು ಎನ್ನುವುದನ್ನು ಸಾಬೀತುಪಡಿಸಲು ಯಾವುದೇ ತನಿಖೆ ನಡೆದಿಲ್ಲ.

ಖಾನ್ ಶಿಕುನ್‌ನಲ್ಲಿ ತನ್ನ ಸಶಸ್ತ್ರ ಪಡೆಗಳು ರಾಸಾಯನಿಕ ಅಸ್ತ್ರಗಳನ್ನು ಬಳಸಿಲ್ಲ ಎಂದು ಸಿರಿಯಾ ಸರಕಾರ ಖಂಡತುಂಡವಾಗಿ ಹೇಳಿದೆ. ಬಂಡು–ಕೋರರು ಅಡಗಿಸಿಟ್ಟಿರುವ ರಾಸಾಯನಿಕ ಅಸ್ತ್ರಗಳು ಕೆಲವು ಸ್ಥಳಗಳಲ್ಲಿ ವಾಯುಪಡೆ ಕಾರ್ಯಾಚರಣೆ ವೇಳೆ ಸಿಡಿದು ಅನಿಲ ಬಿಡುಗಡೆಯಾಗಿರಬಹುದು ಹಾಗೂ ನಾಗರಿಕರ ಮೇಲೆ ಪರಿಣಾಮ ಬೀರಿರಬಹುದು ಎಂದು ಸರಕಾರ ಹೇಳಿದೆ.

ಮಾಧ್ಯಮ ವರದಿಗಳ ಪ್ರವಾಹ ಮತ್ತು ಪಾಶ್ಚಿಮಾತ್ಯ ಸರಕಾರಗಳ ಸಮೂಹಗಾನದಂತಿರುವ ಪ್ರಚಾರವೇನೇ ಇದ್ದರೂ, ಸಿರಿಯಾ ಸರಕಾರದ ಹೇಳಿಕೆಯನ್ನು ಪರಿಗಣಿಸುವುದು ಅಗತ್ಯವಾಗಿದೆ ಮತ್ತು ಒಂದು ಸ್ವತಂತ್ರ ಅಂತಾರ್ರಾಷ್ಟ್ರೀಯ ವಿಚಾರಣೆ ಮೂಲಕ ಸತ್ಯ ಏನೆಂಬುದನ್ನು ಸಾಬೀತುಪಡಿಸಬೇಕಾಗಿದೆ. ಯಾಕೆಂದರೆ 2013 ಆಗಸ್ಟ್‌ನಲ್ಲೂ ಇದೇ ರೀತಿಯ ಪ್ರಕರಣ ನಡೆದಿತ್ತು. ಆಗ ಡಮಾಸ್ಕಸ್ ನಗರದ ಹೊರವಲಯದ ಘೌಟಾದಲ್ಲಿ ಸರಿನ್ ಅನಿಲ ದಾಳಿ ನಡೆದಿತ್ತು. ಇದಕ್ಕೆ ಅಸಾದ್ ಸರಕಾರ ಹೊಣೆ ಎಂದು ಬಂಡುಕೋರರು ಮತ್ತು ಪಾಶ್ಚಿಮಾತ್ಯ ಸರಕಾರಗಳು ಬೊಬ್ಬೆ ಹಾಕಿದ್ದವು. ಅಂದಿನ ಅಮೆರಿಕ ಅಧ್ಯಕ್ಷ ಒಬಾಮಾ ಸಿರಿಯಾ ಸರಕಾರದ ವಿರುದ್ಧ ಮಿಲಿಟರಿ ಕ್ರಮ ಕೈಗೊಳ್ಳುವ ಚಿಂತನೆ ನಡೆಸಿದ್ದರು. ಆದರೆ ಅಂತಾರ್ರಾಷ್ಟ್ರೀಯವಾಗಿ ಪ್ರಬಲ ಪ್ರತಿರೋಧ ವ್ಯಕ್ತವಾಗಿದ್ದರಿಂದ ಅದನ್ನು ಕೈಬಿಟ್ಟಿದ್ದರು.

ನಂತರ ತನಿಖೆಯಿಂದ ಟರ್ಕಿಯ ಕೆಲವು ಅಧಿಕಾರಿಗಳ ಶಾಮೀಲಿನಿಂದ ಅಲ್ ಶಮ್ಸ್ ಉಗ್ರಗಾಮಿಗಳು ಸರಿನ್ ಅನಿಲವನ್ನು ಪಡೆದು–ಕೊಂಡಿದ್ದಾರೆ ಎನ್ನುವುದು ತಿಳಿದುಬಂದಿತ್ತು. ಅದೇ ಅಲ್ ಶಮ್ಸ್ ಗುಂಪು ಈಗ ಖಾನ್ ಶೀಕುನ್ ನಗರದ ನಿಯಂತ್ರಣವನ್ನು ಹೊಂದಿದೆ. ಅಮೆರಿಕದ ತನಿಖಾ ಪತ್ರಕರ್ತ ಸೇಮರ್ ಹರ್ಷ್ ತಾನು ನಡೆಸಿದ ಒಂದು ನಿಖರವಾದ ತನಿಖೆಯ ಫಲಿತಾಂಶಗಳನ್ನು ಪ್ರಕಟಿಸಿದ್ದಾರೆ. ಅವು ಆ ಘೋರ ದಾಳಿಯ ಹಿಂದಿದ್ದ ನಿಜವಾದ ಅಪರಾಧಿಗಳು ಯಾರು ಎನ್ನುವುದನ್ನು ಅನಾವರಣಗೊಳಿಸಿವೆ.

ಬಷರ್ ಅಲ್ ಅಸಾದ್ ಸರಕಾರ ಈ ದಾಳಿಗೆ ಹೊಣೆ ಎಂಬ ಪಾಶ್ಚಿಮಾತ್ಯ ಪ್ರಚಾರವನ್ನು ನಂಬದಿರಲು ಇನ್ನೂ ಒಂದು ಬಲವತ್ತಾದ ಕಾರಣ ಇದೆ. ಸೌದಿ ಅರೇಬಿಯಾ, ಕತಾರ್, ಟರ್ಕಿ ಮತ್ತು ಪಾಶ್ಚಿಮಾತ್ಯ ಪೋಷಕರ ಬೆಂಬಲವಿರುವ ಬಂಡು–ಕೋರರ ವಿರುದ್ಧದ ಮಿಲಿಟರಿ ಸಂಘರ್ಷದಲ್ಲಿ ಅಸಾದ್ ಸರಕಾರ ಮೇಲುಗೈ ಪಡೆದಿದೆ. ಎಲ್ಲಾ ಪ್ರಮುಖ ನಗರಗಳು ಅದರ ನಿಯಂತ್ರಣ–ಕ್ಕೆ ಮರಳಿವೆ. ಹೀಗಿರುವಾಗ ಸಿರಿಯಾ ಸರಕಾರ ತನ್ನದೇ ನಾಗರಿಕರ ಮೇಲೆ ರಾಸಾಯನಿಕ ಅಸ್ತ್ರ ದಾಳಿ ನಡೆಸುತ್ತದೆ ಹಾಗೂ ಪಾಶ್ಚಿಮಾತ್ಯ ಸೇನಾ ಹಸ್ತಕ್ಷೇಪವನ್ನು ಆಹ್ವಾನಿಸಿಕೊಳವುದು ತೀರಾ ಮಂದದೃಷ್ಟಿ ಮತ್ತು ಮೂರ್ಖತನ. ಅದಕ್ಕಿಂತ ಹೆಚ್ಚಾಗಿ, 2013ರ ಪ್ರಕರಣದ ನಂತರ, ತನ್ನ ರಾಸಾಯನಿಕ ಅಸ್ತ್ರಗಳ ಸಂಪೂರ್ಣ ದಾಸ್ತಾನನ್ನು ವಿಶ್ವಸಂಸ್ಥೆಯ ಉಸ್ತುವಾರಿಯಲ್ಲಿ ನಾಶ ಮಾಡಬೇಕೆಂಬ ಭದ್ರತಾ ಮಂಡಳಿಯ ನಿರ್ಣಯವನ್ನು ಸಿರಿಯಾ ಜಾರಿ ಮಾಡಿದೆ. ಇದನ್ನು ವಿಶ್ವಸಂಸ್ಥೆ ಸಂಯೋಜಿತ ಸಂಸ್ಥೆಯಾದ ರಾಸಾಯನಿಕ ಅಸ್ತ್ರ ನಿಷೇಧ ಸಂಸ್ಥೆ ಜೂನ್ 2014ರಲ್ಲಿ ದೃಢಪಡಿಸಿದೆ.

ಸಿರಿಯಾ ಮೇಲೆ ಮಿಲಿಟರಿ ದಾಳಿ ಟ್ರಂಪ್ ಅವರಿಗೆ ಪ್ರಬಲ ಯುದ್ಧ ಲಾಬಿ ಮತ್ತು ಪ್ರತಿಪಕ್ಷವಾದ ಡೆಮಾಕ್ರಟಿಕ್ ಪಕ್ಷದ ಲ್ಲಿ ಪ್ರಾಬಲ್ಯ ಹೊಂದಿರುವ 'ಉದಾರವಾದಿ' ಸಾಮ್ರಾಜ್ಯಶಾಹಿಗಳು ಹಾಗೂ ಮಾಧ್ಯಮಗಳ ಬೆಂಬಲವನ್ನು ಗೆದ್ದು ಕೊಟ್ಟಿದೆ. ಟ್ರಂಪ್ ಧೋರಣೆಗಳೆಲ್ಲದರ ಮೇಲೆ ಆಕ್ರಮಣ ಮಾಡುತ್ತಿರುವ ಉದಾರವಾದಿ ಮಾಧ್ಯಮ ಮಿಲಿಟರಿ ಕಾರ್ಯಾಚರಣೆಗೆ ಮಾತ್ರ ಉಘೇ ಉಘೇ ಎನ್ನುತ್ತಿದೆ.

ಅಸಾದ್‌ರನ್ನು ಆಡಳಿತದಿಂದ ಕಿತ್ತೊಗೆಯಬೇಕೆಂಬ ಅಮೆರಿಕದ ಆಡಳಿತ ಹಿಂದೆ ಎತ್ತಿದ್ದ ಬೇಡಿಕೆಯನ್ನು ಟ್ರಂಪ್ ಆಡಳಿತ ಮುಂದುವರೆಸಿದೆ. ಅಮೆರಿಕದ ಅಧ್ಯಕ್ಷರು ಯಾರೇ ಆಗಿರಲಿ, ಅವರು ಅಮೆರಿಕದ ಸಾಮ್ರಾಜ್ಯಶಾಹಿ ವ್ಯವಸ್ಥೆಯ ಹಿತಗಳನ್ನು ಎತ್ತಿ ಹಿಡಿಯುತ್ತಾರೆ. ಶಾಂತಿದೂತ ಎಂದು ಹೇಳಲಾಗುತ್ತಿದ್ದ ಒಬಾಮಾ ಲಿಬ್ಯಾ ಮೇಲೆ ವೈಮಾನಿಕ ದಾಳಿ ಮಾಡಿದ್ದು ಮಹಮದ್ ಗಡಾಫಿಯನ್ನು ಪದಚ್ಯುತಗೊಳಿಸಲು ನೆರವಾಯಿತು.; ಅವರು ಸೌದಿ ಅರೇಬಿಯಾ ಮತ್ತು ಕತಾರ್ ಮೂಲಕ ಸಿರಿಯಾದ ಬಂಡುಕೋರರಿಗೆ ಶಸ್ತ್ರಾಸ್ತ್ರ ಮತ್ತು ಹಣಕಾಸು ನೀಡಿದರು. ಅಫಘಾನಿಸ್ತಾನ ಮತ್ತು ಇರಾಕ್‌ನಿಂದ ಪಡೆಗಳನ್ನು ವಾಪಸ್ ಪಡೆಯುವುದಾಗಿ ನೀಡಿದ ಆಶ್ವಾಸನೆಯ ಹೊರತಾಗಿಯೂ ಆ ಎರಡೂ ದೇಶಗಳಿಗೆ ಒಬಾಮಾ ಹೆಚ್ಚುವರಿ ಪಡೆಗಳನ್ನು ಕಳಿಸಿದರು.

ಅಮೆರಿಕದ್ದು ಒಂದು ಸಾಮ್ರಾಜ್ಯಶಾಹಿ ಪ್ರಭುತ್ವ ಏಕಸ್ವಾಮ್ಯದ ಸಂರಚನೆ, ಅದು ತನ್ನ ಜಾಗತಿಕ ಯಜಮಾನಿಕೆಯನ್ನು ಮುಂದುವರೆಸಲು ಯುದ್ಧಕೋರತನ ಮತ್ತು ಆಕ್ರಮಣವನ್ನೇ ನೆಚ್ಚಿಕೊಂಡಿದೆ ಎಂಬ ಅಮೆರಿಕನ್ ಪ್ರಭುತ್ವದ ಸ್ವರೂಪವನ್ನು ಸಿರಿಯಾ ಮೇಲಿನ ಮಿಲಿಟರಿ ದಾಳಿ ಮತ್ತೊಮ್ಮೆ ತೋರಿಸಿದೆ.

ಸಿರಿಯಾ ಸರಕಾರದ ವಿರುದ್ಧ ಆಕ್ರಮಣಕಾರಿ ನಿಲುವನ್ನು ತಳೆಯುವ ಮೂಲಕ, ಟ್ರಂಪ್ ತಾನು ಮುಖ್ಯ ಅಪಾಯ ಎಂದು ವರ್ಣಿಸುವ ಐಎಸ್‌ಐಎಸ್ ವಿರುದ್ಧ ಹೋರಾಡಲು ರಷ್ಯಾ ಜೊತೆ ಸಹಕರಿಸುವುದಾಗಿ ನೀಡಿದ್ದ ಆಶ್ವಾಸನೆಯಿಂದಲೂ ಹಿಂದೆ ಸರಿದಿದ್ದಾರೆ. ಅಸಾದ್ ಸರಕಾರಕ್ಕೆ ನೀಡಿರುವ ಬೆಂಬಲವನ್ನು ರಷ್ಯಾ ವಾಪಸ್ ಪಡೆಯಬೇಕೆಂದು ಟ್ರಂಪ್ ಆಡಳಿತ ಒತ್ತಾಯಿಸುತ್ತಿದೆ.

ಸಿರಿಯಾ ಸರಕಾರ ವಿರುದ್ಧ ಅಮೆರಿಕ ಸೇನಾ ಹಸ್ತಕ್ಷೇಪವನ್ನು ಯಾವುದೇ ರೀತಿಯಲ್ಲಿ ಹೆಚ್ಚಿಸಿದರೆ ಅದರಿಂದ ಐಎಸ್‌ಐಎಸ್ ಮತ್ತು ಇಸ್ಲಾಮಿಕ್ ಉಗ್ರಗಾಮಿಗಳಿಗೆ ನೆರವಾಗುತ್ತದೆ ಎಂಬುದು ಸಿರಿಯಾದಲ್ಲಿನ ವಾಸ್ತವತೆ. ಇಂಥ ಬೆದರಿಕೆಗಳಿಗೆ ಅಸಾದ್ ಸರಕಾರ ಜಗ್ಗುತ್ತದೆ ಎಂಬುದಾಗಲೀ, ಅಥವಾ ಅದರ ಮಿತ್ರ ದೇಶಗಳಾದ ರಷ್ಯಾ ಮತ್ತು ಇರಾನ್ ಹಿಂದೆ ಸರಿಯುತ್ತವೆ ಎಂಬುದಾಗಲೀ ಬಹಳ ಅನುಮಾನಾಸ್ಪದ ಸಂಗತಿ.

ಅನು: ವಿಶ್ವ

ಹಾಲು ಉತ್ಪಾದಕ ರೈತನನ್ನು ಕಾವಿಪಡೆಗಳು ಬಡಿದು ಸಾಯಿಸಿದ್ದೇಕೆ?ಉನ್ನತ ಮಟ್ಟದ ತನಿಖೆ ಅಗತ್ಯ: ಅಖಿಲ ಭಾರತ ಕಿಸಾನ್ ಸಭಾ

ಪುಟ 2 ರಿಂದ

ತಂಡ ಪೆಹ್ಲೂ ಖಾನ್ ಅವರ ತಾಯಿ ಅಂಕುರಿ ಬೇಗಂ ಮತ್ತು ಹೆಂಡತಿ ಜೆಬಿನಾ ಬೇಗಂ ಹಾಗೂ ಇಬ್ಬರು ಗಂಡು ಮಕ್ಕಳು ಇರ್ಷಾದ್ ಹಾಗೂ ಆರಿಫ್ ಇವರುಗಳನ್ನು ಭೇಟಿಯಾದರು. ಈ ಇಬ್ಬರು ಹುಡುಗರು ಕೂಡ 'ಗೋರಕ್ಷಕ'ರ ಹಲ್ಲೆಗೆ ತುತ್ತಾದವರು. ಹಲ್ಲೆಗೆ ತುತ್ತಾದ ಈ ಊರಿನ ಇನ್ನೊಬ್ಬ ರೈತ ಅಜ್ಮತ್ ಮನೆಗೂ ತಂಡ ಭೇಟಿ ನೀಡಿತು. ಈತನನ್ನು ಅಲವರ್ ಆಸ್ಪತ್ರೆಯಿಂದ ಬಲವಂತವಾಗಿ ಡಿಸ್ಚಾರ್ಜ್ ಮಾಡಲಾಗಿದ್ದು ಈಗ ಮನೆಯಲ್ಲಿ ಹಾಸಿಗೆ ಹಿಡಿದಿದ್ದಾನೆ.

ಪೆಹ್ಲೂ ಕಾನ್ ಕುಟುಂಬ 1.5 ಎಕ್ರೆ ಜಮೀನು ಹೊಂದಿದೆ. ಬದುಕಿಗೆ ಗೋದಿ ಬೆಳೆ ಮತ್ತು ಹೈನುಗಾರಿಕೆಯನ್ನು ನಂಬಿರುವ ಕುಟುಂಬ. ಪೆಹ್ಲೂ ಖಾನ್, ಆತನ ಇಬ್ಬರು ಮಕ್ಕಳು, ಅಳಿಯ ಮತ್ತು ಹಳ್ಳಿಯ ಇನ್ನಿಬ್ಬರು ರೈತರು ಜೈಪುರದ ಪಶು ಸಂತೆಯಲ್ಲಿ ಕಡಿಮೆ ಬೆಲೆಗೆ ಹಸು–ಎಮ್ಮೆಗಳು ಸಿಗುತ್ತವೆ ಎಂದು ಹೋಗಿದ್ದರು.

ಈ ಹಳ್ಳಿಯಿರುವ ಮೇವತ್ ಪ್ರದೇಶದಲ್ಲಿ ಮುಸ್ಲಿಮರು ಬಹಳ ಸಂಖ್ಯೆಯಲ್ಲಿದ್ದಾರೆ. ಅವರಲ್ಲಿ ಹೆಚ್ಚಿನವರು ರೈತರು ಅಥವ ಪಶುಪಾಲಕರು. ಹಿಂದೂ–ಮುಸ್ಲಿಂ ಐಕ್ಯತೆಯ ದೀರ್ಘ ಪರಂಪರೆಯಿರುವ ಪ್ರದೇಶ ಇದು. ಪೆಹ್ಲೂ ಖಾನ್ ಅಮಾನುಷ ಕೊಲೆ ಈ ಶಾಂತಿಪ್ರಿಯ ಪ್ರದೇಶದಲ್ಲಿ ಭಯದ ವಾತಾವರಣ ಸೃಷ್ಟಿಸಿದೆ ಎಂದು ಎಐಕೆಎಸ್ ತಂಡದ ಪತ್ರಿಕಾ ಹೇಳಿಕೆ ತಿಳಿಸುತ್ತದೆ.

ಎಐಕೆಎಸ್ ತಂಡ ಬರುತ್ತದೆಂಬ ಸುದ್ದಿ ಕೇಳಿ ನೂರಾರು ಹಳ್ಳಿಗರು ಸೇರಿದ್ದರು. ಅವರು ಒಂದು ಸಭೆಯನ್ನೂ ಏರ್ಪಡಿಸಿದರು. ಮಾಜಿ ಶಾಸಕ ಅಜ್ಮಲ್ ಖಾನ್, ಮಾಜಿ ಸರಪಂಚ ಕಾಲೆಖಾನ್, ಮತ್ತಿತರ ಈ ಪ್ರದೇಶದ ಮುಖಂಡರುಗಳು ಈ ಸಭೆಯಲ್ಲಿ ಭಾಗವಹಿಸಿದರು. ಸುತ್ತಮುತ್ತಲ ಹಳ್ಳಿಗಳ ಜನರ ಪಂಚಾಯತನ್ನು ಕರೆಯಲು ಸಭೆ ನಿರ್ಧರಿಸಿತು.

ಈ ಪ್ರಕರಣದಲ್ಲಿ ಹಾಕಿರುವ ಎಫ್‌ಐಆರ್ ರೈತರ ಮೇಲೆ ಹಲ್ಲೆ ಮಾಡಿದವರು ಭಜರಂಗ ದಳ ಮತ್ತು ವಿಹೆಚ್‌ಪಿಗೆ ಸೇರಿದವರು ಎಂದು ಸ್ಪಷ್ಟವಾಗಿ ಉಲ್ಲೇಖಿಸಿದೆ. ಪೆಹ್ಲೂ ಖಾನ್ ಸಾವಿನ ನಂತರ ವಿಹೆಚ್‌ಪಿಯ ಜಿಲ್ಲಾ ಮುಖಂಡರು ತಮ್ಮ ಕಾರ್ಯಕರ್ತರನ್ನು ಬಂಧಿಸಬಾರದು ಎಂದು ಹಿರಿಯ ಪೋಲೀಸ್ ಅಧಿಕಾರಿಗಳಿಗೆ ಬೆದರಿಕೆ ಹಾಕಿರುವುದಾಗಿ ತಿಳಿದುಬಂದಿದೆ. ಪೆಹ್ಲೂ ಖಾನ್ ಮತ್ತು ಇತರ ರೈತರ ಬಳಿ ಜೈಪುರ ನಗರಸಭೆ ನೀಡಿದ ಖರೀದಿ ರಸಿದಿ ಇದ್ದರೂ ಅವರ ಮೇಲೆ ಸುಳ್ಳು ಎಫ್‌ಐಆರ್ ಹಾಕಲಾಗಿದೆ. ಸ್ವತಃ ರಾಜಸ್ತಾನದ ಗೃಹಮಂತ್ರಿಯೇ ರೈತರು ಕಾನೂನು ಉಲ್ಲಂಘಿಸಿ ಹಸುಗಳ ಕಳ್ಳ ಸಾಗಣೆ ಮಾಡುತ್ತಿದ್ದರು ಎಂದು ಆಪಾದಿಸಿದರು. ಕೇಂದ್ರ ಮಂತ್ರಿ ಮುಕ್ತಾರ್ ಅಬ್ಬಾಸ್ ನಕ್ವ್ಮಿದಲಿಗೆ ಈ ಬಡಿದು ಸಾಯಿಸಿದ ಘಟನೆ ನಡೆದೇ ಇಲ್ಲ ಎಂದು ರಾಜ್ಯಸಭೆಯಲ್ಲಿ ಹೇಳಿಕೆ ನೀಡಿದರು. ತೀವ್ರ ಪ್ರತಿಭಟನೆಯ ನಂತರ ತಾನು ಹೇಳಿದ್ದು ಹಾಗಲ್ಲ ಎಂದೆಲ್ಲ ಸಮರ್ಥಿಸಿಕೊಳ್ಳಲು ಹೆಣಗಾಡಿದರು.

ಇವೆಲ್ಲ ಈ ಹೀನಕೃತ್ಯ ಎಸಗಿದವರನ್ನು ಬಚಾವ್ ಮಾಡಲು ಆರೆಸ್ಸೆಸ್ ಮತ್ತು ಬಿಜೆಪಿ ಮುಖಂಡರು ಪ್ರಯತ್ನಿಸುತ್ತಿದ್ದಾರೆ ಎಂಬುದನ್ನು ಬಯಲಿಗೆಳೆದಿದೆ ಎಂದಿರುವ ಎಐಕೆಎಸ್ ಇದು ದೇಶವನ್ನು ಅರಾಕತೆ ಮತ್ತು ಕಾನೂನುಬಾಹಿರತೆಯತ್ತ ಎಳೆಯುವ ಒಂದು ಗಂಭೀರ ಸನ್ನಿವೇಶ ಎಂದು ಹೇಳಿದೆ. ಇದನ್ನು ಬಲವಾಗಿ ಪ್ರತಿರೋಧಿಸಬೇಕು, ಜನತೆಯ ಪ್ರಜಾಪ್ರಭುತ್ವ ಹಕ್ಕುಗಳು ಮತ್ತು ಸಮಾಜದ ಜಾತ್ಯತೀತ ಹಂದರವನ್ನು ರಕ್ಷಿಸಬೇಕಾದರೆ ಇದು ಅತ್ಯಗತ್ಯ ಎಂದು ಅಭಿಪ್ರಾಯ ಪಟ್ಟಿದೆ. ಆದ್ದರಿಂದ ಅಲವರ್ ಕೊಲೆಸುಲಿಗೆಯಲ್ಲಿ ಸಂಘಪರಿವಾರದ ಪಿತೂರಿಯನ್ನು ಹೊರಗೆಳೆಯಲು ಒಂದು ಉನ್ನತ ಮಟ್ಟದ ತನಿಖೆ ನಡೆಯಬೇಕಾಗಿದೆ, ಇದಕ್ಕಾಗಿ ಜನಗಳನ್ನು ಅಣಿನೆರೆಸಲು ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳಬೇಕಾಗಿದೆ ಎಂದು ಎಐಕೆಎಸ್ ಮುಖಂಡರು ಹೇಳಿದ್ದಾರೆ.

ಈ ಪ್ರಕರಣದಲ್ಲಿನ ಎಲ್ಲ ಅಪರಾಧಿಗಳಿಗೆ ಕಾನೂನಿನ ಪ್ರಕಾರ ಕಠಿಣ ಶಿಕ್ಷೆಯಾಗುವಂತೆ ಮಾಡಲು ಕಾನೂನು ನೆರವು ಸೇರಿದಂತೆ ಎಲ್ಲ ನೆರವನ್ನು ಒದಗಿಸಲಾಗುವುದು ಎಂದು ಎಐಕೆಎಸ್ ಮುಖಂಡರು ಈ ಹಳ್ಳಿ ಜನಗಳಿಗೆ ಮತ್ತು ಹಲ್ಲೆಗೊಳಗಾದವರ ಕುಟುಂಬಗಳ ಸದಸ್ಯರಿಗೆ ಭರವಸೆ ನೀಡಿದರು

ಕಸಾಯಿಖಾನೆ ನಿಷೇಧದ ಸುತ್ತ-ಮುತ್ತ

ಉತ್ತರ ಪ್ರದೇಶದಲ್ಲಿ ಭಾರೀ ಬಹುಮತದಿಂದ ಬಿಜೆಪಿ ಸರಕಾರ ರಚನೆಗೊಂಡ ಕೂಡಲೇ ಅಲ್ಲಿ ಮತ್ತು ದೇಶಾದ್ಯಂತ 'ಗೋರಕ್ಷಣೆ'ಯ ಗದ್ದಲ ತೀವ್ರಗೊಂಡಿದೆ.

* ಛತ್ತಿಸ್‌ಗಡ ಮುಖ್ಯಮಂತ್ರಿ ತನ್ನ ರಾಜ್ಯದಲ್ಲಿ ಕಳೆದ 15 ವರ್ಷಗಳಲ್ಲಿ ಒಂದೂ ಗೋವಧೆ ಕಂಡಬಂದಿಲ್ಲ, ಯಾರಾದರೂ ಗೋವಧೆ ಮಾಡುವವರು ಕಂಡುಬಂದರೆ ಅವರನ್ನು ನೇಣಿಗೆ ಹಾಕಬೇಕು ಎಂದು ಗುಡುಗಿದರು.
* ಅಲ್ಲಿಯ ಬಿಜೆಪಿ ಶಾಸಕರೊಬ್ಬರು ಹಸುವನ್ನು ಕೊಲ್ಲುವವರ ಅಥವ ಅದಕ್ಕೆ ಅಗೌರವ ತೋರಿಸುವವರ ಕೈಕಾಲು ಕತ್ತರಿಸುವುದಾಗಿ ಸಾರಿದ್ದಾರೆ.



* ಗೋಮಾಂಸದ ಮೇಲೆ ಸಂಪೂರ್ಣ ನಿಷೇಧ ಹಾಕಬೇಕು, ಜಾನುವಾರುಗಳ 'ಕಳ್ಳಸಾಗಾಣಿಕೆ' ನಿಲ್ಲಿಸಬೇಕು ಮತ್ತು 'ಕಾನೂನುಬಾಹಿರ' ಕಸಾಯಿ ಖಾನೆಗಳನ್ನು ಮುಚ್ಚಬೇಕೆಂಬ ವಿಹೆಚ್‌ಪಿ ಬೇಡಿಕೆಗೆ 'ಸ್ಪಂದಿಸಿರುವ' ಝಾರ್ಖಂಡ್ ಬಿಜೆಪಿ ಸರಕಾರ ಕಾನೂನುಬಾಹಿರ ಎನ್ನಲಾದ ಕಸಾಯಿಖಾನೆಗಳನ್ನು ನಿಷೇಧಿಸಿದೆ.
* ಗುಜರಾತ್ ಪ್ರಾಣಿ ಸಂರಕ್ಷಣಾ(ತಿದ್ದುಪಡಿ) ಕಾಯ್ದೆ, 2017ನ್ನು ಅಂಗೀಕರಿಸಿರುವ ಬಿಜೆಪಿ ಸರಕಾರ ಇನ್ನೂ ಮುಂದೆ ಹೋಗಿ ಗೋವಧೆಗೆ ಶಿಕ್ಷೆಯನ್ನು ಜೀವಾವಧಿಗೆ ವಿಸ್ತರಿಸಿದೆ ಮತ್ತು ಗೋಮಾಂಸ ಹೊಂದಿರುವುದು/ಸಾಗಣೆಗೆ 10ವರ್ಷಕ್ಕೆ ಹೆಚ್ಚಿಸಿದೆ. ಅಲ್ಲಿಯ ಮುಖ್ಯಮಂತ್ರಿಗಳಂತೂ ಗುಜರಾತನ್ನು ಸಂಪೂರ್ಣ 'ಶಾಕಾಹಾರಿ'ಯಾಗಿ ಮಾಡುವುದಾಗಿ ಸಾರಿದ್ದಾರೆ.
* ಈ ನಡುವೆ ಈಶಾನ್ಯ ಭಾರತದ ಬಿಜೆಪಿ ಮುಖಂಡರುಗಳು ತಮ್ಮ ಪ್ರದೇಶಕ್ಕೆ ಇವನ್ನೆಲ್ಲ ಅನ್ವಯಿಸುವುದಿಲ್ಲ ಎಂದು ಅಲ್ಲಿಯ ಜನಗಳಿಗೆ 'ಭರವಸೆ' ನೀಡಿದರೂ, ಕೇರಳದಲ್ಲಿ ಬಿಜೆಪಿಯ ಲೋಕಸಭಾ ಅಭ್ಯರ್ಥಿ ತಮ್ಮ ಕ್ಷೇತ್ರಜನಗಳಿಗೆ ಉತ್ತಮ ಗುಣಮಟ್ಟದ ಗೋಮಾಂಸ ಒದಗಿಸುವುದಾಗಿ ಭರವಸೆ ನೀಡಿದರೂ, ಆರೆಸ್ಸೆಸ್‌ನ ಮುಖ್ಯಸ್ಥರು ದೇಶಾದ್ಯಂತ ಗೋರಕ್ಷಣೆಯ ಕಾನೂನು ತರಬೇಕು ಎಂದು ನಮ್ಮ ಸಂವಿಧಾನದ ಒಕ್ಕೂಟ ತತ್ವಕ್ಕೇ ದಾಳಯಿಟ್ಟಿದ್ದಾರೆ.

ಉತ್ತರಪ್ರದೇಶದಉಚ್ಚ ನ್ಯಾಯಾಲಯ ಅವು ವಿವೇಚನೆಯಿಲ್ಲದ ಕ್ರಮಗಳು, ಈ ಬಗ್ಗೆ ವಿವೇಚನಾಪೂರ್ಣ ನಿರ್ಧಾರಕ್ಕೆ ಬನ್ನಿ ಎಂದು ಹೇಳುವಂತಾಗಿದೆ. ಆದರೆ ನಿಜಕ್ಕೂ ಇದು ಸಂಘಪರಿವಾರದ ವಿವೇಚನೆಯಿಲ್ಲದ ಕ್ರಮವೇ? ಈ ಪುಟಗಳಲ್ಲಿನ ಲೇಖನಗಳು ಇದನ್ನು ಪರಿಶೀಲಿಸುತ್ತವೆ.

ಬೇಸಾಯ ಸಮುದಾಯಗಳು, ಮಾಂಸ ವ್ಯಾಪಾರ ಮತ್ತು ಚರ್ಮ ಉದ್ದಿಮೆ ದಾಳಿ ಎದುರಿಸುತ್ತಿವೆ

ಸುಭಾಷಿಣಿ ಅಲಿ

ಕಸಾಯಿಖಾನೆಗಳನ್ನು ಮುಚ್ಚಿರುವ ಬಗ್ಗೆ ರಾಜ್ಯ ಸರಕಾರ ಮತ್ತು ಸಂಘಪರಿವಾರದ ವಿವಿಧ ಪ್ರತಿನಿಧಿಗಳು ಉದ್ದೇಶಪೂರ್ವಕವಾಗಿ ಇದು ಗೋಮಾಂಸದ ವಿರುದ್ಧ ಎನ್ನುತ್ತ ಅಲ್ಪಸಂಖ್ಯಾತ ಸಮುದಾಯದ ಸದಸ್ಯರನ್ನು ದೂಷಿಸುತ್ತಿವೆ. ಇದರಿಂದಾಗಿ ರಾಜ್ಯದ ಹಲವು ಭಾಗಗಳಲ್ಲಿ ಕಾನೂನುಹೀನತೆ ಮತ್ತು ಹಿಂಸಾಚಾರದ ಘಟನೆಗಳು ನಡೆದಿವೆ.

ವಾಸ್ತವವಾಗಿ ಇದು ಮಾಂಸದ ಉತ್ಪಾದನೆ, ಮಾರಾಟ ಮತ್ತು ಸಂಬಂಧಪಟ್ಟ ವಲಯಗಳನ್ನು ಅವಲಂಬಿಸಿರುವ ಲಕ್ಷಾಂತರ ಬಡ ಮುಸ್ಲಿಮರು ಮತ್ತು ದಲಿತ ಕಾರ್ಮಿಕರನ್ನು ನಿರುದ್ಯೋಗಿಗಳಾಗಿಸಿ ಮತ್ತು ರೈತರ ಮೇಲೆ ಮತ್ತಷ್ಟು ಹೊರೆ ಹೇರಿ ರಾಜ್ಯಕ್ಕೆ ಅಪಾರ ಆದಾಯ ನಷ್ಟ ತರುವ ಕ್ರಮ

ಭಾರತ ಜಗತ್ತಿನ ಅತಿ ದೊಡ್ಡ ಮಾಂಸ ಉತ್ಪಾದಕ ಮತ್ತು ರಫ್ತು ಮಾಡುವ ದೇಶಗಳಲ್ಲಿ ಒಂದು. ಮತ್ತು ದೇಶದ ಅತಿ ಹೆಚ್ಚು ಜನಸಂಖ್ಯೆಯ ರಾಜ್ಯವಾದ ಉತ್ತರಪ್ರದೇಶ ಮಾಂಸ ದೇಶದ ಒಟ್ಟು ವ್ಯಾಪಾರದಲ್ಲಿ 60% ದಷ್ಟಕ್ಕೆ ಹೊಣೆಯಾಗಿದೆ. ಕಳೆದ ಎರಡು ವರ್ಷಗಳಲ್ಲಿ 'ಗೋರಕ್ಷಕ' ಗುಂಪುಗಳ ಕಾವಲುಕೋರತನ, ಅವರು ಹುಟ್ಟಿಸಿದ ಭಯ ಈ ವ್ಯಾಪಾರ, ಬೇಸಾಯದ ಸಮುದಾಯಗಳು ಮತ್ತು ಚರ್ಮದ ಉದ್ದಿಮೆಯನ್ನು ಪ್ರತಿಕೂಲವಾಗಿ ತಟ್ಟಿದೆ.

ಹೊಸ ಬಿಜೆಪಿ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅಧಿಕಾರಕ್ಕೆ ಏರುವುದರೊಂದಿಗೆ ಇವು ಮೂರೂ-ಮಾಂಸದ ವ್ಯಾಪಾರ, ಬೇಸಾಯ ಮಾಡುವ ಸಮುದಾಯಗಳು ಮತ್ತು ಚರ್ಮ ಉದ್ದಿಮೆ-ತಮ್ಮ ಅಸ್ತಿತ್ವಕ್ಕೇ ಸಂಚಕಾರ ತರುವ ದಾಳಿಗಳನ್ನು ಎದುರಿಸುತ್ತಿವೆ.

'ಕಾನೂನುಬಾಹಿರ' ಎಂಬ ಅಪಪ್ರಚಾರ

ಅಧಿಕಾರದಲ್ಲಿರುವವರು, ಅವರ ಬೆಂಬಲಿಗರು ಮತ್ತು ಮಾಧ್ಯಮಗಳ ಕೆಲವು ವಿಭಾಗಗಳು ಈ ದಾಳಿ 'ಕಾನೂನುಬಾಹಿರ' ಕಸಾಯಿಖಾನೆಗಳು ಮತ್ತು ಲೈಸೆನ್ಸ್ ಇಲ್ಲದ ಮಾಂಸದ ವ್ಯಾಪಾರದ ಮೇಲಿನ ದಾಳಿಯಷ್ಟೇ ಎಂದು ಬದಿಗೊತ್ತಲು ಪ್ರಯತ್ನಿಸಿದ್ದಾರೆ.

ಆದರೆ ವಾಸ್ತವತೆ ಅತ್ಯಂತ ಭಿನ್ನವಾಗಿದೆ. ರಾಜ್ಯದಲ್ಲಿ 44 ಕಸಾಯಿಖಾನೆಗಳಿವೆ. ಅವುಗಳಲ್ಲಿ 27 ಮುಚ್ಚಿವೆ. ಈ ಮುಚ್ಚಿರುವ ಪ್ರತಿಯೊಂದೂ ನಗರಪಾಲಿಕೆಗಳು ಮತ್ತು ಪಟ್ಟಣ ಪ್ರದೇಶ ಸಮಿತಿಗಳ ಒಡೆತನದಲ್ಲಿರುವ, ಅವೇ ನಡೆಸುವ ಕಸಾಯಿಖಾನೆ. ಈ ಜವಾಬ್ದಾರಿ ನಿಭಾಯಿಸಲು ಈ ನಗರಸಭೆ, ಸಮಿತಿಗಳಿಗೆ ರಾಜ್ಯಸರಕಾರದಿಂದ ಹಣ ಕೊಡಲಾಗುತ್ತದೆ.

2013ರಲ್ಲಿ ಎಲ್ಲ ಕಸಾಯಿಖಾನೆಗಳನ್ನು ಮುಚ್ಚಿಸಬೇಕೆಂಬ ಕೋರಿಕೆಯ ರಿಟ್ ಅರ್ಜಿಯ ವಿಚಾರಣೆ ನಡೆಸಿದ ಸುಪ್ರಿಂ ಕೋರ್ಟ್ ಈ ಕಸಾಯಿಖಾನೆಗಳ ಕೆಲಸ ಮತ್ತು ಮೂಲರಚನೆಗಳನ್ನು ಸ್ಥಾಪಿತ ನಿಯಮಾವಳಿಗಳಿಗೆ ಅನುಸಾರವಾಗಿ ಉತ್ತಮಪಡಿಸಲು ಕ್ರಮಗಳನ್ನು ಕೈಗೊಳ್ಳಬೇಕು ಎಂದು ಅತ್ಯಂತ ಸ್ಪಷ್ಟವಾದ ಸೂಚನೆಗಳನ್ನು ನೀಡಿತ್ತು. ಇತ್ತೀಚೆಗೆ ರಾಜ್ಯ ಸರಕಾರ ಈ ನಿಟ್ಟಿನಲ್ಲಿ ಕೆಲವನ್ನು ಮಾಡಿತ್ತು. ಹೊಸ ಸರಕಾರ ಈ ಕಸಾಯಿಖಾನೆಗಳನ್ನು ಮುಚ್ಚಿಸಿ ಮಾಂಸದ ವ್ಯಾಪಾರದಲ್ಲಿ ತೊಡಗಿರುವ ಸಾವಿರಾರು ಜನರನ್ನು ಅವರದಲ್ಲದ ತಪ್ಪಿಗೆ ಶಿಕ್ಷಿಸುತ್ತಿದೆ. ನಿಜ ಹೇಳಬೇಕೆಂದರೆ ಅವರನ್ನು ಸರಕಾರವೇ ಸ್ವತಃ ಕೈಗೊಳ್ಳದ ಕ್ರಮಗಳು ಮತ್ತು ಮಾಡಿದ ತಪ್ಪುಗಳಿಗೆ ಶಿಕ್ಷಿಸಲಾಗುತ್ತಿದೆ.

ಅದೇ ರೀತಿಯಲ್ಲಿ, ಮಾಂಸ ಮಾರಾಟದ ಅಂಗಡಿಗಳಿಗೆ ಲೈಸೆನ್ಸ್ ನೀಡುವುದು ಮತ್ತು ನವೀಕರಿಸುವುದು ನಗರಸಭೆಗಳು ಮತ್ತು ಪಟ್ಟಣ ಪ್ರದೇಶ ಸಮಿತಿಗಳು. ಮಾಂಸ ವ್ಯಾಪಾರ ಮತ್ತು ಚರ್ಮದ ಉದ್ದಿಮೆಯ ಅತಿ ದೊಡ್ಡ ಕೇಂದ್ರಗಳಲ್ಲಿ ಒಂದಾದ ಕಾನ್ಪುರ ಸೇರಿದಂತೆ ಪ್ರಮುಖ ನಗರಗಳಲ್ಲೆಲ್ಲ, ಲಕ್ನೌ, ಅಲಹಾಬಾದ್, ಮೇರಠ್ ಇತ್ಯಾದಿಗಳಲ್ಲಿ ಇರುವುದು ಬಿಜೆಪಿಯದ್ದೇ ಹತೋಟಿ. ಈ ನಗರಗಳಲ್ಲಿ ಮಾಂಸದ ವ್ಯಾಪಾರಿಗಳು ಎಷ್ಟೇ ಪ್ರಯತ್ನ ಪಟ್ಟರೂ ಅವರ ಲೈಸೆನ್ಸ್‌ಗಳನ್ನು ನವೀಕರಿಸಲಿಲ್ಲ. ಈ ಮಾರ್ಚ್ 31 ರಂದು ಅವುಗಳ ಲೈಸೆನ್ಸ್‌ಗಳ ಅವಧಿ ಮುಗಿದಿದೆ.

ಇದರಿಂದಾಗಿ ಮಾಂಸ ಮಾರಾಟಗಾರರಿಗೆ ಏನು ಮಾಡುವುದೆಂದು ತೋಚದಾಗಿದೆ. ಅವರ ಜೀವನಾಧಾರವನ್ನೇ 'ಕಾನೂನುಬಾಹಿರ' ಮಾಡಿ ಬಿಡಲಾಗಿದೆ. ಕಾನ್ಪುರ ನಗರವೊಂದರಲ್ಲೇ 500ಕ್ಕೂ ಹೆಚ್ಚು ಮಾಂಸದಂಗಡಿಗಳಿವೆ. ಪ್ರತಿ ಅಂಗಡಿಯ ಮೇಲೆ ಕನಿಷ್ಟ ನಾಲ್ಕೈದು ಕುಟುಂಬಗಳ ಬದುಕು ಅವಲಂಬಿಸಿದೆ.

ಪ್ರತಿಯೊಂದು ಕಸಾಯಿಖಾನೆ ಹತ್ತಾರು ಲೋಡರುಗಳು, ರಿಕ್ಷಾ ಎಳೆಯುವವರು ಮತ್ತು ಗುಮಾಸ್ತರಿಗೆ ಉದ್ಯೋಗ ಒದಗಿಸಿವೆ. ಕಸಾಯಿಗಳು ಮತ್ತು ಮಾಂಸ ಮಾರುವವರಲ್ಲಿ ಬಹಳಷ್ಟು ಮಂದಿ ಮುಸ್ಲಿಮರಾದರೆ, ಸಂಬಂಧಪಟ್ಟ ಇತರ ಹಲವು ಕೆಲಸಗಳನ್ನು ತೊಡಗಿರುವವರು ದಲಿತರು. ಕಸಾಯಿಗಳು ಮತ್ತು ಮಾಂಸ ಮಾರುವವರಲ್ಲೂ ಒಂದು ವಿಭಾಗ ದಲಿತ ಉಪಜಾತಿಯಾದ ಖತಿಕ್ ಸಮುದಾಯಕ್ಕೆ ಸೇರಿದವರು. ಇವರೆಲ್ಲರು ಕೂಡ ನಿರುದ್ಯೋಗಿ ಗಳಾಗಿದ್ದಾರೆ. ಏಕೆಂದರೆ ಅವರು ಕೆಲಸ ಮಾಡುವ ಹಂದಿ ಮಾಂಸದ ಉತ್ಪಾದನೆ ಮಾಡುವ ಕಸಾಯಿಖಾನೆಗಳನ್ನೂ ಮುಚ್ಚಲಾಗಿದೆ. ಉದಾಹರಣೆಗೆ, ಕಾನ್ಪುರದಲ್ಲೇ 40-50 ಹಂದಿ ಮಾಂಸದ ಅಂಗಡಿಗಳಿವೆ.

ಕಾನೂನುಹೀನತೆ ಮತ್ತು ಹಿಂಸಾಚಾರ

ಕಸಾಯಿಖಾನೆಗಳನ್ನು ಮುಚ್ಚಿರುವ ಬಗ್ಗೆ ರಾಜ್ಯ ಸರಕಾರ ಮತ್ತು ಸಂಘಪರಿವಾರದ ವಿವಿಧ ಪ್ರತಿನಿಧಿಗಳು ಉದ್ದೇಶಪೂರ್ವಕವಾಗಿ ಇದು ಗೋಮಾಂಸದ ವಿರುದ್ಧ ಎನ್ನುತ್ತ ಅಲ್ಪಸಂಖ್ಯಾತ ಸಮುದಾಯದ ಸದಸ್ಯರನ್ನು ದೂಷಿಸುತ್ತಿವೆ. ಇದರಿಂದಾಗಿ ರಾಜ್ಯದ ಹಲವು ಭಾಗಗಳಲ್ಲಿ ಕಾನೂನುಹೀನತೆ ಮತ್ತು ಹಿಂಸಾಚಾರದ ಘಟನೆಗಳು ನಡೆದಿವೆ.

* ಹೊಸ ಸರಕಾರ ಅಧಿಕಾರ ವಹಿಸಿಕೊಂಡ ಕೂಡಲೇ ಹಾಥ್ರಸ್‌ನಲ್ಲಿ ಮಧ್ಯರಾತ್ರಿಯ ವೇಳೆಯಲ್ಲಿ ಮೂರು ಕೋಳಿಮಾಂಸದ ಅಂಗಡಿಗಳನ್ನು ಸುಟ್ಟು ಹಾಕಲಾಯಿತು.
* ಕಾಸ್‌ಗಂಜ್‌ನಲ್ಲಿ ಪೋಲಿಸ್‌ನವರೇ, ಕಾವಲುಕೋರರಂತೆ ವರ್ತಿಸುತ್ತ ಮುಸ್ಲಿಮ್ ಕುಟುಂಬವೊಂದರ ಮದುವೆಯ ಸಮಾರಂಭದೊಳಕ್ಕೆ ನುಗ್ಗಿ ಮಾಂಸದ ಊಟ ಬಡಿಸಬಾರದು ಎಂದು ಹೆದರಿಸಿದರು.
* ಕುಶಿನಗರ್‌ನಲ್ಲಿ ಗೋಮಾಂಸವನ್ನು ಜಪ್ತಿಮಾಡುವ ನೆವದಲ್ಲಿ ಮುಸ್ಲಿ ಮನೆಯೊಂದರ ಮೇಲೆ ದಾಳಿ ಮಾಡಿದರು, ಸುತ್ತಮುತ್ತಲ ಹಲವರನ್ನು ಥಳಿಸಿದರು. ಅವರಿಗೆ ಗೋಮಾಂಸವೇನೂ ಸಿಗಲಿಲ್ಲ.
* ಮೊರಾದಾಬಾದ್‌ನಿಂದಲೂ ಇಂತಹ ಘಟನೆ ವರದಿಯಾಗಿದೆ.
* ಕಾನ್ಪುರದಲ್ಲಿ 'ಗೋರಕ್ಷಕ'ರು ಉನ್ನಾವ್‌ನ ರಫ್ತು ಘಟಕಗಳಿಗೆ ಎಮ್ಮೆಗಳನ್ನು ಸಾಗಿಸುವ ವಾಹನಗಳನ್ನು ತಡೆಯುವ ಕನಿಷ್ಟ ಮೂರು ಘಟನೆಗಳು ವರದಿಯಾಗಿದೆ. ಜಾನುವಾರುಗಳನ್ನು ಬಿಚ್ಚಿ ಬಿಟ್ಟು(ಅಥವ ಒಯ್ದು ಬಿಟ್ಟು) ಅವುಗಳಲ್ಲಿದ್ದ ಜನಗಳನ್ನು ಪೋಲೀಸ್ ಸ್ಟೇಶನ್‌ಗಳಿಗೆ ಒಯ್ಯಲಾಯಿತು, ಅವರನ್ನು ಬೈದು, ಬೆದರಿಸಿ, ಎರಡು ಘಟನೆಗಳಲ್ಲಿ ಭಾರೀ ಲಂಚ ಪಡೆದು ಬಿಡಲಾಯಿತು.

ಇಂತಹ ಘಟನೆಗಳು, ಬೆದರಿಕೆಗಳು ಹುಟ್ಟಿಸಿದ ಭಯದಿಂದಾಗಿ ಜಾನುವಾರುಗಳ ಮಾರಾಟ ಮತ್ತು ಸಾಗಾಣಿಕೆ ರಾಜ್ಯದಲ್ಲಿ ಸಂಪೂರ್ಣ ಸ್ಥಗಿತಗೊಂಡಿದೆ.

ರೈತರ ಸಮಸ್ತ ಆರ್ಥಿಕಕ್ಕೆ ಸಂಚಕಾರ

ರಾಜ್ಯದ ಪ್ರತಿಯೊಂದು ಜಿಲ್ಲೆಯಲ್ಲಿ ಹಲವು ಸ್ಥಳಗಳಲ್ಲಿ ನಡೆಯುವ ವಾರದ ಸಂತೆಗಳಲ್ಲಿ ಎಮ್ಮೆಗಳ ಕೊಡು-ಕೊಳ್ಳುವಿಕೆ ನಡೆಯುತ್ತಿರುತ್ತಿತ್ತು. ಇಂತಹ ಪ್ರತಿಯೊಂದು ಸಂತೆಯಲ್ಲಿ ಸುತ್ತಲಿನ ರೈತರು 500 ರಿಂದ 1000 ಜಾನುವಾರುಗಳನ್ನು ಕಸಾಯಿಖಾನೆಗಳಿಗೆ ಮಾರುತ್ತಿದ್ದರು. ಬುಲಂದ್‌ಶಹರ್‌ನ್ ಗುಲೋಟಿ ಗ್ರಾಮದ ಸಂತೆಯಲ್ಲಿ ಪ್ರತಿವಾರ 800ರಿಂದ 1500 ಎಮ್ಮೆಗಳ ಮಾರಾಟವಾಗುತ್ತಿತ್ತು. ರಾಜ್ಯಾದ್ಯಂತ ರೈತರು ಹಾಲು ಉತ್ಪಾದನೆಗೆ ಎಮ್ಮೆಗಳನ್ನು ಖರೀದಿಸುತ್ತಾರೆ. ಏಕೆಂದರೆ ಅವು ಹಾಲು ಕೊಡುವುದನ್ನು ನಿಲ್ಲಿಸಿದ ಮೇಲೆ ಮಾಂಸಕ್ಕಾಗಿ ಮಾರಬಹುದು ಎಂದು ಅವರಿಗೆ ಗೊತ್ತಿದೆ. ಇದೊಂದು ಅವರಿಗೆ ಲಾಭ ತರುವ ಕ್ರಿಯೆ.

ಆದರೆ ಕಳೆದೆರಡು ವಾರಗಳಿಂದ ಎಮ್ಮೆಗಳನ್ನು ಸಾಗಿಸುವಲ್ಲಿನ ಅಪಾಯದಿಂದಾಗಿ ಅವರ ಎಮ್ಮೆಗಳನ್ನು ಖರೀದಿಸುತ್ತಿಲ್ಲ ಹಾಗೂ ಅವುಗಳ ಮಾಂಸವನ್ನು ಮಾರುತ್ತಿಲ್ಲ. ಇದರ ಅರ್ಥ ಈಗಾಗಲೇ ಬರದಿಂದ, ಹವಾಮಾನ ಏರುಪೇರಿನಿಂದ ಮತ್ತು ತಮ್ಮ ಉತ್ಪನ್ನಗಳಿಗೆ ಅಗತ್ಯ ಬೆಲೆಗಳು ಸಿಗದ್ದರಿಂದ ಕಂಗಾಲಾಗಿರುವ ಸಣ್ಣ ರೈತರ ಸಮಸ್ತ ಆರ್ಥಿಕಕ್ಕೆ ದೊಡ್ಡ ಬೆದರಿಕೆ ಬಂದಿದೆ. ಅಲ್ಲದೆ, ಇನ್ನು ಮುಂದೆ ಅವರು ಹಾಲು ಕೊಡುವ ಎಮ್ಮೆಗಳನ್ನು ಖರೀದಿಸಲು ಹಿಂದೇಟು ಹಾಕುತ್ತಾರೆ, ಅದರಿಂದಾಗಿ ಇಡೀ ಹೈನುಗಾರಿಕೆ ಉದ್ದಿಮೆಗೂ ಬೆದರಿಕೆ ಬಂದಿದೆ.

ರಫ್ತು ಉದ್ದಿಮೆಗೂ ತೊಂದರೆ

ಅತ್ಯಂತ ಯಶಸ್ವಿಯಾಗಿರುವ ಮತ್ತು ಲಾಭದಾಯಕವಾಗಿರುವ ಮಾಂಸ ರಫ್ತು ಉದ್ದಿಮೆಯ ಮೇಲೂ ದುಷ್ಪರಿಣಾಮ ಉಂಟಾಗಿದೆ. ಮಾಂಸ ಉತ್ಪಾದನೆಗೆ ಅಗತ್ಯವಾದ ಎಮ್ಮೆಗಳ ಪೂರೈಕೆ ಇಲ್ಲವಾಗಿರುವುದರಿಂದ ಅವರ ಕೆಲಸಗಳು ಸ್ಥಗಿತಗೊಂಡಿವೆ. ಕಸಾಯಿಖಾನೆಗಳು ಮತ್ತು ಮಾಂಸದ ಅಂಗಡಿಗಳು ಮುಚ್ಚಿರುವುದರಿಂದ ಎಮ್ಮೆಗಳ ಬೆಲೆಗಳು ಸಾಕಷ್ಟು ಇಳಿದು ತಮಗೆ ಪ್ರಯೋಜನವಾಗಬಹುದು ಎಂದು ಅವರು ನಿರೀಕ್ಷಿಸಿದ್ದರೂ, ಪೂರೈಕೆ ಈಗ ನಿಂತೇ ಹೋಗಿರುವುದರಿಂದಾಗಿ ಅವರೂ ತೊಂದರೆಗೊಳಗಾಗಿದ್ದಾರೆ.

ಚರ್ಮಉದ್ದಿಮೆಯ ಮೇಲೆ ದುಷ್ಪರಿಣಾಮ ದಲಿತ ಕಾರ್ಮಿಕರ ಲೇ-ಆಫ್

ರಾಜ್ಯದಲ್ಲಿ ಚರ್ಮ ಉದ್ದಿಮೆಯ ಬೆಳವಣಿಗೆಯಲ್ಲಿ ಅಪಾರ ಪ್ರಮಾಣದಲ್ಲಿ ಚರ್ಮ ಸಿಗುತ್ತಿರುವುದು ಒಂದು ಮಹತ್ವದ ಸಂಗತಿಯಾಗಿದೆ. ಚರ್ಮ ಉದ್ದಿಮೆ ಅರೆ ಹದಗೊಳಿಸಿದ ಚರ್ಮಗಳು, ಪೂರ್ಣ ಹದಗೊಳಿಸಿದ ಚರ್ಮಗಳು, ಜೀನುಗಳು, ಪಾದರಕ್ಷೆಗಳು, ಉಡುಗೆಗಳು ಮತ್ತು ಪೀಠೋಪಕರಣಗಳ ವರೆಗೆ ಬೆಳೆದಿದೆ. ಆಂತರಿಕ ಮತ್ತು ರಫ್ತು ಮಾರುಕಟ್ಟೆಗಳೆರಡೂ ಸಾಕಷ್ಟು ವಿಸ್ತರಿಸಿವೆ. ಈಗ ಒಣ ಹದಮಾಡಿದ ಚರ್ಮದ ಪೂರೈಕೆ ಇಳಿದಿರುವುದರಿಂದಾಗಿ ಬೆಲೆಗಳು 12ರಿಂದ 15ಶೇ. ಏರಿವೆ ಮಾತ್ರವಲ್ಲ, ಒಣ ಹದಗೊಳಿಸಿದ ಚರ್ಮದ ಲಭ್ಯತೆ ಸಂಪೂರ್ಣ ಅನಿಶ್ಚಿತವಾಗಿರುವುದರಿಂದ ಚರ್ಮ ಉದ್ದಿಮೆಯ ಘಟಕಗಳು ಮುಚ್ಚುತ್ತಿವೆ, ಕಾರ್ಮಿಕರ ಲೇ-ಆಫ್‌ಗಳು ಆಗುತ್ತಿವೆ.

ಕಾನ್ಪುರದ 203 ಚರ್ಮ ಹದಮಾಡುವ ಘಟಕಗಳು ಮುಚ್ಚುವ ಪರಿಸ್ಥಿತಿ ಉಂಟಾಗಿದೆ. ಇವುಗಳಲ್ಲಿ 100ರಿಂದ 500 ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ. ಇವರಲ್ಲಿ 75ಶೇ.ಕ್ಕಿಂತ ಹೆಚ್ಚು ದಲಿತರು. 100 ದೊಡ್ಡ ಚರ್ಮ ಹದಮಾಡುವ ಘಟಕಗಳು ಕೆಲಸ ಮಾಡುತ್ತಿದ್ದರೂ ಅಲ್ಲಿಯೂ ದೊಡ್ಡ ಸಂಖ್ಯೆಯಲ್ಲಿ ಕಾರ್ಮಿಕರ ಲೇ-ಆಫ್ ಆಗಿದೆ. ಇವರಲ್ಲಿಯೂ ಹೆಚ್ಚಿನವರು ದಲಿತರು.

ಇವೆಲ್ಲ ರಾಜ್ಯಕ್ಕೆ ಅಪಾರ ಆದಾಯ ನಷ್ಟ, ಚರ್ಮ ಉದ್ದಿಮೆಯ ಮಾಲಕರ, ರಫ್ತು ವಲಯದ ಮತ್ತು ಅಂಗಡಿಗಳ ಲಾಭಗಳಲ್ಲಿ ಭಾರೀ ನಷ್ಟ ತಂದಿದ್ದರೆ, ಇನ್ನೊಂದೆಡೆಯಲ್ಲಿ ಈಗಾಗಲೇ ಬಿಕ್ಕಟ್ಟು ಎದುರಿಸುತ್ತಿರುವ ರೈತರ ಮೇಲೆ ಲೆಕ್ಕವಿಲ್ಲದಷ್ಟು ಹೊರೆಗಳನ್ನು ಹಾಕಿದೆ, ಅತ್ಯಂತ ಬಡವಿಭಾಗಗಳಿಗೆ ಉದ್ಯೋಗಗಳೇ ಸಿಗದ ಸನ್ನಿವೇಶದಲ್ಲಿ ಅಪಾರ ಪ್ರಮಾಣದಲ್ಲಿ ಉದ್ಯೋಗನಷ್ಟಗಳನ್ನು ಉಂಟುಮಾಡಿದೆ. ○

ಅಲ್ಪಸಂಖ್ಯಾತ–ವಿರೋಧಿ ಅಜೆಂಡಾ + ಕಾರ್ಪೊರೇಟ್–ಪರ ಅಜೆಂಡಾ

ಅರ್ಚನಾ ಪ್ರಸಾದ್



ಕಸಾಯಿಖಾನೆ ನಿಷೇಧದಲ್ಲಿ ಒಂದು ನಿರ್ದಿಷ್ಟ ವರ್ಗ ಆಯಾಮವನ್ನು ನಾವು ಕಾಣಬಹುದು. ಯೋಗಿ ಸರಕಾರ ಕೆಲವು ದೊಡ್ಡ ಪ್ರಮಾಣದ ಎಮ್ಮೆ ಮಾಂಸ ರಫ್ತುಗಾರರಿಗೆ ಅನುಕೂಲ ಮಾಡಿಕೊಡಲು ತನ್ನ 'ತತ್ವ'ವನ್ನು ಬಳಸಿಕೊಂಡಿದೆ. ಈ ರಫ್ತುಗಾರರು ಬಹುತೇಕ ಮುಸ್ಲಿಮೇತರರು, ಸಾಕಷ್ಟು ಬಂಡವಾಳ ಇರುವವರು. ಈ ಮೂಲಕ ಅವರು ಅಲ್ಪಸಂಖ್ಯಾತ–ವಿರೋಧಿ ಅಜೆಂಡಾ ಮಾತ್ರವಲ್ಲ, ತನ್ನ ಬಳ ಗಟ್ಟಿಯಾದ ಕಾರ್ಪೊರೇಟ್–ಪರ ಅಜೆಂಡಾವೂ ಇದೆ ಎಂದು ತೋರಿಸುತ್ತಿದ್ದಾರೆ.

ಗೋರಕ್ಷಣೆ ಕುರಿತಂತೆ ಆಕ್ರಾಮಕ ಹಿಂದುತ್ವ ಸ್ಪರ್ಧೆ ಕೇವಲ ಸಾಂಸ್ಕೃತಿಕ ಸಂಕುಚಿತವಾದ ಮತ್ತು ಕುರುಡು ಹಿಂದೂ ರಾಷ್ಟ್ರವಾದದ ಸಂಗತಿಯಷ್ಟೇ ಅಲ್ಲ, ಅದಕ್ಕಿಂತ ಹೆಚ್ಚಾಗಿ ಇದರಲ್ಲಿ ಗೋವಧೆ ನಿಷೇದದ ಕಾರ್ಪೊರೇಟ್ ನೆಲೆ ವ್ಯಕ್ತವಾಗಿದೆ. ಇದು ಕಾರ್ಪೊರೇಟ್ ಗೋಮಾಂಸ ಮತ್ತು ಎಮ್ಮೆ ಮಾಂಸ ರಫ್ತುಗಾರರಿಗೆ ಅನುಕೂಲ ಮಾಡಿಕೊಡುವ ಮುಸುಕು ಹೊದ್ದಿರುವ ಕಾರ್ಯತಂತ್ರ.

ಒಂದು ಅಧ್ಯಯನ ತೋರಿಸಿರುವಂತೆ ಗೋಮಾಂಸ–ಎಮ್ಮೆ ಮಾಂಸದ ಎರಡು ಪ್ರತ್ಯೇಕ ಮೌಲ್ಯ ಸರಪಳಿಗಳಿವೆ. ಆಂತರಿಕ ಮಾರುಕಟ್ಟೆಗೆ ಸಂಬಂಧಪಟ್ಟ ಸರಣಿ ಸಣ್ಣ ಪ್ರಮಾಣದ ಉತ್ಪಾದಕರನ್ನು ಅವಲಂಬಿಸಿದೆ. ಇವರು ಮುನಿಸಿಪಲ್ ಕಸಾಯಿಖಾನೆಗಳು ಮತ್ತು ಹಿತ್ತಲ ಕಸಾಯಿ ಮೂಲಕ ಕೆಲಸ ಮಾಡುತ್ತಾರೆ.

ಇನ್ನೊಂದು ರಫ್ತು ಮೌಲ್ಯದ ಸರಪಳಿ. ಇದು ಅತ್ಯಂತ ಆಧುನೀಕೃತ ಮತ್ತು ಎನ್‌ಜಿಟಿ ಗುಣಮಟ್ಟವನ್ನು ಅನುಸರಿಸುವ ಕಸಾಯಿಖಾನೆಗಳ ಮೂಲಕ ನಡೆಯುತ್ತದೆ.

ಆಂತರಿಕ ಮಾರುಕಟ್ಟೆಯಲ್ಲಿ ತನ್ನ ಹಾಲು ಕೊಡದ ಜಾನುವಾರನ್ನು ಮಾರುವ ರೈತ ಮೌಲ್ಯ ಸರಪಳಿಯ ಕೊನೆಯ ಕೊಂಡಿ. ಈ ಕೊಂಡಿಯಲ್ಲಿ ಅತಿ ಕಡಿಮೆ ಪ್ರತಿಫಲ ಪಡೆಯುವಾತ ಕಸಾಯಿ. ಹೆಚ್ಚಾಗಿ ಇವರೆಲ್ಲ ಮುಸ್ಲಿಂ ಸಮುದಾಯದಿಂದ ಬಂದವರು. ಇತರರೆಲ್ಲ ಇತರ ಸಮುದಾಯಗಳವರು. ಆದರೆ ಇವರ ಆದಾಯಗಳೂ ಬಹಳ ಹೆಚ್ಚೇನಿಲ್ಲ. ಅತ್ತ ಎಮ್ಮೆ ಮಾಂಸ ರಫ್ತು ಮಾಡುವ ಕಸಾಯಿಖಾನೆಗಳ ರಾಜಕೀಯ ಆರ್ಥಿಕ ಸಂಪೂರ್ಣ ಭಿನ್ನವಾಗಿದೆ ಹಾಗೂ ಭಾರೀ ಲಾಭದಾಯಕವಾಗಿದೆ.

ಭಾರತ ಸರಕಾರದ ಕೃಷಿ ಮತ್ತು ಸಂಸ್ಕರಿತ ಆಹಾರಉತ್ಪನ್ನಗಳ ರಫ್ತು ಪ್ರಾಧಿಕಾರ (ಎಪಿಇಡಿಎ)ದ ಪ್ರಕಾರ ಉತ್ತರಪ್ರದೇಶದಲ್ಲಿ 38 ನೊಂದಾಯಿತ ಮಾಂಸ ರಫ್ತುಗಾರರಿದ್ದಾರೆ. ಬಹಳಷ್ಟು ರಫ್ತುಗಾರರು ಸಗಟು ಮಾಂಸ ವ್ಯಾಪಾರಿಗಳಿಂದ ಅಥವ ಮುನಿಸಿಪಲ್ ಕಸಾಯಿಖಾನೆಗಳಿಂದ ತಮಗೆ ಬೇಕಾದ ಮಾಂಸವನ್ನು ಪಡೆಯುತ್ತಾರೆ.

ಈ ಹಿನ್ನೆಲೆಯಲ್ಲಿ ನೋಡಿದಾಗ ಕಸಾಯಿಖಾನೆ ನಿಷೇಧವನ್ನು ಆಧುನೀಕೃತ ಕಸಾಯಿ ಖಾನೆಗಳನ್ನು ಉಳಿಸಿ ಮುನಿಸಿಪಲ್ ಮತ್ತು ಹಿತ್ತಲ ಕಸಾಯಿಖಾನೆಗಳ ಮೇಲೆ ಗುರಿಯಿಡುವಂತೆ ರೂಪಿಸಲಾಗಿದೆ. ಇಂತಹ ಸನ್ನಿವೇಶದಲ್ಲಿ ಅತಿ ಹೆಚ್ಚು ದುಷ್ಪರಿಣಾಮ ಉಂಟಾಗುವುದು ತುಸು ಹೆಚ್ಚುವರಿ ಆದಾಯಕ್ಕಾಗಿ ಜಾನುವಾರು ಸಾಕಣೆ ಮಾಡಿ ತಮ್ಮ 'ಅನುತ್ಪಾದಕ' ಜಾನುವಾರುಗಳನ್ನು ಮಾರುವ ರೈತರು. ಇವರು ಸಣ್ಣ ಪ್ರಮಾಣದ, ಆಧುನೀಕರಿಸಿರದ ಕಸಾಯಿಖಾನೆಗಳನ್ನು ಅವಲಂಬಿಸಿರುವವರು.

ಎರಡನೆಯದಾಗಿ ಈ ಕಸಾಯಿಖಾನೆಗಳನ್ನು ಅವಲಂಬಿಸಿರುವ ಸುಮಾರು 25 ಲಕ್ಷ ಜನಗಳ ಮೇಲೆ ಇದು ದುಷ್ಪರಿಣಾಮ ಬೀರಲಿದೆ. ಬಹುಶಃ ಇದರಲ್ಲಿ ಅತಿ ಹೆಚ್ಚು ಬಾಧೆಗೊಳಗಾಗುವವರು ಕಸಾಯಿಗಳು, ಬಹುಪಾಲು ಮುಸ್ಲಿಂ ಸಮುದಾಯಕ್ಕೆ ಸೇರಿದವರು.

ಮೂರನೆಯದಾಗಿ, ಬಹುಶಃ ಈ ಬೀಸುಕ್ರಮ ಮುನಿಸಿಪಲ್ ಕಸಾಯಿಖಾನೆಗಳ ಆಧುನೀಕರಣಕ್ಕೆ ಕುಮ್ಮಕ್ಕು ನೀಡುವ ಉದ್ದೇಶ ಹೊಂದಿದೆ. ಈ ಆಧುನೀಕರಣವನ್ನು ಸರಕಾರ ಪಿಪಿಪಿ, ಅಂದರೆ ಸಾರ್ವಜನಿಕ–ಖಾಸಗಿ–ಪಾಲುದಾರಿಕೆಯ ಮೂಲಕ ಮಾಡಬೇಕೆಂದಿದೆ. ಏಕೆಂದರೆ ಆಧುನೀಕರಣಕ್ಕೆ ಪ್ರತಿ ಕಸಾಯಿಖಾನೆಗೆ 10–15 ಕೋಟಿ ರೂ.ಗಳು ಬೇಕು.

ಅಂದರೆ ಇದರ ಅರ್ಥ ಮಾಂಸ ರಫ್ತು ಕಾರ್ಪೊರೇಟ್‌ಗಳು ಇವುಗಳಲ್ಲಿ ಹಣ ತೊಡಗಿಸುವಂತೆ, ಆಮೂಲಕ ಮುನಿಸಿಪಲ್ ಮತ್ತು ಸಣ್ಣ ಕಸಾಯಿಖಾನೆಗಳಲ್ಲಿ ಪಾಲುದಾರರಾಗುವಂತೆ ಉತ್ತೇಜಿಸುವುದು. ಅಮೂಲಕ ಸಣ್ಣ ಪ್ರಮಾಣದ ಉತ್ಪಾದಕರನ್ನು ಧ್ವಂಸ ಮಾಡುವುದು. ಪರಿಣಾಮವಾಗಿ ನಿರುದ್ಯೋಗಿ ಕಸಾಯಿಗಳು ಈ ಕಾರ್ಪೊರೇಟ್ ರಫ್ತುಗಾರರಿಗೆ ಅಗ್ಗದ ನುರಿತ ಕೆಲಸಗಾರರಾಗಿ ಲಭ್ಯವಾಗುತ್ತಾರೆ, ಅವರ ಉತ್ಪಾದನಾ ವೆಚ್ಚ ಅಷ್ಟರಮಟ್ಟಿಗೆ ಇಳಿದು ಲಾಭ ಹೆಚ್ಚುತ್ತದೆ.

ಹೀಗೆ ಕಸಾಯಿಖಾನೆ ನಿಷೇಧದಲ್ಲಿ ಒಂದು ನಿರ್ದಿಷ್ಟ ವರ್ಗ ಆಯಾಮವನ್ನು ನಾವು ಕಾಣಬಹುದು. ಯೋಗಿ ಸರಕಾರ ಕೆಲವು ದೊಡ್ಡ ಪ್ರಮಾಣದ ಎಮ್ಮೆ ಮಾಂಸ ರಫ್ತುಗಾರರಿಗೆ ಅನುಕೂಲ ಮಾಡಿಕೊಡಲು 'ತತ್ವ'ವನ್ನು ಬಳಸಿಕೊಂಡಿದೆ. ಈ ರಫ್ತುಗಾರರು ಬಹುತೇಕ ಮುಸ್ಲಿಮೇತರರು, ಸಾಕಷ್ಟು ಬಂಡವಾಳ ಇರುವವರು. ಈ ಮೂಲಕ ಅವರು ಅಲ್ಪಸಂಖ್ಯಾತ–ವಿರೋಧಿ ಅಜೆಂಡಾ ಮಾತ್ರವಲ್ಲ, ತನ್ನ ಬಳಿ ಗಟ್ಟಿಯಾದ ಕಾರ್ಪೊರೇಟ್–ಪರ ಅಜೆಂಡಾವೂ ಇದೆ ಎಂದು ತೋರಿಸುತ್ತಿದ್ದಾರೆ. ಈ ಕಾರ್ಪೊರೇಟ್ ಮಂದಿ ಮುಂದೆ ಸಣ್ಣ ಉತ್ಪಾದಕರು ಮತ್ತು ವ್ಯಾಪಾರಿಗಳ ಹತೋಟಿಯಲ್ಲಿರುವ ಆಂತರಿಕ ಮಾರುಕಟ್ಟೆಗೂ ತಮ್ಮ ಪ್ರಭಾವವನ್ನು ವಿಸ್ತರಿಸಬಲ್ಲರು.

ಕಾರ್ಪೊರೇಟ್ 'ಗೋಶಾಲೆ' 'ಮೇಡ್ ಇನ್ ಇಂಡಿಯ' ಗೋಮೂತ್ರ, ಸಗಣಿ ....

ಉತ್ತರಪ್ರದೇಶ ಸರಕಾರದ ಮಂದಿ ಕಸಾಯಿಖಾನೆಗಳ ಮತ್ತು ಮಾಂಸ ವ್ಯಾಪಾರದ ವಿರುದ್ಧ ತಮ್ಮ ಕ್ರಮಗಳನ್ನು ಸಮರ್ಥಿಸಿಕೊಳ್ಳಲು 'ರಾಷ್ಟ್ರೀಯ ಹಸಿರು ನ್ಯಾಯಮಂಡಳಿ'(ನ್ಯಾಶನಲ್ ಗ್ರೀನ್ ಟ್ರಿಬ್ಯೂನಲ್–ಎನ್‌ಜಿಟಿ)ಯ ಮೇ 2015ರ ತೀರ್ಪನ್ನು ತೋರಿಸುತ್ತಾರೆ. ಇದು ಉತ್ತರಪ್ರದೇಶ ಪರಿಸರ ಮಾಲಿನ್ಯ ಹತೋಟಿ ಮಂಡಳಿ(ಯುಪಿಇಸಿಬಿ)ಯ ಅರ್ಜಿಯ ಮೇಲೆ ನೀಡಿದ ತೀರ್ಪು. ಈ ತೀರ್ಪು ಎನ್‌ಜಿಟಿಯ ವೆಬ್‌ತಾಣದಲ್ಲಾಗಲೀ, ಯುಪಿಇಸಿಬಿ ವೆಬ್‌ತಾಣದಲ್ಲಾಗಲೀ ಕಾಣಸಿಗುತ್ತಿಲ್ಲ.

ಯುಪಿಪಿಸಿಬಿ 2015ರಲ್ಲಿ ಪರಿಸರಕ್ಕೆ ಅತ್ಯಂತ ಹಾನಿಕಾರಕ ಎಂದು 129 ಕೈಗಾರಿಕಾ ಘಟಕಗಳನ್ನು ಗುರುತಿಸಿ ಈ ಅರ್ಜಿ ಹಾಕಿತ್ತು. ಈ 129ರಲ್ಲಿ 44 ಕಸಾಯಿಖಾನೆಗಳೂ ಇದ್ದವು. ಬಿಜೆಪಿ ಸರಕಾರ ಪರಿಸರ ಮಾಲಿನ್ಯ ಮಾಡುತ್ತಿವೆ ಎಂದು ಪಟ್ಟಿ ಮಾಡಿದ ಜವಳಿ ಮತ್ತು ನೂಲು ಘಟಕಗಳು, ಅಲ್ಯುಮಿನಿಯಂ ಲೋಹ ತೆಗೆಯುವ ಘಟಕಗಳು, ಲೋಹ ಲೇಪನ ಘಟಕಗಳು ಮತ್ತು ಮರದ ತಿರುಳು ಸಂಸ್ಕರಣ ಹಾಗೂ ಕಾಗದ ತಯಾರಿಕಾ ಘಟಕಗಳನ್ನೆಲ್ಲ ಪರಿಸರ ಮಾಲಿನ್ಯವನ್ನು ಮುಂದುವರೆಸಲು ಬಿಟ್ಟು ಕಸಾಯಿಖಾನೆಗಳನ್ನಷ್ಟೇ ಆರಿಸಿಕೊಂಡಿದೆ.

ಆಂತರಿಕ ಬಳಕೆಯ ಬೀಫ್‌ನ(ರಫ್ತು ನಿರೂಪಣೆಯಲ್ಲಿ ಬೀಫ್ ಎಂದರೆ ಹಸು ಮತ್ತು ಎಮ್ಮೆ ಮಾಂಸ ಎರಡೂ ಸೇರುತ್ತವೆ) ಏಕೈಕ ಮೂಲವಾದ ಕಸಾಯಿಖಾನೆಗಳನ್ನು ಮುಚ್ಚುವುದಕ್ಕಾಗಿಯೇ ವಾಸ್ತವವಾಗಿ ಈ ಎಲ್ಲ ಕ್ರಮಗಳು. .'ಕಾನೂನುಬಾಹಿರತೆ'ಯ ಹೆಸರಲ್ಲಿ ಅವರ ಕ್ರಮಗಳು ಸ್ಪಷ್ಟವಾಗಿ ಕೋಮುವಾದಿ, ಬಹಳಷ್ಟು ಮಂದಿಗೆ ಇದೇ ಜೀವನಾಧಾರವಾಗಿರುವ ಮುಸ್ಲಿಮ್ ಸಮುದಾಯವನ್ನು ಆರ್ಥಿಕವಾಗಿ ಹೆಳವರಾಗಿಸುವ ಕ್ರಮಗಳು ಎನ್ನುತ್ತಾರೆ ಜತೆಗೆ ಸಂಘ ಪರಿವಾರದ ಸ್ವಚ್ಛ ಭಾರತ ಕಣ್ಣೋಟಕ್ಕೆ ಅನುಸಾರವಾಗಿ ಎಮ್ಮೆ ಮಾಂಸ ಸೇವನೆಯನ್ನು ನಿಲ್ಲಿಸುವುದು ಕೂಡ ಇದರ ಉದ್ದೇಶ. ಆದರೆ ಇದು ಸಂಪೂರ್ಣ ಮಾರುಕಟ್ಟೆ ಸರಣಿಯನ್ನು, ಅಂದರೆ ಕಾರ್ಮಿಕರು, ವ್ಯಾಪಾರಿಗಳು ಮತ್ತು ಬಳಕೆದಾರರನ್ನು ತಟ್ಟುತ್ತದೆ.

ಉತ್ತರಪ್ರದೇಶದಲ್ಲಿ ಇದುವರೆಗೆ ಬಿಜೆಪಿ ಸರಕಾರ ಹೆಚ್ಚಿನ ಎಮ್ಮೆ ಮಾಂಸ ರಫ್ತು ಘಟಕಗಳನ್ನು ಮುಟ್ಟಿಲ್ಲ. ಈ ವಿಷಯದಲ್ಲೂ ಅದು ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ಹೇಳಿದ್ದನ್ನು ಜಾರಿ ಮಾಡಿದರೆ ಇದ–ರಿಂದ 2015–16ರಲ್ಲಿ ದೇಶಕ್ಕೆ ಅತಿ ಹೆಚ್ಚು ಆದಾಯ ಗಳಿಸಿದ ಭಾರತದ ಸಮಸ್ತ ಎಮ್ಮೆ ಮಾಂಸ ರಫ್ತು ಕುಸಿಯುತ್ತದೆ, ಜತೆಗೆ ಹೈನು ಮಾರುಕಟ್ಟೆ ಮತ್ತು ಅಂಚಿನಲ್ಲಿರುವ ಮತ್ತು ಸಣ್ಣ ರೈತರ ಜೀವನಾಧಾರಗಳು ಕುಸಿಯುತ್ತವೆ.

ಆದ್ದರಿಂದ ಎಲ್ಲ ಜಾನುವಾರುಗಳು 'ಗೋಶಾಲೆ'ಗಳ ಏಕಸ್ವಾಮ್ಯಕ್ಕೆ ಒಳಗಾಗಿ ಸಂಬಂಧಪಟ್ಟವರೆಲ್ಲ ತಮ್ಮ 'ಮೇಡ್ ಇನ್ ಇಂಡಿಯ' ಗೋಮೂತ್ರ, ಸಗಣಿ ಮುಂತಾದ ಶೀಘ್ರವಾಗಿ ಮಾರಾಟವಾಗುವ ಬಳಕೆ ಸರಕುಗಳನ್ನು ನಗರದ ಮುಗ್ಧ ಗಿರಾಕಿಗಳಿಗೆ ಮತ್ತು ಮತ್ತೆ ಅದೇ ರೈತರಿಗೂ ಮಾರಿ ತಮ್ಮ ಬ್ಯಾಂಕ್ ಬ್ಯಾಲಂಸ್‌ಗಳನ್ನು ಹೆಚ್ಚಿಸಿ ನಗೆ ಬೀರುವ ಮೊದಲು ಭಾರತದ ಸಣ್ಣ ಮತ್ತು ಅಂಚಿನಲ್ಲಿರುವ ರೈತರ ಕೃಷಿ ಜೀವನಾಧಾರಗಳನ್ನು 'ಪವಿತ್ರ ಗೋವು' ಮತ್ತು 'ಹಿಂದೂ ಸಂಸ್ಕೃತಿ'ಯನ್ನು ರಕ್ಷಿಸುವ ಹೆಸರಿನಲ್ಲಿ ಸಂಪೂರ್ಣವಾಗಿ ಧ್ವಂಸ ಮಾಡುವುದರ ವಿರುದ್ಧ ಅವರು ದನಿ ಎತ್ತಬೇಕಾದ ಸಮಯ ಬಂದಿದೆ.

– ಸಾಗರಿ ಆರ್. ರಾಮದಾಸ್.

(ಆಹಾರ ಸಾರ್ವಭೌಮತೆಯ ಕ್ಷೇತ್ರದಲ್ಲಿ ಸಕ್ರಿಯರಾಗಿರುವ ಪಶುವೈದ್ಯೆ. ದಿವೈರ್.ಕಾಂ. ನಲ್ಲಿ ಎಪ್ರಿಲ್7 ರಂದು ಪ್ರಕಟವಾದ ಅವರ ಲೇಖನದಿಂದ)

ಶಾಕಾಹಾರ ಮತ್ತು ಜಾತಿಪದ್ಧತಿ

ಜಾತಿಸಮಾಜದಲ್ಲಿ ಬುದ್ಧಿ ಮತ್ತು ದೇಹದ ಸ್ವಚ್ಛತೆಯನ್ನು ಪಡೆಯಲು ಶಾಕಾಹಾರ ಮತ್ತು ಧಾರ್ಮಿಕತೆ ಜತೆ–ಜತೆಯಾಗಿ ಇರಬೇಕು, ಬ್ರಾಹ್ಮಣನಲ್ಲಿ ಇದು ಸಾಕಾರಗೊಂಡಿದೆ ಎಂದು ಭಾವಿಸಲಾಗಿದೆ. ಜಾತಿ ಶ್ರೇಣಿಗಳಲ್ಲಿ ವಿವಿಧ ಜಾತಿಗಳವರು ಯಾವ ಆಹಾರವನ್ನು ಸೇವಿಸುತ್ತಾರೆ ಎಂಬುದನ್ನು ನೋಡಿದಾಗ ಇದು ಸ್ಪಷ್ಟವಾಗುತ್ತದೆ.

ಸಂಘ ಪರಿವಾರದ ಮಾದರಿ ರಾಜ್ಯ ಗುಜರಾತಿನ ಮುಖ್ಯಮಂತ್ರಿಗಳು ತಮ್ಮ ರಾಜ್ಯವನ್ನು ಶಾಕಾಹಾರಿ ರಾಜ್ಯವನ್ನಾಗಿ ಮಾಡುವುದಾಗಿ ಸಾರಿದ್ದಾರೆ. ಇದು ಮಾಧ್ಯಮಗಳಲ್ಲಿ ಲಘು ಹಾಸ್ಯಕ್ಕೆ ಆಹಾರವಾಗಿದೆಯಷ್ಟೇ, ತಲ್ಲಣವನ್ನೇನೂ ಉಂಟುಮಾಡಿಲ್ಲ.

ಏಕೆಂದರೆ ಜಗತ್ತಿನಲ್ಲಿ ಮುಂದುವರೆದ ದೇಶಗಳಲ್ಲಿ ಮಾಂಸಾಹಾರ, ಅದರಿಂದಾಗಿ ಪ್ರಾಣಿಗಳ ಸಾಕಣೆಯಲ್ಲಿ ಹೆಚ್ಚುತ್ತಿರುವ ಕ್ರೌರ್ಯದಿಂದಾಗಿ ಪ್ರಾಣಿಗಳ ಬಗ್ಗೆ ಅನುಕಂಪದಿಂದ ಶಾಕಾಹಾರದತ್ತ ಒಲವು ಹೆಚ್ಚುತ್ತಿದೆ ಎಂಬುದು ನಿಜ. ಭಾರತದಲ್ಲೂ ಇದು 2004ರಲ್ಲಿ 75% ಇದ್ದದ್ದು 2014ರಲ್ಲಿ 71% ಕ್ಕೆ ಇಳಿದಿದೆ.

ಆದರೆ ಇಲ್ಲಿ ಅದು ಪ್ರಾಣಿಗಳ ಬಗ್ಗೆ ಅನುಕಂಪಕ್ಕಿಂತ ಹೆಚ್ಚಾಗಿ ವಿವಾದದ, ಹಿಂಸಾಚಾರದ ಮತ್ತು ಅದಕ್ಕಾಗಿ ಸರಕಾರೀ ದಮನದ ಮೂಲ ಏಕಾಗಿದೆ ಎಂದು ಸಮಾಜಶಾಸ್ತ್ರಜ್ಞ ಸೂರ್ಯಕಾಂತ ವಾಗ್ಮೋರೆ ಪ್ರಶ್ನಿಸುತ್ತಾರೆ(ಸ್ಕ್ರಾಲ್.ಇನ್, ಎಪ್ರಿಲ್ 7).

ಜಗತ್ತಿನ ಇತರೆಡೆಗಳಲ್ಲಿ ಶಾಕಾಹಾರಿಗಳಾಗುತ್ತಿರುವವರು ಪ್ರಾಣಿಮೂಲದ ಇತರ ಉತ್ಪನ್ನಗಳನ್ನೂ ಬಳಸುವುದಿಲ್ಲ. ಆದರೆ ಇಲ್ಲಿ ಹಾಗಲ್ಲ. ಏಕೆಂದರೆ ಇದು ಪ್ರಾಣಿಗಳ ಬಗ್ಗೆ ಅನುಕಂಪವನ್ನು ಹುಟ್ಟಿಸುವ ಬದಲು ಮಾಂಸಾಹಾರದ ಬಗ್ಗೆ ಜುಗುಪ್ಸೆಯನ್ನು ಹುಟ್ಟಿಸುತ್ತಿದೆ, ಮಾಂಸದ ಆಹಾರದಿಂದ ಮಾತ್ರವಲ್ಲ, ಮಾಂಸಾಹಾರಿಗಳಿಂದಲೂ ಸಾಮಾಜಿಕ ಮತ್ತು ದೈಹಿಕ ಅಂತರ ಇಟ್ಟುಕೊಳ್ಳುವಂತಹ ಸನ್ನಿವೇಶವನ್ನು ಸೃಷ್ಟಿಸಿದೆ. ಇದಕ್ಕೆ ಕಾರಣ ಭಾರತದ ಜಾತಿ ಪದ್ಧತಿ ಎನ್ನುತ್ತಾರೆ ವಾಗ್ಮೋರೆಯವರು. ಶಾಕಾಹಾರ ಇಲ್ಲಿ ಜಾತಿಪದ್ಧತಿಯೊಂದಿಗೆ ಬೆಸೆದುಕೊಂಡಿರುವ ಶುದ್ಧತೆಯ ಮತ್ತು ಶ್ರೇಣಿಯ ಕಲ್ಪನೆಯಿಂದ ಅಶುದ್ಧವಾಗಿದೆ. ಅಸ್ಪೃಶ್ಯತೆ ಇದರ ಚರಮ ಬಿಂದು ತಾನೇ?

ಜಾತಿಸಮಾಜದಲ್ಲಿ ಬುದ್ಧಿ ಮತ್ತು ದೇಹದ ಸ್ವಚ್ಛತೆಯನ್ನು ಪಡೆಯಲು ಶಾಕಾಹಾರ ಮತ್ತು ಧಾರ್ಮಿಕತೆ ಜತೆ–ಜತೆಯಾಗಿ ಇರಬೇಕು, ಬ್ರಾಹ್ಮಣನಲ್ಲಿ ಇದು ಸಾಕಾರಗೊಂಡಿದೆ ಎಂದು ಭಾವಿಸಲಾಗಿದೆ. ಜಾತಿ ಶ್ರೇಣಿಗಳಲ್ಲಿ ವಿವಿಧ ಜಾತಿಗಳವರು ಯಾವ ಆಹಾರವನ್ನು ಸೇವಿಸುತ್ತಾರೆ ಎಂಬುದನ್ನು ನೋಡಿದಾಗ ಇದು ಸ್ಪಷ್ಟವಾಗುತ್ತದೆ.

ಮಾಂಸಾಹಾರಿಗಳ ಪ್ರಮಾಣ ಶೂದ್ರ ಜಾತಿಗಳಲ್ಲಿ ಮಹಿಳೆಯರಲ್ಲೂ, ಪುರುಷರಲ್ಲೂ ಬಹಳ ಹೆಚ್ಚು, ದಲಿತರು ಮತ್ತು ಆದಿವಾಸಿಗಳಲ್ಲಿ ಇನ್ನೂ ಹೆಚ್ಚು. ಬ್ರಾಹ್ಮಣರಲ್ಲಿ ಮಾಂಸಾಹಾರಿಗಳು ಇಲ್ಲವೇ ಇಲ್ಲವೇಂದೇನಲ್ಲ, ಆದರೆ ಎಲ್ಲರಿಗಿಂತ ಕಡಿಮೆ. ದ್ವಿಜರೆನಿಸಿಕೊಂಡ ಜಾತಿಶ್ರೇಣಿಯಲ್ಲಿ ಕೆಳಕ್ಕೆ ಇಳಿದಂತೆ ಈ ಪ್ರಮಾಣ ಹೆಚ್ಚುತ್ತ ಹೋಗುತ್ತದೆ, ಅದರಲ್ಲೂ ಪುರುಷರಲ್ಲಿ ಮಹಿಳೆಯರಿಗಿಂತ ಹೆಚ್ಚು.

ಪ್ರಸಕ್ತ ಕಾಲಘಟ್ಟದಲ್ಲಿ ಶಾಕಾಹಾರ ಗ್ರಾಮೀಣ ಪ್ರದೇಶಕ್ಕಿಂತ ನಗರಪ್ರದೇಶಗಳಲ್ಲಿ ಹೆಚ್ಚುತ್ತಿದೆ, ಅದರಲ್ಲೂ ಹಿಂದಿ ಭಾಷಿಕ ಮತ್ತು ಸುತ್ತುಮುತ್ತಲ ಪ್ರದೇಶಗಳಲ್ಲಿ. ಇದಕ್ಕೆ ಕಾರಣ ಮೇಲ್ಜಾತಿಗಳ, ಅದರಲ್ಲೂ ಬ್ರಾಹ್ಮಣರ ಆಚಾರ–ವಿಚಾರಗಳನ್ನು ಅನುಕರಿಸಿದರೆ ಸಾಮಾಜಿಕ ಸ್ಥಾನಮಾನ ಹೆಚ್ಚುವಂತೆ ಕಾಣುವುದರಿಂದ ಎನ್ನುತ್ತಾರೆ ವಾಗ್ಮೋರೆಯವರು.

ಮೇಲ್ಜಾತಿಗಳ ಪಕ್ಷವೆಂದೇ ಪರಿಗಣಿಸಲ್ಪಟ್ಟಿದ್ದ ಬಿಜೆಪಿಯ ಹಿಂದಿನ ಅವತಾರವಾದ ಜನಸಂಘಕ್ಕೆ ಶಾಕಾಹಾರ ಮತ್ತು ಗೋರಕ್ಷಣೆ ಮುಖ್ಯ ವಿಷಯಗಳಾಗಿದ್ದವು. ಬಿಜೆಪಿಯಲ್ಲೂ ಅದು ಮುಮದುವರೆದಿದೆ. ಚುನಾವಣಾ ಪ್ರಯೋಜನಕ್ಕಾಗಿ 'ಸಾಮಾಜಿಕ ಇಂಜಿನಿಯರಿಂಗ್' ಮೂಲಕ ಕೆಳಜಾತಿಗಳನ್ನು ಮೇಲ್ಜಾತಿಗಳ ಪ್ರಾಬಲ್ಯಕ್ಕೆ ಒಳಪಡಿಸುವಲ್ಲಿ ಅದು ಯಶಸ್ವಿಯಾಗಿರುವುದರಿಂದ ಈ ಎರಡು ವಿಷಯಗಳಿಗೆ ಸಂಬಂಧಪಟ್ಟಂತೆ ದೇಶದ ವಿವಿಧ ಭಾಗಗಳಲ್ಲಿ ಅದು ವಿರೋಧಾಭಾಸದ ನಿಲುವುಗಳನ್ನು ತಳೆಯುವಂತೆ ಮಾಡಿದೆ.

ಆದರೆ ಶ್ರೇಣೀಕೃತ ಜಾತಿಪದ್ಧತಿಯ ಪ್ರಭಾವ ಈಗಲೂ ಎಷ್ಟಿದೆಯೆಂದರೆ ಹಿಂದೂ ಸಮಾಜದೊಳಗೂ ಅಲ್ಪಸಂಖ್ಯೆಯಲ್ಲಿರುವ ಶಾಕಾಹಾರಿಗಳು ಬಹುಸಂಖ್ಯೆಯಲ್ಲಿರುವ ಮಾಂಸಾಹಾರಿಗಳ ಮೇಲೆ 'ನೈತಿಕ ಪ್ರಾಬಲ್ಯ' ಹೊಂದಿದ್ದಾರೆ ಎನ್ನುತ್ತಾರೆ ವಾಗ್ಮೋರೆಯವರು.

ನೋಟು ರದ್ಧತಿ ಜನಸಾಮಾನ್ಯರಿಗೆ ವಿರುದ್ಧವಾಗಿದ್ದರೂ, ಅದನ್ನು 'ದೇಶಪ್ರೇಮ'ದ ಭ್ರಮೆಯಲ್ಲಿ ಸ್ವೀಕರಿಸಿರುವಂತೆ, ಗೋರಕ್ಷಣೆ ಮತ್ತು ಸಂಬಂಧಿತ ವಿಷಯಗಳು ಮುಖ್ಯವಾಗಿ ಬಡ ರೈತರು ಮತ್ತು ಕಾರ್ಮಿಕರ ಹಿತಗಳ ವಿರುದ್ಧವಿದ್ದರೂ ಜನರು ಅದನ್ನು ಸ್ವೀಕರಿಸುತ್ತಾರೆ, ಆಮೂಲಕ ತಮ್ಮ ಹಿಂದೂರಾಷ್ಟ್ರದ ಅಜೆಂಡಾವನ್ನು ಮುಂದೊತ್ತಲು ಸುಲಭವಾಗುತ್ತದೆ ಎಂದು ಸಂಘಪರಿವಾರದವರು ನಂಬಿರುವಂತೆ ಕಾಣುತ್ತದೆ.



ವ್ಯಂಗ್ಯಚಿತ್ರ: ಉನ್ನಿ, ಇಂಡಿಯನ್ ಎಕ್ಸ್‌ಪ್ರೆಸ್

ವಸೀಲಿ ಒತ್ತಡಕ್ಕೆ ಮಣಿಯದೆ ಹಂದಿಗನೂರು ಪಂಚಾಯಿತಿ ಪಿಡಿಓ ಅವರನ್ನು ಅಮಾನತ್ತು ಮಾಡಿದ ಸುಂದರೇಶ ಬಾಬು ಅವರಿಗೆ ಕೆಪಿಆರ್‌ಎಸ್‌ನಿಂದ ಅಭಿನಂದನೆ



ಎ ಜಂ'ಂ'ಪ'ಂ'ರ'ದ'ಲ್ಲಿ ನಿವೇಶನಗಳಲ್ಲಿ ಅವ್ಯವಹಾರ ಭ್ರಷ್ಟಾಚಾರ ನಡೆದ ಕುರಿತು ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಸಮಿತಿಯು ಹಾಗೂ ರೈತರು ಹಾಗೂ ಹಡಪದ ಸಂಘದ ಮುಖಂಡರ ನಿಯೋಗ ಇಂದು ಹಂದಿಗನೂರು ಪಂಚಾಯಿತಿಯ ರಾಜೀವ ಗಾಂಧಿ ಯೋಜನೆಯಲ್ಲಿ 98 ಮನೆಗಳು ಹಾಗೂ 2ನೇ ಹಂತದಲ್ಲಿ 29 ಮನೆಗಳು ಇದರ ಬಗ್ಗೆ ಹಲವಾರು ಅರ್ಜಿಗಳು ಹೋರಾಟ ಮಾಡಿದ್ದು, ಇವತ್ತಿನ ದಿವಸ ನಿಯೋಗ ತೆರಳಿ ಜಿಪಂ ಮುಖ್ಯಕಾರ್ಯನಿರ್ವಾಹಕ ಅಧಿಕಾರಿ ಸುಂದರೇಶ ಬಾಬು ಸ್ವತಃ ಭೇಟಿ ನೀಡಿದಾಗ ಪ್ರಭಾರಿ ಅಭಿವೃದ್ಧಿ ಅಧಿಕಾರಿಯನ್ನು ಅಮಾನತ್ತು ಮಾಡಿದ್ದು, ಒಂದು ಪತ್ರಗಳನ್ನು ನೀಡಿದರು. ಹಾಗೂ ಅಧ್ಯಕ್ಷರು ಸಾಯಿಬವ್ವ ಶಿವಪುತ್ರ ತಳವಾರ, ಪಿಡಿಓ ಗುರು ಎಂ.ಮ್ಯಾಗೇರಿ ಇನ್ನಿತರರು ಕೂಡಿ ಮನೆ ಹಂಚಿಕೆಯಲ್ಲಿ ಅವ್ಯವಹಾರ ಭ್ರಷ್ಟಾಚಾರ ಮಾಡಿ ಕೊಟ್ಯಾಂತರ ರೂಪಾಯಿ ಲೂಟಿ ಹೊಡೆದಿದ್ದರು. ರಾಜೀವಗಾಂಧಿ ಯೋಜನೆಯನ್ನು ವಸೀಲಿಯಿಂದ ರಾಜಕೀಯ ಪುಢಾರಿಗಳಿಂದ ಹಾಗೂ ಮೇಲಾಧಿಕಾರಿಗಳಿಂದ ಮನೆಗಳನ್ನು ಹಾಕಿಸಿಕೊಂಡು ಬಂದು ಅವುಗಳನ್ನು ಅರ್ಹ ಫಲಾನುಭವಿಗಳಿಗೆ ನೀಡದೆ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಎಸ್ಸಿ,ಎಸ್ಟಿ ಹೆಸರಿನಲ್ಲಿ ಬೇರೆ ಜಾತಿಯ ಹೆಸರನ್ನು ಸೇರಿಸಿ ಮನೆಗಳನ್ನು ಹಂಚಿಕೆ ಮಾಡಿಡುತ್ತಾರೆ. ಪಂಚಾಯಿತಿ ವ್ಯಾಪ್ತಿಯಲ್ಲಿರದ ಜನರಿಗೆ ಮನೆಗಳನ್ನು ಹಾಕಿಸಿ ಕೊಟ್ಯಾಂತರ ರೂಪಾಯಿಯನ್ನು ಸರ್ಕಾರದ ಬೊಕ್ಕಸಕ್ಕೆ ಕನ್ನಹಾಕಿದ್ದರು. ಈ ಕೇಸನ್ನು ಮುಚ್ಚಿಹಾಕಲು ಅಧಿಕಾರಿಗಳಿಗೆ ಹಾಗೂ ಮುಖಂಡರಿಗೆ ವಸೀಲಿ ಹಾಗೂ ಹಣದ ಒತ್ತಡದಿಂದ ಕೇಸ್‌ನ್ನು ಮುಚ್ಚಿ ಹಾಕುವ ಪ್ರಯತ್ನ ನಡೆಸಿದ್ದಾರೆ. ರೈತ ಸಂಘಟನೆ ಹೋರಾಟ ಮಾಡಿದ್ದರಿಂದ ಜಿಪಂ ಮುಖ್ಯಕಾರ್ಯನಿರ್ವಹಕ ಅಧಿಕಾರಿ ಸುಂದರೇಶ ಬಾಬು ನಿಯೋಗದ ಮುಂದೆ ಅಭಿವೃದ್ಧಿ ಅಧಿಕಾರಿಯನ್ನು ಅಮಾನತು ಮಾಡಿದ ಆದೇಶ ಮಾಡಿ ಅಧ್ಯಕ್ಷರ ಸದಸ್ಯತ್ವ ರದ್ದಾಗಲಿಕ್ಕೆ ಸರ್ಕಾರಕ್ಕೆ ಶಿಫಾರಸ್ಸು ಮಾಡುತ್ತೇವೆ. ಅದರಂತೆ ಎಷ್ಟು ಹಣ ಲೂಟಿಮಾಡಿರುತ್ತಾರೆಂದು ವಿಚಾರಿಸಿ ಇದರಲ್ಲಿ ಭಾಗಿಯಾದ ಪ್ರತಿಯೊಬ್ಬರ ಮೇಲೆ ಕ್ರಿಮಿನಲ್ ಪ್ರಕರಣ ದಾಖಲಿಸಲಾಗುವುದು ಎಂದು ಭರವಸೆ ನೀಡಿದರು.

ನಿಯೋಗದಲ್ಲಿ ಕನಾಟಕ ಪ್ರಾಂತ ರೈತ ಸಂಘದ ರಾಜ್ಯ ಉಪಾಧ್ಯಕ್ಷ ಭೀಮಶಿ ಕಲಾದಗಿ, ಜಿಲ್ಲಾಧ್ಯಕ್ಷರು ಅಣ್ಣಾರಾಯ ಈಳಗೇರ, ಮಲ್ಲಿಕಾರ್ಜುನ ಬಳಬಟ್ಟಿ, ಗುರುಪಾದ ಹಡಪದ, ರಾಮಚಂದ್ರ ರಾಠೋಡ, ಮುರಗೇಂದ್ರ ಹುಣಶ್ಯಾಳ ಸೇರಿದಂತೆ ಮುಂತಾದವರು ಪಾಲ್ಗೊಂಡಿದ್ದರು.

ಇದೇ ಸಂದರ್ಭ ಕರ್ನಾಟಕ ಪ್ರಾಂತ ರೈತ ಸಂಘದ ಪದಾಧಿಕಾರಿಗಳು ವಸೀಲಿ ಒತ್ತಡಕ್ಕೆ ಮಣಿಯದೆ ಪಿಡಿಓ ಅವರನ್ನು ಅಮಾನತ್ತು ಮಾಡಿದಕ್ಕೆ ಸುಂದರೇಶ ಬಾಬು ಅವರಿಗೆ ಅಭಿನಂದಿಸಿದರು.

– ಅಣ್ಣಾರಾಯ ಈಳಗೇರ

ಸಿಪಿಐ(ಎಂ) ಹಿರಿಯ ನಾಯಕರಾದ ಸೀತಾರಾಮ ಕೊಟ್ಟಾರಿ ನಿಧನ; ತೀವ್ರ ಸಂತಾಪ



ಕಮ್ಯೂನಿಸ್ಟ್ ಚಳುವಳಿಯ ಹಿರಿಯ ನೇತಾರರೂ, ಸಿಪಿಐ(ಎಂ) ಮುಖಂಡರಾಗಿದ್ದ ಕಾಂ| ಸೀತಾರಾಮ ಕೊಟ್ಟಾರಿ (82 ವರ್ಷ)ಯವರು ಅಸೌಖ್ಯದಿಂದಾಗಿ ಇಂದು (08–04–2017) ಮುಂಜಾನೆ 4 ಗಂಟೆಗೆ ಬಜಾಲ್‌ನಲ್ಲಿರುವ ಸ್ವಗೃಹದಲ್ಲಿ ನಿಧನರಾಗಿದ್ದಾರೆ ಎಂದು ಸಿಪಿಐ(ಎಂ) ಪ್ರಕಟಣೆ ತಿಳಿಸಿದೆ.

ತನ್ನ ಎಳೆಯ ಪ್ರಾಯದಲ್ಲಿ ಹಂಚು ಕಾರ್ಮಿಕನಾಗಿ ದುಡಿಯುತ್ತಿದ್ದ ಸೀತಾರಾಮ ಕೊಟ್ಟಾರಿಯವರು ಬಳಿಕ ಹಂಚು ಕಾರ್ಮಿಕರ ನಾಯಕರಾಗಿ ಅನೇಕ ಹೋರಾಟಗಳಲ್ಲಿ ಭಾಗವಹಿಸಿದ್ದಾರೆ. 1955ರಲ್ಲಿ ಅವಿಭಜಿತ ಕಮ್ಯೂನಿಸ್ಟ್ ಪಕ್ಷದ ಸದಸ್ಯತ್ವವನ್ನು ಪಡೆಯುವ ಮೂಲಕ ಕಮ್ಯೂನಿಸ್ಟ್ ಚಳುವಳಿಗೆ ದುಮುಕಿದರು. ಸ್ಥಳೀಯವಾಗಿ ಅಸ್ಥಿತ್ವಕ್ಕೆ ಬಂದ ಪಕ್ಕಲಡ್ಕ ಯುವಕ ಮಂಡಲದ ಸಕ್ರೀಯ ಕಾರ್ಯಕರ್ತರಾಗಿ ಯುವಜನರ ಮದ್ಯೆ ಪ್ರಭಾವಗಳಿಸಿದರು. 1968ರಲ್ಲಿ ಬಜಾಲ್ ಗ್ರಾಮ ಪಂಚಾಯತ್ ಚುನಾವಣೆಯಲ್ಲಿ ಸಿಪಿಐ(ಎಂ) ಪಕ್ಷ ಅಧಿಕಾರಕ್ಕೇರಿದ್ದು, ಸೀತಾರಾಮ ಕೊಟ್ಟಾರಿಯವರು ಅಧ್ಯಕ್ಷರಾಗಿ ಆಯ್ಕೆಗೊಂಡು ಊರಿನ ಅಭಿವೃದ್ಧಿಗಾಗಿ ಸದಾ ದುಡಿದಿರುತ್ತಾರೆ. ಭೂಮಿಯೇ ಇಲ್ಲದ ಬಡವರಿಗೆ ಭೂಮಿ ಹಂಚುವ ಕಾರ್ಯವನ್ನು ಸ್ವತಃ ಸೀತಾರಾಮ ಕೊಟ್ಟಾರಿಯವರು ಜಲ್ಲಿಗುಡ್ಡೆ, ಕುಂಟಲಗುಡ್ಡೆ ಸೇರಿದಂತೆ ಅನೇಕ ಕಡೆಗಳಲ್ಲಿ ಮಾಡುವ ಮೂಲಕ ಬಡವರ ಕಣ್ಮಣಿಯಾದರು. ಕುಗ್ರಾಮವಾಗಿದ್ದ ಬಜಾಲ್ ಗ್ರಾಮಕ್ಕೆ ನೀರು, ಬೆಳಕು, ರಸ್ತೆಗೆ ಪ್ರಾಧೀನತೆ ನೀಡುವ ಮೂಲಕ ಅಭಿವೃದ್ಧಿಗೆ ನಾಂದಿಯಾಡಿದರು. ತುರ್ತು ಪರಿಸ್ಥಿತಿಯ ಕಾಲದಲ್ಲಿ ಕಮ್ಯೂನಿಸ್ಟ್ ಪಕ್ಷದ ಮೇಲೆ ತೀವ್ರ ದಾಳಿ ನಡೆದಾಗ ಅದನ್ನು ಸಮರ್ಥವಾಗಿ ಎದುರಿಸಿ ಪಕ್ಷವನ್ನು ಮುನ್ನಡೆಸುವಲ್ಲಿ ಸೀತಾರಾಮ ಕೊಟ್ಟಾರಿಯವರ ಪಾತ್ರ ಗಮನಾರ್ಹವಾಗಿದೆ ಎಂದು ಸಿಪಿಐ(ಎಂ) ತನ್ನ ಭಾವಪೂರ್ಣ ಶ್ರದ್ಧಾಂಜಲಿಯನ್ನು ಅರ್ಪಿಸುತ್ತದೆ.

ಮೃತರ ಮನೆಗೆ ಭೇಟಿ ನೀಡಿದ ಸಿಪಿಐ(ಎಂ) ಜಿಲ್ಲಾ ನಾಯಕರಾದ ವಸಂತ ಆಚಾರಿ, ಜೆ. ಬಾಲಕೃಷ್ಣ ಶೆಟ್ಟಿ, ಸುನಿಲ್ ಕುಮಾರ್ ಬಜಾಲ್, ಜಯಂತಿ ಶೆಟ್ಟಿ, ಸುರೇಶ್ ಬಜಾಲ್, ಸಂತೋಷ್ ಬಜಾಲ್, ಮುಂತಾದವರು ತೀವ್ರ ಸಂತಾಪ ವ್ಯಕ್ತಪಡಿಸಿದರು. ಮಾತ್ರವಲ್ಲದೆ ಪಕ್ಕಲಡ್ಕ ಯುವಕ ಮಂಡಲ, ಸಿಐಟಿಯು, ಡಿವೈಎಫ್‌ಐ, ಎಸ್‌ಎಫ್‌ಐ, ಜೆಎಂಎಸ್ ಸಂಘಟನೆಗಳು ಕೂಡಾ ಅವರ ನಿಧನಕ್ಕೆ ತೀವ್ರ ಶೋಕ ವ್ಯಕ್ತಪಡಿಸಿದೆ.

ವಸಂತ ಆಚಾರಿ

ಉದ್ಯಮಿಗಳಿಗೆ ನಮ್ಮೂರಲ್ಲಿ ಅವಕಾಶ ನೀಡೆವು; ತಣ್ಣೀರುಬಾವಿ ನಾಗರಿಕರು

ಎಂಬತ್ತು ವರ್ಷಗಳಿಗೂ ಮೀರಿ ಮಂಗಳೂರು ನಗರದ ಸಮುದ್ರದ ಒತ್ತಿನಲ್ಲಿರುವ ತಣ್ಣೀರುಬಾವಿ ಪ್ರದೇಶದಲ್ಲಿ ವಾಸವಾಗಿರುವ ಮುನ್ನೂರಕ್ಕೂ ಹೆಚ್ಚಿನ ಕುಟುಂಬಗಳಿಗೆ ಸಿಆರ್‌ಝಡ್ ವಲಯದ ಹೆಸರಿನಲ್ಲಿ ಸರಕಾರ, ಜಿಲ್ಲಾಡಳಿತ, ನಗರಾಡಳಿತಗಳು ಮನೆ ನಿವೇಶನದ ಹಕ್ಕುಪತ್ರ ಹಾಗೂ ಮನೆ ನಂಬ್ರಗಳನ್ನು ನಿರಾಕರಿಸುತ್ತಾ ಬಂದಿದೆ. ಆದ–ರೆ ಅದೇ ಆಡಳಿತಗಳು ಖಾಸಗಿ ಪ್ರವಾಸೋಧ್ಯಮ ಸಂಸ್ಥೆಗಳಿಗೆ, ಆಯಿಲ್ ಜೆಟ್‌ಗಳಿಗೂ ಬೇಕಾದಷ್ಟು ಭೂಮಿ ಕೊಡಲು ಮುಂದಾಗಿವೆ. ತಲಾಂತರದಿಂದ ವಾಸವಾಗಿರುವ ಕುಟುಂಬಗಳಿಗೆ ಹಕ್ಕುಪತ್ರ ನೀಡದೆ, ಹೊರಗಿನ ಖಾಸಗಿ ಉದ್ಯಮಿಗಳಿಗೆ ತಣ್ಣೀರುಬಾವಿಯ ಭೂಮಿ ನೀಡುವುದನ್ನು ತಾವು ತಡೆಯುವುದಾಗಿ ತಣ್ಣೀರುಬಾವಿ ನಾಗರಿಕರ ಪರವಾಗಿ ವಿವಿಧ ಸಂಘಟನೆಗಳ ನಾಯಕರು ಎಚ್ಚರಿಸಿದರು.

ದಿನಾಂಕ 10 ರಂದು ಮಂಗಳೂರು ಜಿಲ್ಲಾಧಿಕಾರಿ ಕಛೇರಿ ಎದುರು ದಲಿತ ಹಕ್ಕುಗಳ ಸಮಿತಿ, ಸಿಪಿಐ(ಎಂ) ತಣ್ಣೀರುಬಾವಿ ಶಾಖೆ ಮತ್ತು ಡಿವೈಎಫ್‌ಐ ತಣ್ಣೀರುಬಾವಿ ಶಾಖೆಗಳು ಜಂಟಿಯಾಗಿ ಏರ್ಪಡಿಸಿದ ಪ್ರತಿಭಟನೆಯಲ್ಲಿ ನಾಯಕರುಗಳು ಮಾತನಾಡಿದರು.

ಪ್ರತಿಭಟನೆಯನ್ನು ಉದ್ದೇಶಿಸಿ ಮಾತನಾಡಿದ ಸಿಪಿಐ(ಎಂ) ಮಂಗಳೂರು ಉತ್ತರ ಸಮಿತಿ ಕಾರ್ಯದರ್ಶಿ ಕೃಷ್ಣಪ್ಪ ಕೊಂಚಾಡಿ ಮಾತನಾಡಿ, ನಗರ ಪಾಲಿಕೆ ಮತ್ತು ಜಿಲ್ಲಾಧಿಕಾರಿ ಕಛೇರಿ ಎದುರು ತಣ್ಣೀರುಬಾವಿ ನಾಗರಿಕರು ನಡೆಸುತ್ತಿರುವ ಐದನೇ ಪ್ರತಿಭಟನೆ ಇದಾಗಿದೆ. ಆ ಪ್ರದೇಶದ ಮುನ್ನೂರಕ್ಕೂ ಹೆಚ್ಚಿನ ಕುಟುಂಬಗಳಲ್ಲಿ ಮೀನುಗಾರರು, ಕಟ್ಟಡ ಕಾರ್ಮಿಕರು ಇತ್ಯಾದಿ ಶ್ರಮಜೀವನ ನಡೆಸುವ ಜನರೇ ಎಲ್ಲಾ ಇದ್ದಾರೆ. ದಲಿತರು, ಮುಸ್ಲಿಮರು, ಹಿಂದುಗಳಿದ ಜನ ಸಮುದಾಯ ವಾಸವಾಗಿರುವ ಪ್ರದೇಶವಿದು. ಧೀರ್ಘಕಾಲದಿಂದ ಪದೇಪದೇ ಆಡಳಿತಕ್ಕೆ ಹಕ್ಕುಪತ್ರಕ್ಕಾಗಿ ಅರ್ಜಿ ಸಲ್ಲಿಸುತ್ತಲೇ ಬಂದಿದ್ದಾರೆ. ಆದರೆ ಕಳೆದ ಹತ್ತಿಪ್ಪತ್ತು ವರ್ಷಗಳಲ್ಲಿ ತಣ್ಣೀರುಬಾವಿಯು ಸಿಆರ್‌ಝಡ್ ವಲಯ ವ್ಯಾಪ್ತಿಯಲ್ಲಿ ಬರುತ್ತಿರುವುದರಿಂದ, ಅಲ್ಲಿ ಮನೆಗಳಿಗೆ ಹಕ್ಕುಪತ್ರ ನಿರಾಕರಿಸಲಾಗುವುದಾಗಿ ಆಡಳಿತಗಾರರು ಹೇಳುತ್ತಾರೆ. ಹಾಗಿದ್ದಲ್ಲಿ ಖಾಸಗಿ ಪ್ರವಾಸೋಧ್ಯಮಿಗಳು ಅಲ್ಲಿ ತಮ್ಮ ಜಾಗ ಗುರುತಿಸಲು ಬಂದುದು ಏಕೆ ಎಂಬುದಾಗಿ ಕೃಷ್ಣಪ್ಪ ಕೊಂಚಾಡಿ ಪ್ರಶ್ನಿಸಿದರು.

ಪ್ರತಿಭಟನೆಯನ್ನು ಉದ್ದೇಶಿಸಿ ಮಾತನಾಡಿದ ಡಿವೈಎಫ್‌ಐ ರಾಜ್ಯಾಧ್ಯಕ್ಷ ಮುನೀರ್ ಕಾಟಿಪಳ್ಳ, ಖಾಸಗಿ ಹಾಗೂ ಸಾರ್ವಜನಿಕ ಪಾಲುದಾರಿಕೆಯಲ್ಲಿ ಪ್ರವಾಸೋಧ್ಯಮವನ್ನು ಖಾಸಗಿಯವರಿಗೇ ಕೊಡುವ ಏಕೈಕ ಉದ್ದೇಶದಿಂದ ತಣ್ಣೀರುಬಾವಿಯ ಭೂಮಿಯನ್ನು ನೀಡಲು ಸರಕಾರಕ್ಕೆ ಉತ್ಸಾಹವಿದೆ. ಇತ್ತೀಚೆಗೆ ಖಾಸಗಿಯವರಿಗೆ ಗಾಲ್ಫ್ ಕೋರ್ಸ್‌ಗೆ ನೀಡಲು ಮುಂದಾಗಿತ್ತು. ಆದರೆ ಸರಕಾರ, ಜಿಲ್ಲಾಡಳಿತ, ಜನಪ್ರತಿನಿಧಿಗಳು ಅಲ್ಲಿನ ನಾಗರಿಕರ ನ್ಯಾಯಯುತ ಹಕ್ಕುಗಳನ್ನು ನಿರಾಕರಿಸುತ್ತಿದ್ದಾರೆ. ಧರ್ಮದ ಆಧಾರದಲ್ಲಿ ಜಗಳ ಹುಟ್ಟಿಸುತ್ತಿರುವ ರಾಜಕೀಯ ಪಕ್ಷ ಸಂಘಟನೆಗಳು, ತಣ್ಣೀರುಬಾವಿ ಪ್ರದೇಶದ ಪ್ರಾಥಮಿಕ ಅವಶ್ಯಕತೆಯಾದ ನಿವೇಶನದ ಹಕ್ಕುಪತ್ರಗಳ ಬಗ್ಗೆ ಯಾಕೆ ಮಾತನಾಡುತ್ತಿಲ್ಲ ಎಂದು ಮುನೀರ್ ಕಾಟಿಪಳ್ಳ ಪ್ರಶ್ನಿಸಿದರು.

ಸಿಪಿಐ(ಎಂ) ಮಂಗಳೂರು ನಗರ ದಕ್ಷಿಣ ಸಮಿತಿ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್ ಮಾತನಾಡಿ, ತಣ್ಣೀರುಬಾವಿಯಲ್ಲಿ ಸ್ವಾತಂತ್ರ್ಯ ಪೂರ್ವದಿಂದಲೂ ವಾಸವಾಗಿರುವ ಕುಟುಂಬಗಳಿಗೆ ಶೀಘ್ರ ಹಕ್ಕುಪತ್ರ ನೀಡದಿದ್ದಲ್ಲಿ ಹೋರಾಟಗಳನ್ನು ಇನ್ನಷ್ಟು ತೀವ್ರಗೊಳಿಸುವುದಾಗಿ ಎಚ್ಚರಿಕೆ ನೀಡಿದರು.

ನಮ್ಮ ಊರು ನಮ್ಮದು; ಇದನ್ನು ಎಂದಿಗೂ ಆಯಿಲ್ ಜೆಟ್‌ರವರಿಗೂ, ಪ್ರವಾಸೋಧ್ಯಮಿಗಳಿಗೂ ಬಿಟ್ಟುಕೊಡುವುದಿಲ್ಲ ಎಂಬುದಾಗಿ ಸ್ಥಳೀಯ ನಾಗರಿಕರಾದ ಶಮೀಮಾ ಬಾನು ಗುಡುಗಿದರು.

ದಲಿತ ಹಕ್ಕುಗಳ ಸಮಿತಿ ಮುಖಂಡರಾದ ಬೇಬಿ ತಣ್ಣೀರುಬಾವಿ, ತಿಮ್ಮಯ್ಯ ಕೊಂಚಾಡಿ, ಕಿಶೋರ್ ಪೊಕೋಡಿ, ಶಶಿಕಲಾ, ಸಿಪಿಐ(ಎಂ) ಮುಖಂಡರಾದ ವಾಸುದೇವ ಉಚ್ಚಿಲ, ಯೋಗೀಶ್ ಜಪ್ಪಿನಮೊಗರು, ಡಿವೈಎಫ್‌ಐ ದ.ಕ ಜಿಲ್ಲಾ ಮುಖಂಡರಾದ ಸಂತೋಷ್ ಬಜಾಲ್, ಬಿ.ಕೆ. ಇಮ್ತಿಯಾಜ್, ಮಂಗಳೂರು ನಗರ ನಿವೇಶನರಹಿತರ ಸಮಿತಿಯ ಪ್ರೇಮನಾಥ ಜಲ್ಲಿಗುಡ್ಡೆ, ಸಂತೋಷ್ ಶಕ್ತಿನಗರ, ನಗರ ಹಕ್ಕುಪತ್ರ ವಂಚಿತರ ಹೋರಾಟ ಸಮಿತಿಯ ನಾಗೇಶ್ ಕೋಟ್ಯಾನ್, ಉಮಾಶಂಕರ್ ಬೋಳೂರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು. ದಲಿತ ಹಕ್ಕುಗಳ ಸಮಿತಿಯ ಕೃಷ್ಣ ತಣ್ಣೀರುಬಾವಿ ಸ್ವಾಗತಿಸಿ ಕಾರ್ಯಕ್ರಮ ನಿರಾಕರಿಸಿದರು.

ಕೃಷ್ಣ ತಣ್ಣೀರುಬಾವಿ

ಸಿರಿಯಾದಲ್ಲಿ ಅಮೆರಿಕಾದ ನಗ್ನ ಮಿಲಿಟರಿ ಹಸ್ತಕ್ಷೇಪ: ಸಿಪಿಐ(ಎಂ) ಪೊಲಿಟ್‌ಬ್ಯುರೊ ಖಂಡನೆ

ಅಮೆರಿಕಾದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸಿರಿಯಾದ ಸರಕಾರ ರಾಸಾಯನಿಕ ಅಸ್ತ್ರಗಳನ್ನು ಬಳಸುತ್ತಿದೆ ಎಂಬ ನೆವವೊಡ್ಡಿ ಒಂದು ಸಿರಿಯಾ ವಿಮಾನ ನೆಲೆಯ ಮೇಲೆ ಕ್ಷಿಪಣಿ ದಾಳಿ ನಡೆಸಲು ಏಕಪಕ್ಷೀಯವಾಗಿ ನಿರ್ಧರಿಸಿರುವುದನ್ನು ಸಿಪಿಐ(ಎಂ) ಪೊಲಿಟ್‌ಬ್ಯುರೊ ಬಲವಾಗಿ ಖಂಡಿಸಿದೆ. ಅಮೆರಿಕ ಸಿರಿಯಾದ ಮೇಲೆ 60ಕ್ಕೂ ಹೆಚ್ಚು ಟಾಮ್‌ಹಾಕ್ ಕ್ಷಿಪಣಿಗಳನ್ನು ಹಾರಿಸಿರುವುದು ಅಮೆರಿಕ ಸಂಯುಕ್ತ ಸಂಸ್ಥಾನಗಳ ಒಂದು ನಗ್ನ ಮಿಲಿಟರಿ ಹಸ್ತಕ್ಷೇಪ ಎಂದು ಅದು ಹೇಳಿದೆ.

ಡೊನಾಲ್ಡ್ ಟ್ರಂಫ್ ಸ್ವತಂತ್ರ ದೇಶಗಳ ಆಂತರಿಕ ವ್ಯವಹಾರಗಳಲ್ಲಿ ಹಸ್ತಕ್ಷೇಪ ಮಾಡಿ ಅವುಗಳ ಸಾರ್ವಭೌಮತೆಯನ್ನು ಉಲ್ಲಂಘಿಸುವ ಮಿಲಿಟರಿ ಹಸ್ತಕ್ಷೇಪಗಳ ಅಮೆರಿಕಾ ಆಡಳಿತದ ಧೋರಣೆಯನ್ನು ಅನುಸರಿಸುತ್ತಿರುವುದು ಸ್ಪಷ್ಟ. ಇದು ಅಂತರ್ರಾಷ್ಟ್ರೀಯ ಕಾನೂನು ಮತ್ತು ನಡವಳಿಕೆಯಲ್ಲಿ ದೂಷಣಾರ್ಹ ಎಂದು ಸಿಪಿಐ(ಎಂ) ಹೇಳಿದೆ.

ಅಮೆರಿಕ ಸಂಯುಕ್ತ ಸಂಸ್ಥಾನದ ಜಾಗತಿಕ ಪ್ರಾಬಲ್ಯವನ್ನು ಮಿಲಿಟರೀಕರಣ ಮತ್ತು ಮಿಲಿಟರಿ ಹಸ್ತಕ್ಷೇಪಗಳ ಮೂಲಕ ಸ್ಥಾಪಿಸುವ ಗುರಿಯತ್ತ ಸಾಗಲು ಹೊಸ ಅಮೆರಿಕನ್ ಆಡಳಿತ ನಡೆಸಿರುವ ಪ್ರಯತ್ನಗಳನ್ನು ಬಲವಾಗಿ ಖಂಡಿಸುವುದಾಗಿ ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.



ಅಂಬೇಡ್ಕರ್ ಎಂಬ ಮಹತ್ವದ ಸಮಾಜವಾದಿ

ಬೇರೆಲ್ಲ ಸಮಾಜವಾದಿಗಳಿಗಿಂತ ಹೆಚ್ಚು ಆಳವಾದ, ಗಾಢವಾದ ಸಮಾಜವಾದ ಅಂಬೇಡ್ಕರ್‌ರವರದು. ಭಾರತದಲ್ಲಿ ಅಸ್ತಿತ್ವದಲ್ಲಿದ್ದ ಅನೇಕ ಬಗೆ-ಯ ಸಮಾಜವಾದಗಳು ಕೊನೆಯುಸಿರುಎಳೆದಿವೆ. ಗಾಂಧಿ ಸಮಾಜವಾದ, ನೆಹರೂ ಸಮಾಜವಾದ, ಲೋಹಿಯಾ ಸಮಾಜವಾದ ಕೃಪಲಾನಿ, ನರೇಂದ್ರದೇವ್, ಜೆಪಿ ಸಮಾಜವಾದ ಕೊನೆಗೆ ವಾಜಪೇಯಿ ಸಮಾಜವಾದವೂ ಒಂದಿದೆ. ಹೀಗೆ ಭಾರತದಲ್ಲಿ ಸಮಾಜವಾದ ತಳೆದ ವಿರೂಪಗಳಿಗೆ ಲೆಕ್ಕವಿಲ್ಲ. ಅದೊಂದು ಫ್ಯಾಷನ್ ಆಗಿಬಿಟ್ಟಿತ್ತು ಸ್ವಾತಂತ್ರ್ಯ ನಂತರದ ಮೊದಲ ಮೂರು ದಶಕಗಳಲ್ಲಿ.

ಅವುಗಳಲ್ಲಿ ಹೆಚ್ಚು ಜನಪ್ರಿಯವಾದದ್ದು ಲೋಹಿಯಾವಾದ. ಆದರೆ ಅವರಿಗಿಂತ ಹೆಚ್ಚು ಆಳವಾದ ಅಡಿಪಾಯ ಹೊಂದಿದ ಪ್ರಖರ, ಹಲವು ಆಯಾಮಗಳ ಚಿಂತನೆ ಅಂಬೇಡ್ಕರ್‌ರವರ ಪ್ರಭುತ್ವ ಸಮಾಜವಾದ state socialism. ಲೋಹಿಯಾರ ಸಮಾಜವಾದ ರೈತಪರ ದೃಷ್ಟಿಯಿಂದ ರೂಪುಗೊಂಡಿದ್ದರೆ, ಅಂಬೇಡ್ಕರ್‌ರವರ ಪ್ರಭುತ್ವ ಸಮಾಜವಾದ ಭೂಹೀನ ದಲಿತರು, ಅಸ್ಪೃಶ್ಯರು ಇತರ ಕೆಳಜಾತಿಗಳನ್ನು ಆಧರಿಸಿದ್ದು. ಆದ್ದರಿಂದಲೇ ಹೆಚ್ಚುಗಟ್ಟಿ ನೆಲೆ ಉಳ್ಳದ್ದು.

ಜಾತಿವ್ಯವಸ್ಥೆ ಮತ್ತು ಅಸ್ಪೃಶ್ಯತೆಯ ಸಾಮಾಜಿಕ ಶೋಷಣೆಯ ಜೊತೆಗೇ ಅದರ ಆರ್ಥಿಕ ಶೋಷಣೆ ಮತ್ತು ಆರ್ಥಿಕ ಆಧಾರವನ್ನು ಅವರು ಸ್ಪಷ್ಟವಾಗಿ ಗುರುತಿಸಿದರು.

Hindus own everything. They own land. They control trade and they also own state. Every source of revenue and profit is controlled by them. ಈ ಪರಿಸ್ಥಿತಿಯನ್ನು ನಿವಾರಿಸಲು ಪ್ರಭುತ್ವ ಸಮಾಜವಾದವೇ ಮಾರ್ಗ ಎಂದು ಅವರು ಕಂಡುಕೊಂಡರು. ಅದರಲ್ಲಿ ಅವರು ಲೋಹಿಯಾರವರ ಭೂವಿತರಣೆಯ ವಿಚಾರಕ್ಕಿಂತ ಬಹಳ ತೀವ್ರಗಾಮಿಯಾದ, ಎಲ್ಲಾ ಭೂಮಿಯು ಸರ್ಕಾರದ ವಶಕ್ಕೆ ಮತ್ತು ಅದನ್ನು ಜಾತಿ, ಧರ್ಮಬೇಧವಿಲ್ಲದೆ ಸಮಾನವಾಗಿ ಹಂಚಿಕೆಯಾಗಬೇಕು ಮತ್ತು ಅದನ್ನು ಸಾಮೂಹಿಕವಾಗಿ ಕೃಷಿ ಮಾಡಬೇಕು. ಎಲ್ಲಾ ಪ್ರಧಾನ ಮತ್ತು ಮೂಲಭೂತ ಕೈಗಾರಿಕೆಗಳು ಸರ್ಕಾರದ ಒಡೆತನದಲ್ಲಿರಬೇಕು. ದೇಶದೆಲ್ಲರಿಗೂ ಜೀವವಿಮೆ ಆಗಬೇಕು. ಅದೂ ಸರ್ಕಾರದ ಒಡೆತನದಲ್ಲಿರಬೇಕು ಎಂದು ಪ್ರತಿಪಾದಿಸಿದರು.

ಈ ತೆರನಾಗಿ ಬೇರೆಲ್ಲಾ ಸಮಾಜವಾದಿಗಳಿಗಿಂತ ವ್ಯಾಪಕ ರೂಪದ ಸಮಾಜವಾದವನ್ನು ಪ್ರತಿಪಾದಿಸಿದ ಸಮಾಜವಾದಿ ಅಂಬೇಡ್ಕರ್‌ರವರು.

– ಜಿ.ಎನ್. ನಾಗರಾಜ್

ಗುರಿ ಇನ್ನೂ ಬಲು ದೂರ

ದೇಶದ ಆರೋಗ್ಯ ನೀತಿಯು ಭಾರತದ ಆರೋಗ್ಯದ ಸ್ಥಿತಿಗತಿಗಳ ಬಗೆಗಿನ ಅಂಕಿಅಂಶಗಳನ್ನೇ ಆಧರಿಸಿರಬೇಕು. ದುರದೃಷ್ಟವಶಾತ್ ಬಹಳಷ್ಟು ಸಾರಿ ಹೀಗೆ ಆಗುವುದಿಲ್ಲ. ಭರ್ತಿ ಹತ್ತು ವರ್ಷಗಳ ನಂತರ ನಡೆಸಿದ ರಾಷ್ಟ್ರೀಯ ಕೌಟುಂಬಿಕ ಆರೋಗ್ಯ ಸಮೀಕ್ಷೆ–4 ರ ವರದಿಯನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಬಿಡುಗಡೆ ಮಾಡಿದೆ. ಈ ಹಿಂದೆ, 2005–06, 1998–99 ಮತ್ತು 1992–93ರಲ್ಲಿ ನಡೆದ ಸಮೀಕ್ಷೆಗಳ ವರದಿಗಳಂತೆ ಈ ವರದಿಯೂ ಸಹ ವಯಸ್ಕರ ಮತ್ತು ಮಕ್ಕಳ ಬಗೆಗಿನ ಸಂಖ್ಯಾವಾರು, ಆರೋಗ್ಯ ಮತ್ತು ಪೌಷ್ಟಿಕತೆಗಳ ಕುರಿತಾದ ಅಂಕಿಅಂಶಗಳನ್ನು ಒಟ್ಟಾರೆಯಾಗಿ ಅಖಿಲ ಭಾರತದ ಮಾಹಿತಿಗಳನ್ನೂ ಮತ್ತು ರಾಜ್ಯವಾರು ಮಾಹಿತಿಗಳನ್ನು ನೀಡುತ್ತದೆ. ಈ ಬಾರಿಯ ಸಮೀಕ್ಷೆಯು ಜಿಲ್ಲಾಮಟ್ಟದ ಮಾಹಿತಿಗಳನ್ನೂ ಒಳಗೊಂಡಿದೆ. ರಾಜ್ಯದೊಳಗಿನ ವ್ಯತ್ಯಾಸಗಳನ್ನು ಅರ್ಥಮಾಡಿಕೊಳ್ಳಲು ಇದು ಸಾಕಷ್ಟು ಸಹಾಯ ಮಾಡುತ್ತದೆ.

ಬಿಡುಗಡೆ ಮಾಡಿರುವ ಅಂಕಿಅಂಶಗಳನ್ನು ಎನ್.ಎಫ್.ಎಚ್.ಎಸ್.–3ರ ಸಮೀಕ್ಷೆಯ ಅಂಕಿಅಂಶಗಳ ಜೊತೆಗಿಟ್ಟು ಆರೋಗ್ಯ ಸ್ಥಿತಿಗತಿಗಳ ಬಗ್ಗೆ ಕೆಲವು ಪ್ರಾಥಮಿಕ ಹೋಲಿಕೆಗಳನ್ನು ಮಾಡಲು ಸಾಧ್ಯವಿದೆ. ಉದಾಹರಣೆಗೆ 2005–06ರಲ್ಲಿ ಕೆಳಗೆ ಐದುವರ್ಷ ಮೇಲ್ಪಟ್ಟಿರದ ಶೇ.48 ರಷ್ಟು ಮಕ್ಕಳ ದೈಹಿಕ ಬೆಳವಣಿಗೆ ಕುಂಠಿತಗೊಂಡಿತ್ತು. ಈಗ ಅದು ಶೇ.38 ಕ್ಕೆ ಇಳಿದಿದೆ. ಇದು ಅಪೌಷ್ಟಿಕತೆಯ ಪ್ರಮಾಣ ಕಡಿಮೆಯಾಗಿರುವುದನ್ನು ಸೂಚಿಸುತ್ತದೆ. ಆದರೆ ಜಾಗತಿಕ ಅಂಕಿಆಂಶಗಳಿಗೆ ಹೋಲಿಸಿದಲ್ಲಿ ಅಪೌಷ್ಟಿಕತೆಯು ಮುಂದುವರೆದಿರುವುದನ್ನು ಎತ್ತಿತೋರಿಸುತ್ತದೆ. ಮತ್ತೊಂದು ಸಕಾರಾತ್ಮಕ ಅಂಶವೆಂದರೆ ರೋಗ ಸೋಂಕಿನಿಂದ ಕಾಪು (ಇಮ್ಯೂನೈಸಷನ್) ಪಡೆದ ಮಕ್ಕಳ ಸಂಖ್ಯೆ ಶೇ.44 ರಿಂದ ಶೇ.62ಕ್ಕೇರಿದೆ. ಅಲ್ಲದೆ ಒಟ್ಟಾರೆ ಫಲವತ್ತತೆ ದರ (ಟೋಟಲ್ ಫರ್ಟಿಲಿಟಿ ರೇಟ್– ಮಹಿಳೆಯೊಬ್ಬಳು ಜನ್ಮ ನೀಡುವ ಸರಾಸರಿ ಮಕ್ಕಳ ಸಂಖ್ಯೆ– ಅನುವಾದಕನ ಟಿಪ್ಪಣಿ) ವು 2.7 ರಿಂದ 2.2ಕ್ಕೆ ಇಳಿದಿದೆ. ಈ ಫಲವತ್ತತೆ ದರವು ಜನಸಂಖ್ಯಾ ಬದಲು ಮಟ್ಟಕ್ಕೆ (ರಿಪ್ಲೇಸ್‌ಮೆಂಟ್ ಲೆವೆಲ್– ಎಂದ-ರೆ ಒಂದು ದೇಶವು ತದನಂತರದ ಪೀಳಿಗೆಯಲ್ಲೂ ಈಗಿರುವಷ್ಟೇ ಜನಸಂಖ್ಯೆಯನ್ನು ಉಳಿಸಿಕೊಳ್ಳಲು ಬೇಕಾದ ಫಲವತ್ತತೆಯ ಮಟ್ಟ– ಅನುವಾದಕನ ಟಿಪ್ಪಣಿ) ಬೇಕಿರುವಷ್ಟಿದೆ.

ಮತ್ತೊಂದು ಭರವಸೆದಾಯಕ ಬೆಳವಣಿಗೆಯೆಂದರೆ ಸಾಂಸ್ಥಿಕವಾಗಿ ಹೆರಿಗೆಗಳಲ್ಲಿ (ಮನೆಮಾರುಗಳಲ್ಲಿ ವೈದ್ಯಕೀಯ ಆರೈಕೆಯಿಲ್ಲದೆ ಆಗುತ್ತಿದ್ದ ಹೆರಿಗಳ ಬದಲಿಗೆ ಸೂಕ್ತ ವೈದ್ಯಕೀಯ ಆರೈಕೆಯಿರುವಂಥ ಆಸ್ಪತ್ರೆಗಳಂಥಾ ಕಡೆಗಳಲ್ಲಿ ಆಗುವ ಹೆರಿಗೆಗಳು– ಅನುವಾದಕನ ಟಿಪ್ಪಣಿ) ಆಗಿರುವ ಹೆಚ್ಚಳ. ಕಳೆದ ಸಮೀಕ್ಷೆಯಲ್ಲಿ ಇದರ ಸರಾಸರಿ ಪ್ರಮಾಣ ಶೇ.39 ರಷ್ಟಿತ್ತು (ಅತ್ಯಂತ ಶ್ರೀಮಂತರ ಕುಟುಂಬಗಳಲ್ಲಿ ಶೇ.84ರಷ್ಟು ಮತ್ತು ಅತ್ಯಂತ ಬಡವರ ಕುಟುಂಬಗಳಲ್ಲಿ ಶೇ.13 ರಷ್ಟು.). ಈಗ ಆ ಸರಾಸರಿ ಶೇ.79ಕ್ಕೆ ಜಿಗಿದಿದೆ (ಅತ್ಯಂತ ಶ್ರೀಮಂತರ ಕುಟುಂಬಗಳಲ್ಲಿ ಶೇ.95 ಮತ್ತು ಅತ್ಯಂತ ಬಡವರಲ್ಲಿ ಶೇ. 60). ಹಿಂದಿನ ಅವಧಿಯಲ್ಲಿ ಶೇ.18ರಷ್ಟು ಮಹಿಳೆಯರು ಸಾರ್ವಜನಿಕ ಆಸ್ಪತ್ರೆಗಳನ್ನು ಬಳಸಿದ್ದರೆ ಈ ಅವಧಿಯಲ್ಲಿ ಆದು ಶೇ. 52ಕ್ಕೇರಿದೆ. ಇದರರ್ಥವಿಷ್ಟೆ. ಸರ್ಕಾರಿ ಸೌಲಭ್ಯಗಳು ಲಭ್ಯವಿದ್ದಲ್ಲಿ ಮಹಿಳೆಯರು ಖಾಸಗಿ ಆಸ್ಪತ್ರಗಳ ಬದಲಿಗೆ ಸರ್ಕಾರಿ ಆಸ್ಪತ್ರೆಗಳನ್ನೇ ಬಳಸುತ್ತಾರೆ. ತನ್ನೆಲ್ಲಾ ಮಿತಿಗಳ ನಡುವೆಯೂ ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಮಿಷನ್ (ನ್ಯಾಷನ್ ರೂರಲ್ ಹೆಲ್ತ್ ಮಿಷನ್– ಎನ್‌ಆರ್‌ಎಚ್‌ಎಮ್) ಮತ್ತು ಜನನಿ ಸುರಕ್ಷಾ ಯೋಜನೆಗಳು ಈ ವಿಸ್ತರಣೆ ಮತ್ತು ಹೆಚ್ಚಳಕ್ಕೆ ತಮ್ಮದೇ ಆದ ಕೊಡುಗೆಗಳನ್ನು ನೀಡಿವೆ.

ರಾಷ್ಟ್ರೀಯ ಕೌಟುಂಬಿಕ ಆರೋಗ್ಯ ಸಮೀಕ್ಷೆ–4 (ನ್ಯಾಷನಲ್ ಫ್ಯಾಮಿಲಿ ಹೆಲ್ತ್ ಸರ್ವೆ– ಎನ್.ಎಫ್.ಎಚ್. ಎಸ್.–4)ರ ಅಂಕಿ ಅಂಶಗಳು ಆರೋಗ್ಯದ ಸ್ಥಿತಿಗತಿಗಳಲ್ಲಿ ಸುಧಾರಣೆಯನ್ನು ತೋರಿಸುತ್ತಿದ್ದರೂ ಒಟ್ಟಾರೆ ಪರಿಸ್ಥಿತಿ ಕಳವಳಕಾರಿಯೇ ಆಗಿದೆ.

ಈ ಕೆಲವು ಸಕಾರಾತ್ಮಕ ಅಂಶಗಳನ್ನು ಹೊರತುಪಡಿಸಿ, ಎನ್.ಎಫ್.ಎಚ್.ಎಸ್.–4ರ ಸಮೀಕ್ಷೆಯು ತುರ್ತು ಗಮನ ಮತ್ತು ನಿರಂತರ ಕ್ರಿಯೆಗಳನ್ನು ಬೇಡುವ ಹಲವಾರು ಹಳೆಯ ಮತ್ತು ಹೊಸ ಕ್ಷೇತ್ರಗಳನ್ನು ಗುರುತಿಸಿದೆ. ಮೊದಲನೆಯದಾಗಿ ವರ್ಗ, ಜಾತಿ ಮತ್ತು ಲಿಂಗಗಳನ್ನೆಲ್ಲಾ ಗಮನದಲ್ಲಿಟ್ಟುಕೊಂಡರೆ ಹಲವು ಸೂಚ್ಯಂಕಗಳಲ್ಲಿ ಸುಧಾರಣೆಗಳು ಕಂಡುಬಂದಿದ್ದರೂ ಅಂತರಗಳು ಮಾತ್ರ ಇನ್ನೂ ಅಗಾಧವಾಗಿಯೇ ಇವೆ. ಉದಾಹರಣೆಗೆ ಈ ಸಮೀಕ್ಷೆಯು ಕಂಡುಕೊಂಡಿರುವಂತೆ ಸಮಾಜದ ಕೆಳಸ್ಥರಗಳಲ್ಲಿ ಪ್ರತಿ ಎರಡನೇ ಮಗುವಿನ ದೈಹಿಕ ಬೆಳವಣಿಗೆಯು (ಶೇ.51) ಕುಂಠಿತಗೊಂಡು ಕಡಿಮೆತೂಕ (ಶೇ.49) ಹೊಂದಿದ್ದರೆ ಮೇಲ್‌ಸ್ಥರಗಳಲ್ಲಿ ಇದು ಐದರಲ್ಲಿ ಒಂದು ಮಗುವಿನಲ್ಲಿ ಮಾತ್ರ ಕಂಡು ಬರುತ್ತದೆ. ಅದೇರೀತಿ ಪ್ರಸವಪೂರ್ವದಲ್ಲಿ ಆಸ್ಪತ್ರೆಗಳಿಗೆ ಕನಿಷ್ಟ ನಾಲಕ್ಕು ಭೇಟಿ ಕೊಟ್ಟವರ ಸಂಖ್ಯೆ ಸಮಾಜದ ಕೆಳಸ್ಥರಗಳಲ್ಲಿ ಶೇ.25ರಷ್ಟಿದ್ದರೆ ಉನ್ನತಸ್ಥರಗಳಲ್ಲಿ ಶೇ.73ರಷ್ಟಿದೆ. ಹೀಗೆ ಈ ಸಮೀಕ್ಷೆಯು ಪ್ರಾದೇಶಿಕ ಮತ್ತು ಸಮಾಜೋ –ಆರ್ಥಿಕ ವ್ಯತ್ಯಾಸಗಳು ಮುಂದುವರೆದಿರುವುದನ್ನು ತೋರಿಸುತ್ತದೆ. ಬಿಹಾರದಲ್ಲಿ ಒಟ್ಟಾರೆ ಫಲವತ್ತತೆ ದರ (ಟೋಟಲ್ ಫರ್ಟಿಲಿಟಿ ರೇಟ್) ಈಗಲೂ 3.7ರಷ್ಟಿದ್ದರೆ (ಇದು 1992–93ರಲ್ಲಿ ಅಖಿಲ ಭಾರತ ಮಟ್ಟದಲ್ಲಿದ್ದ ದರ) ತಮಿಳುನಾಡಿನಲ್ಲಿ 1.7ಕ್ಕಿಳಿದಿದೆ. ಅದೇ ರೀತಿ ಉತ್ತರ ಪ್ರದೇಶದಲ್ಲಿ ಶಿಶು ಮರಣ ದರ 64ರಷ್ಟಿದ್ದರೆ ಕರ್ನಾಟಕದಲ್ಲಿ ಅದು ಕೇವಲ 28 ಮಾತ್ರ.



ಈ ಸಮಿಕ್ಷೆಯು ಒದಗಿಸಿರುವ ಅಂಕಿಅಂಶಗಳನ್ನು ಗಮನಿಸಿದಾಗ ಆರೋಗ್ಯ ನೀತಿಗಳನ್ನು ರೂಪಿಸುವಾಗ ನಾವು ಈವರೆಗೆ ಕಡೆಗಣಿಸಿದ್ದ ಹಲವಾರು ಅಂಶಗಳನ್ನು ಮೊದಲಿಗಿಂತ ಗಂಭೀರವಾಗಿ ಪರಿಗಣಿಸಬೇಕಾದ ಅಗತ್ಯಗಳನ್ನು ಎತ್ತಿತೋರಿಸುತ್ತದೆ. ಉದಾಹರಣೆಗೆ ನಗರಪ್ರದೇಶದ ಆರೋಗ್ಯದ ಪರಿಸ್ಥಿತಿ ತುಂಬಾ ಕೆಟ್ಟದಾಗಿದ್ದರೂ ಅಲ್ಲಿ ಆರೋಗ್ಯ ಸೇವೆಯ ಮಧ್ಯಪ್ರವೇಶ ಕಡೆಗಣಿಸಲ್ಪಟ್ಟಿದೆ. ಒಂದು ದಶಕದ ನಂತರವೂ ನಗರ ಪ್ರದೇಶದಲ್ಲಿ ರೋಗ ನಿರೋಧಕ ಲಸಿಕೆ ಪಡೆದವರ ದರ ಶೇ. 64 ರಷ್ಟು ಮಾತ್ರ ಇದೆ. (ಗ್ರಾಮೀಣ ಪ್ರದೇಶದಲ್ಲಿ ಅದು ಶೇ.62 ರಷ್ಟಾಗಿದೆ). ಎನ್.ಎಫ್.ಎಚ್.ಎಸ್.–3ರ ಸಮೀಕ್ಷೆಯಲ್ಲಿ ಈ ದರ ಶೇ.58 ರಷ್ಟಿತ್ತೆಂಬುದನ್ನು ಗಮನಿಸಿದಾಗ ಆಗಿರುವ ಏರಿಕೆ ಎಷ್ಟು ಅತ್ಯಲ್ಪ ಎಂಬುದು ಅರ್ಥವಾಗುತ್ತದೆ. ಹುಟ್ಟಿದ ಒಂದು ಗಂ-ಟೆಯ ಒಳಗೆ ಮೊಲೆಯೂಡಿಸಿಕೊಳ್ಳುವ ಮಕ್ಕಳ ಸಂಖ್ಯೆಯಲ್ಲಿ ನಗರ ಮತ್ತು ಗ್ರಾಮಗಳಲ್ಲಿ ಹೆಚ್ಚು ವ್ಯತ್ಯಾಸವೇನಿಲ್ಲ (ನಗರ ಶೇ.43 ಮತ್ತು ಗ್ರಾಮ ಶೇ.41). ಆದರೆ ಆರು ತಿಂಗಳ ಕಾಲ ಕೇವಲ ಮೊಲೆಹಾಲು ಉಣಿಸುವ ಸಂಖ್ಯೆ ನಗರಕ್ಕಿಂತ ಗ್ರಾಮಗಳಲ್ಲೇ ಜಾಸ್ತಿ ಇದೆ. (ನಗರ ಶೇ. 52 ನಗರ ನಗರ ಶೇ. 56). ಎತರಕ್ಕೆ ತಕ್ಕ ತೂಕವಿಲ್ಲದಿರುವ ಸಮಸ್ಯೆ ನಗರ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಏಕಸಮನಾಗಿದೆ (ಶೇ.7.5). ನಗರೀಕರಣದ ದರವನ್ನು ಗಮನಿಸಿದಾಗ ನಗರ ಸಂದರ್ಭವನ್ನು ಗಮನದಲ್ಲಿಟ್ಟುಕೊಂಡು ಆರೋಗ್ಯ ಸೇವೆಯ ಮಧ್ಯಪ್ರವೇಶವನ್ನು ಯೋಜಿಸುವುದು ತುರ್ತಾಗಿದೆ.

ಅಪೌಷ್ಟಿಕತೆಯ ಜೊತೆಜೊತೆಗೆ ಭಾರತವು ಅತಿತೂಕ ಮತ್ತು ಬೊಜ್ಜುಗಳ ಸಮಸ್ಯೆಯನ್ನೂ ಎದುರಿಸುತ್ತಿದೆ. ಈ ಸಮಸ್ಯೆಯು ಮಧುಮೇಹ ಮತ್ತು ಅತಿ ಒತ್ತಡದಂಥ ಸಾಂಕ್ರಾಮಿಕವಲ್ಲದ ರೋಗಗಳ ಹುಟ್ಟಿಗೆ ಬೇಕಾದ ಪರಿಸ್ಥಿತಿಯನ್ನು ಒದಗಿಸುತ್ತದೆ. ಎನ್.ಎಫ್.ಎಚ್.ಎಸ್.–4ರ ಸಮೀಕ್ಷೆಯ ಪ್ರಕಾರ ಶೇ.21 ರಷ್ಟು ವಯಸ್ಕ ಮಹಿಳೆಯರು ಮತ್ತು ಶೇ.19ರಷ್ಟು ವಯಸ್ಕ ಪುರುಷರು ಅಧಿಕ ತೂಕ ಅಥವಾ ಬೊಜ್ಜಿನಿಂದ ಬಳಲುತ್ತಿದ್ದು ಈ ಸಮಸ್ಯೆ ನಗರ ಪ್ರದೇಶದಲ್ಲಿ ಹೆಚ್ಚಾಗಿದೆ. ವಾಸ್ತವವಾಗಿ ಈ ಅಪೌಷ್ಟಿಕತೆ ಮತ್ತು ಅಧಿಕ ತೂಕಗಳಿಗೆ ಸಮಾನವಾದ ಕಾರಣಗಳಿವೆ. ಆಹಾರ ಪದ್ಧತಿಗಳ ಜಾಗತೀಕರಣ. ಆಹಾರಗಳ ಉತ್ಪಾದನೆ, ವಿತರಣೆ ಮತ್ತು ವ್ಯಾಪಾರಗಳ ಮೇಲಿನ ನಿಯಂತ್ರಣ ಸ್ಥಳೀಯ ಸಮುದಾಯಗಳ ಕೈತಪ್ಪಿ ದೊಡ್ಡ ಕಾರ್ಪೊರೇಷನ್‌ಗಳ ಕೈ ಸೇರಿದೆ. ಭಾರತವು ಈವರೆಗೆ ತನ್ನ ಆಹಾರ ವೈವಿಧ್ಯತೆಯನ್ನು ರಕ್ಷಿಸಿಕೊಳ್ಳಲಾಗಲೀ, ಮಾರುಕಟ್ಟೆಯ ಮೇಲೆ ದಾಳಿ ಇಡುತ್ತಿರುವ ಅತಿ ಸಂಸ್ಕರಿತ ಆಹಾರ ಸಾಮಗ್ರಿಗಳನ್ನು ನಿಯಂತ್ರಿಸಲಾಗಲೀ ಯಾವುದೇ ಕ್ರಮಗಳನ್ನು ತೆಗೆದುಕೊಂಡಿಲ್ಲ.

ಈ ಅಂಕಿಅಂಶಗಳ ಹಿನ್ನೆಲೆಯಲ್ಲಿ ನೋಡಿದಾಗ 2017ರ ರಾಷ್ಟ್ರೀಯ ಆರೋಗ್ಯ ನೀತಿಯು ಸಾಂಕ್ರಾಮಿಕವಲ್ಲದ ರೋಗಗಳ (ನಾನ್–ಕಮ್ಯುನಿಕಬಲ್ ಡಿಸೀಸಸ್) ನಿಯಂತ್ರಣದ ಪ್ರಸ್ತಾಪವನ್ನು ಮಾಡಿದ್ದರೂ ಅದನ್ನು ಹೇಗೆ ಸಾಧಿಸುತ್ತದೆಂಬ ಬಗ್ಗೆ ಯಾವುದೇ ಕಾರ್ಯಸೂಚಿಯನ್ನು ಮುಂದಿಟ್ಟಿಲ್ಲ. ವಾಸ್ತವವಾಗಿ ಪೌಷ್ಟಿಕತೆ, ನೈರ್ಮಲ್ಯ, ಲಿಂಗ ಮತ್ತು ಬಡತನಗಳಂಥ ಸಾಮಾಜಿಕ ನಿರ್ಣಾಯಕ ಅಂಶಗಳಿಗೂ ಆರೋಗ್ಯ ಪರಿಸ್ಥಿತಿಗೂ ಇರುವ ಸಂಬಂಧಗಳನ್ನು ಪರಿಗಣಿಸುವಲ್ಲಿ ಎನ್.ಎಫ್.ಎಚ್.ಎಸ್.–4 ತುಂಬಾ ಹಿಂದೆ ಬಿದ್ದಿದೆ. ಅದೇರೀತಿ ಖಾಸಗಿ ಆರೋಗ್ಯ ಸೌಕರ್ಯಗಳನ್ನು ಸರಿಯಾಗಿ ನಿಯಂತ್ರಿಸುವ ಅಗತ್ಯವನ್ನು ಸಹ ಅದು ಸಾಕಷ್ಟು ಗುರುತಿಸುವುದಿಲ್ಲ. ಅಗತ್ಯವಿರುವಷ್ಟು ಸಾರ್ವಜನಿಕ ಆರೋಗ್ಯ ಸೌಕರ್ಯಗಳ ಲಭ್ಯತೆಯಿಲ್ಲದಿರುವುದರಿಂದ ಹೆಚ್ಚೆಚ್ಚು ಜನರು ಖಾಸಗಿ ಆರೋಗ್ಯ ಸೇವೆಗೆ ಮೊರೆಹೋಗುತ್ತಿದ್ದಾರೆ. ಇಂಥಾ ಸನ್ನಿವೇಶದಲ್ಲಿ ಖಾಸಗಿ ಆರೋಗ್ಯ ಸಂಸ್ಥೆಗಳು ನೀತಿಬದ್ಧ ಮತ್ತು ಗುಣಮಟ್ಟದ ಆರೋಗ್ಯ ಸೇವೆಗಳನ್ನು ಒದಗಿಸುವುದನ್ನು ಖಾತರಿಪಡಿಸಿಕೊಳ್ಳಲು ಬೇಕಾದ ಕಾನೂನು ಮತ್ತು ಸಾಂಸ್ಥಿಕ ಚೌಕಟ್ಟನ್ನು ಜಾರಿಯಲ್ಲಿಡುವುದು ಅತ್ಯಗತ್ಯವಾಗಿದೆ. ಭಾರತದ ಆರೋಗ್ಯ ವ್ಯವಸ್ಥೆಯನ್ನು ಕೇವಲ ಲಾಭವನ್ನು ಗಮನದಲ್ಲಿಟ್ಟುಕೊಂಡು ನಡೆಸಲು ಸಾಧ್ಯವಿಲ್ಲ. ಆದ್ದರಿಂದಲೇ ಎಲ್ಲಾ ಹಂತದ ಆರೋಗ್ಯ ಸೇವೆಗಳನ್ನು ಸಾರ್ವಜನಿಕ ಆರೋಗ್ಯ ವ್ಯವಸ್ಥೆಯೇ ಒದಗಿಸುವ ರೀತಿ ವಿಸ್ತರಣೆ ಮಾಡುವುದು ಅತ್ಯುತ್ತಮವಾದದ್ದು.

ಕೃಪೆ: **Economic and Political Weekly**
April 8, 2017. Vol 52. No. 14

ಅನು: ಶಿವಸುಂದರ್

ಮನರೇಗ ನಂತರ ಈಗ ಅರಣ್ಯ ಕಾಯ್ದೆಯನ್ನು ಮೊಟಕು ಮಾಡುವ ಆದೇಶ

ಲಕ್ಷಾಂತರ ಬುಡಕಟ್ಟು ಕುಟುಂಬಗಳ ಹಕ್ಕುಗಳ ಮೇಲೆ ದಾಳಿ ನಿಲ್ಲಿಸಲು ಪ್ರಧಾನಿಗಳಿಗೆ ಬೃಂದಾಕಾರಟ್ ಪತ್ರ

ಪರಿಸರ, ಅರಣ್ಯಗಳು ಮತ್ತು ಹವಾಮಾನ ಬದಲಾವಣೆ ಮಂತ್ರಾಲಯದ 'ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರ'(ಎನ್‌ಟಿಸಿಎ) ಮಾರ್ಚ್ 28ರಂದು ಹುಲಿ ಸಂಚಾರ ರಾಜ್ಯಗಳ ಮುಖ್ಯ ವನ್ಯಜೀವನ ವಾರ್ಡನ್‌ಗಳಿಗೆ 'ಕ್ರಿಟಿಕಲ್' ಹುಲಿ ನೆಲೆಗಳಲ್ಲಿ ಅರಣ್ಯ ಹಕ್ಕುಗಳ ಕಾಯ್ದೆಯ ಅಡಿಯಲ್ಲಿ ಯಾವುದೇ ಹಕ್ಕು ನೀಡಲಾಗುವುದಿಲ್ಲ ಎಂದು ಆದೇಶ ಕಳಿಸಲಾಗಿದೆ. ಈ ಬಗ್ಗೆ ಅಧಿಸೂಚನೆಗೆ ಯಾವುದೇ ಮಾರ್ಗದರ್ಶಕ ನಿಯಮಗಳು ಇಲ್ಲವಾದ್ದರಿಂದ ಈ ಆದೇಶ ಕಳಿಸಲಾಗಿದೆಯಂತೆ! ಇದು ಬಹಳಷ್ಟು ಬುಡಕಟ್ಟು ಜನಗಳ ಬದುಕನ್ನು ತಟ್ಟುವ ವ್ಯಾಪಕ ಪರಿಣಾಮಗಳನ್ನು ಬೀರುವ ಕ್ರಮ. ಇದನ್ನು ಮಂತ್ರಾಲಯದ ವೆಬ್‌ಸೈಟಿನಲ್ಲೂ ಪ್ರಕಟಿಸದೆ ಮುಚ್ಚುಮರೆಯಿಂದ ಕಳಿಸಲಾಗಿದೆ.

ಯುಪಿಎ–1 ಸರಕಾರ ತಂದ ಕೆಲವು ಜನಪರ ಕಾಯ್ದೆಗಳಲ್ಲಿ ಅರಣ್ಯ ಹಕ್ಕುಗಳ ಕಾಯ್ದೆಯೂ ಇದೂ ಒಂದು. ಕೆಲವು ತಿಂಗಳ ಹಿಂದೆ ಮಹಾರಾಷ್ಟ್ರ ಮತ್ತು ಮಧ್ಯಪ್ರದೇಶದ ಬಿಜೆಪಿ ಸರಕಾರಗಳು ತಂದಿರುವ ತಿದ್ದುಪಡಿಗಳ ಹಿನ್ನೆಲೆಯಲ್ಲಿ ಮೋದಿ ಸರಕಾರ ಬುಡಕಟ್ಟು ಮತ್ತು ಇತರ ಅರಣ್ಯವಾಸಿಗಳಿಗೆ ಕೆಲವಾದರೂ ಹಕ್ಕುಗಳನ್ನು ಕೊಡುವ ಈ ಕಾಯ್ದೆಯನ್ನು ದುರ್ಬಲಗೊಳಿಸುವ ತಿದ್ದುಪಡಿಗಳನ್ನು ತರಬಹುದೆಂಬ ಸಂದೇಹವನ್ನು ಇದು ಬಲಪಡಿಸಿದೆ.

ಇದೊಂದು ಕಾನೂನುಬಾಹಿರ ಕ್ರಮ, ಇದನ್ನು ಹಿಂತೆಗೆದುಕೊಳ್ಳಬೇಕು ಎಂದು ಈ ಕಾಯ್ದೆಯನ್ನು ಅಂಗೀಕರಿಸುವ ಮುನ್ನ ರಚಿಸಿದ್ದ ಸಂಸತ್ತಿನ ಆಯಕೆ ಸಮಿತಿ ಸದಸ್ಯರಾಗಿದ್ದ ಮತ್ತು ವನ್ಯಜೀವನ ಸಂರಕ್ಷಣಾ ಕಾಯ್ದೆ, 2006ನ್ನು ರೂಪಿಸುವಲ್ಲೂ ಪಾತ್ರವ ವಹಿಸಿದ ಸಿಪಿಐ(ಎಂ)ನ ಹಿರಿಯ ಮುಖಂಡರಾದ ಬೃಂದಾಕಾರಟ್ ಪ್ರಧಾನ ಮಂತ್ರಿಗಳಿಗೆ ಒಂದು ಪತ್ರ ಬರೆದು ಆಗ್ರಹಿಸಿದ್ದಾರೆ. ಅದರಲ್ಲಿ ಈ ಕೆಳಗಿನ ಅಂಶಗಳನ್ನು ಅವರು ಪ್ರಧಾನ ಮಂತ್ರಿಗಳ ಗಮನಕ್ಕೆ ತಂದಿದ್ದಾರೆ.

1. ಅರಣ್ಯ ಹಕ್ಕುಗಳ ಜಾರಿ ಬುಡಕಟ್ಟು ವ್ಯವಹಾರಗಳ ಮಂತ್ರಾಲಯದ ವ್ಯಾಪ್ತಿಗೆ ಸೇರಿದ್ದು, ಪರಿಸರ ಮಂತ್ರಾಲಯದ ಅಥವ ಎನ್‌ಟಿಸಿಎ ಅಧಿಕಾರ ವ್ಯಾಪ್ತಿಗೆ ಸೇರಿದ್ದಲ್ಲ. ಅದ್ದರಿಂದ ಇಂತಹ ಸುತ್ತೋಲೆ ಕಳಿಸುವ ಅಧಿಕಾರ ಇವರಿಗಿಲ್ಲ.
2. ಎನ್‌ಟಿಸಿಎ ಅಧಿಕಾರಗಳು ಮತ್ತು ಕೆಲಸಗಳನ್ನು ನಿರೂಪಿಸುವ 2006ರ ವನ್ಯಜೀವಿ ಸಂರಕ್ಷಣಾ ತಿದ್ದುಪಡಿ ಶಾಸನ ಕೂಡ ಅದರ ಯಾವುದೇ ಸ್ಥಳೀಯರ ,ನಿರ್ದಿಷ್ಟವಾಗಿ ಬುಡಕಟ್ಟು ಜನಗಳ ಅಧಿಕಾರಗಳನ್ನು ಬಾಧಿಸಬಾರದು ಎಂದು ಸ್ಪಷ್ಟವಾಗಿ ಹೇಳಿದೆ.
3. ಅರಣ್ಯವಾಸಿಗಳ ಹಕ್ಕುಗಳನ್ನು ಮಾನ್ಯ ಮಾಡುವ ಪ್ರಕ್ರಿಯೆಯನ್ನು ಪೂರ್ಣಗೊಳಿಸದೆ ಈ ರೀತಿ ಯಾವುದೇ ಪ್ರದೇಶವನ್ನು ಸಂರಕ್ಷಿತ ಪ್ರದೇಶವೆಂದು ಹೆಸರಿಸುವಂತಿಲ್ಲ.
4. ಅರಣ್ಯವಾಸಿಗಳ ಹಕ್ಕುಗಳು ಎಲ್ಲ ಅರಣ್ಯ ಪ್ರದೇಶಗಳಿಗೆ ಸಂಬಂಧಿಸಿದ್ದು, ಅದನ್ನು 'ಹುಲಿ ಸಂರಕ್ಷಣಾ ಪ್ರದೇಶ'ವೆಂದು ಅದಕ್ಕೆ ಅಪವಾದ ಎನ್ನುವಂತಿಲ್ಲ.
5. ಹೀಗೇನಾದರೂ ಸಂರಕ್ಷಣಾ ಪ್ರದೇಶಗಳನ್ನು ಗುರುತಿಸಬೇಕಾದರೆ ಅದರ ಮೊದಲು ಅಲ್ಲಿಯ ಅರಣ್ಯವಾಸಿಗಳ ಹಕ್ಕುಗಳನ್ನು ಗುರುತಿಸುವ ಪ್ರಕ್ರಿಯೆಯ ನಂತರವೇ ಯಾವುದೇ ಮಾರ್ಪಾಡನ್ನು ಮಾಡಬಹುದುಎ ಎಂದು ಅರನ್ಯ ಹಕ್ಕು ಕಾಯ್ದೆ ವಿಧಿಸಿದೆ. ಇಲ್ಲಿ ಅಂತಹುದೇನನ್ನೂ ಮಾಡದೆ ಮಾರ್ಪಾಡು ತರಲಾಗುತ್ತಿದೆ. ಇದು ಹಕ್ಕುಗಳ ಮಾರ್ಪಾಡು ಅಲ್ಲ, ನಿರಾಕರಣೆಯಾಗುತ್ತದೆ.
6. ವಾಸ್ತವವಾಗಿ ವನ್ಯಜೀವಿ ನೆಲೆಗಳ ಅಧಿಸೂಚನೆಯ ಸೂಚನೆಗಳಿಗೂ ಅರಣ್ಯ ಹಕ್ಕಿಗೂ ಏನೂ ಸಂಬಂಧವಿಲ್ಲ. ಅರಣ್ಯ ಪ್ರದೇಶವೆಂದು ಗುರುಸಿರುವ ಎಲ್ಲ ಕಡೆಗಳಲ್ಲೂ, ಅದು ಅಧಿಸೂಚಿತ ವನ್ಯಜೀವಿನೆಲೆಯಾಗಿರಲಿ, ಅಥವ ಬೇರೆ ಏನೇ ಆಗಿರಲಿ ಅರಣ್ಯವಾಸಿಗಳ ಹಕ್ಕುಗಳನ್ನು ಮಾನ್ಯ ಮಾಡಲೇ ಬೇಕು ಎಂದು ಕಾಯ್ದೆ ವಿಧಿಸುತ್ತದೆ.
7. ಇದಲ್ಲದೆ ವನ್ಯಜೀವಿ/ಹುಲಿ ಸಂರಕ್ಷಣಾ ನೆಲೆಗಳನ್ನು ಗುರುತಿಸುವ ಪ್ರಕ್ರಿಯೆಯ ಮರುವಿಮರ್ಶೆ ಕೂಡ ನಡೆಯಬೇಕಾಗಿದೆ. 2007ರಲ್ಲಿ ಈ ಪ್ರಕ್ರಿಯೆ ಆರಂಭವಾದಾಗ ಹಲವು ಪರಿಣಿತರು ಇದು ವನ್ಯಜೀವಿ ಕಾಯ್ದೆಯನ್ನು ಉಲ್ಲಂಘಿಸುತ್ತಿದೆ ಎಂದು ಅಭಿಪ್ರಾಯ ಪಟ್ಟಿದ್ದರು.

ಒಟ್ಟಿನಲ್ಲಿ, ಎನ್‌ಟಿಸಿಎನ ಆದೇಶ ಸಂಪೂರ್ಣ ಕಾನೂನು ಬಾಹಿರವಾಗಿದೆ. ಈ ರೀತಿಯಲ್ಲಿ ಅರಣ್ಯ ಹಕ್ಕುಗಳ ಮಾನ್ಯತೆಗೆ ಬಾಧೆ ತರುವ ಯಾವುದೇ ರಾಜ್ಯ ಅಥವ ಕೇಂದ್ರ ಸರಕಾರದ ಅಧಿಕಾರಿ ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಬುಡಕಟ್ಟುಗಳ (ಅತ್ಯಾಚಾರಗಳ ತಡೆ) ಕಾಯ್ದೆಯ ಅಡಿಯಲ್ಲಿ ಮತ್ತು ಅರಣ್ಯ ಹಕ್ಕುಗಳ ಕಾಯ್ದೆಯ ಅಡಿಯಲ್ಲಿ ವಿಚಾರಣೆಗೆ ಒಳಪಡಿಸಬೇಕಾಗಿದೆ ಎಂದು ಪ್ರಧಾನಿಗಳ ಗಮನಕ್ಕೆ ತಂದಿರುವ ಬೃಂದಾ ಕಾರಟ್ ಅವರು ಈ ಹಿಂದೆಯೂ ಬಿಜೆಪಿ ಆಳ್ವಿಕೆಯ ಮಹಾರಾಷ್ಟ್ರ ಮತ್ತು ಮಧ್ಯಪ್ರದೇಶ ಸರಕಾರಗಳು ಬುಡಕಟ್ಟು ಸಂಘಟನೆಗಳ ಬಲವಾದ ಆಕ್ಷೇಪಗಳನ್ನು ಲೆಕ್ಕಿಸದೆ ಕಾನೂನುಬಾಹಿರವಾದ ಗ್ರಾಮ ಅರಣ್ಯ ನಿಯಮಗಳನ್ನು ತಂದಿದ್ದನ್ನು ಅವರ ಗಮನಕ್ಕೆ ತಂದದ್ದನ್ನು ನೆನಪಿಸಿದ್ದಾರೆ.

ಕೋಟ್ಯಂತರ ಬುಡಕಟ್ಟು ಜನಗಳು ಮತ್ತು ಅರಣ್ಯವಾಸಿಗಳಿಗೆ ಸ್ವಲ್ಪವಾದರೂ ರಕ್ಷಣೆ ಕೊಡುವ ಕಾನೂನುಗಳ ಬಗ್ಗೆ ಇಂತಹ ಬಹಿರಂಗ ತುಚ್ಛೀಕಾರ ಅಭೂತಪೂರ್ವ ಎಂದು ಪ್ರಧಾನಿಗಳಿಗೆ ಬರೆದಿರುವ ಈ ಪತ್ರದಲ್ಲಿ ಹೇಳುತ್ತ ಬೃಂದಾ ಕಾರಟ್ ಈ ಕಾನೂನುಬಾಹಿರ ಆದೇಶವನ್ನು ಬೇಗನೇ ಹಿಂತೆಗೆದುಕೊಂಡು ಇದಕ್ಕೆ ಹೊಣೆಗಾರರಾದ ಅಧಿಕಾರಿಗಳ ವಿರುದ್ಧ ಕ್ರಮ ವಹಿಸುವಂತೆ ಮಾಡಬೇಕು ಎಂದು ಪ್ರಧಾನಿಗಳನ್ನು ವಿನಂತಿಸಿಕೊಂಡಿದ್ದಾರೆ.

ಮಾನ್ಯ ಪ್ರಧಾನಿಗಳು ಈ ವಿನಂತಿಯನ್ನು ಪರಿಶೀಲಿಸಿ ಕೋಟ್ಯಂತರ ಬುಡಕಟ್ಟುಗಳು ಮತ್ತು ಅರಣ್ಯವಾಸಿಗಳ ಹಕ್ಕುಗಳ ಮೇಲೆ ದಾಳಿಯನ್ನು ನಿಲ್ಲಿಸುತ್ತಾರೆಯೇ?



ಪ್ರಾಮಾಣಿಕತೆಯ ಯುಗ" ಆರಂಭವಾಗಿದೆ

ಹೀಗೆಂದು ಉತ್ತರಪ್ರದೇಶದಲ್ಲಿ ತಮ್ಮ ಪಕ್ಷದ ಭಾರೀ ವಿಜಯದ ನಂತರ ಪ್ರಧಾನಿಗಳು ಹೇಳಿದ್ದಾರೆ. ಅದಕ್ಕೆ ಈ ವಾರದ ಸ್ಯಾಂಪಲ್‌ಗಳು:

ರಾಮ ಮಂದಿರ ಕಟ್ಟಲು ನೇಣು, ತಲೆ ಕಡಿತ

ಬಾಬ್ರಿ ಮಸೀದಿ ಧ್ವಂಸ ಕೇಸಿನಲ್ಲಿ ಆರೋಪಿಯಾಗಿದ್ದ ಕೇಂದ್ರ ಮಂತ್ರಿಗಳು ಅದಕ್ಕಾಗಿ ಅಗತ್ಯವಾದರೆ ನೇಣು ಹಾಕಿಕೊಳ್ಳಲೂ ಸಿದ್ಧ ಎಂದಿದ್ದಾರೆ.

ತೆಲಂಗಾಣದ ಒಬ್ಬ ಬಿಜೆಪಿ ಶಾಸಕರು ಬಾಬ್ರಿ ಮಸೀದಿ ಇದ್ದ ಸ್ಥಳದಲ್ಲೇ ರಾಮಮಂದಿರ ಕಟ್ಟುವುದನ್ನು ವಿರೋಧಿಸುವವರ ತಲೆ ಕಡಿಯುವುದಾಗಿ ಬೆದರಿಸಿದ್ದಾರೆ.

ರಾಮನವಮಿಯಂದು ನಮಾಜ್ ಕರೆ ಇಲ್ಲ ಎಂಬ ಫರ್ಮಾನು

ಝಾರ್ಖಂಡ್‌ನ ಕೊಡರ್ಮ ಜಿಲ್ಲೆಯ ಹಳ್ಳಿಯೊಂದರಲ್ಲಿ ರಾಮನವಮಿಯ ದಿನ ಸಂಜೆ ನಮಾಝ್‌ಗೆ ಇಝಾನ್ (ಕರೆ) ಇರಬಾರದು ಎಂದು ಅಲ್ಲಿಯ ಹಿಂದುತ್ವವಾದಿ ಸಂಘಟನೆಯ ಆದೇಶವನ್ನು ಪಾಲಿಸಲಿಲ್ಲ ಎಂದು ಗುಂಪೊಂದು ಮಸೀದಿಗೆ ನುಗ್ಗಿ ಪ್ರಾರ್ಥನೆಯಲ್ಲಿ ತೊಡಗಿದ್ದ ಐವರನ್ನು ಥಳಿಸಿದೆ. ಮೌಲ್ವಿ ಕೂಡ ತೀವ್ರವಾಗಿ ಗಾಯಗೊಂಡಿದ್ದಾರೆ. ಈ ಸಂಬಂಧವಾಗಿ ಕೊನೆಗೂ ಮೂರು ಎಫ್‌ಐಆರ್‌ಗಳನ್ನು ಹಾಕಲಾಗಿದೆಯಂತೆ. ಇವುಗಳಲ್ಲಿ ಒಂದು ಥಳಿಸಿಕೊಂಡವರ ಮೇಲೆ. ಇದೀಗ ಪ್ರಾಮಾಣಿಕತೆಯ ದಿನಗಳಲ್ಲಿ ಸಾಮಾನ್ಯವಾಗುತ್ತಿರುವ ಸಂಗತಿ.

ಪ್ರಶ್ನಿಸುವ ಮಹಿಳೆಯರಿಗೆ ಅತ್ಯಾಚಾರ, ಅಸಿಡ್ ದಾಳಿ ಬೆದರಿಕೆ

ಈಶಾನ್ಯ ಭಾರತದಲ್ಲಿ ಗೋಮಾಂಸ ನಿಷೇಧ ಇರುವುದಿಲ್ಲ ಎಂದು ಆ ಪ್ರದೇಶದ ಬಿಜೆಪಿ ಮುಖಂಡರ 'ಆಶ್ವಾಸನೆ'ಯ ನಂತರ ಅಸ್ಸಾಂನ ಜೊರ್ಹಾಟ್‌ನಲ್ಲಿ ಗೋಮಾಂಸ ಹೊಂದಿದ್ದಾರೆಂದು ಬಂಧಿಸಿದ್ದನ್ನು ಅಲ್ಲಿನ ಮಾನವ ಹಕ್ಕುಗಳ ಹೋರಾಟಗಾರ್ತಿ ಬಂದಿತಾ ಆಚಾರ್ಯ ಪ್ರಶ್ನಿಸಿದ್ದಕ್ಕಾಗಿ ಆಕೆಗೆ ಭಜರಂಗ ದಳದವರು ಅಸಿಡ್‌ದಾಳಿ, ಅತ್ಯಾಚಾರ ಮತ್ತು ಕೊಲೆಯ ಬೆದರಿಕೆಗಳನ್ನು ಹಾಕುತ್ತಿದ್ದಾರೆ ಎಂದು ವರದಿಯಾಗಿದೆ.

ಇದಕ್ಕೆ ಮೊದಲು ಗುಜರಾತ್ ಫೈಲ್ಸ್ ಎಂಬ ಪುಸ್ತಕ ಬರೆದಿರುವ ಪತ್ರಕರ್ತೆ ರಾಣಾ ಅಯ್ಯೂಬ್‌ಗೆ ಫೇಸ್‌ಬುಕ್‌ನಲ್ಲಿ ಇಂತಹುದೇ ಲೈಂಗಿಕ ದೂಷಣೆಗಳನ್ನು ಮಾಡಿದ ವ್ಯಕ್ತಿಯನ್ನು ಬಯಲಿಗೆಳೆಯುವಲ್ಲಿ ಈಕೆ ಈಗ ಯಶಸ್ವಿಯಾಗಿದ್ದಾಳೆ– ಆದರೆ ಮಹಿಳೆಯರನ್ನು ದೇವಿ ಎನ್ನುವ ಭಾರತದಲ್ಲಿ ಅಲ್ಲ, ಕೊಲ್ಲಿದೇಶ ಯುಎಇ ಯಲ್ಲಿ. ಈ ವ್ಯಕ್ತಿ ಆ ದೇಶದಲ್ಲಿ ಕೆಲಸ ಮಾಡುತ್ತಿದ್ದಾನೆ. ಯುಎಇ ಆತನಿಗೆ ನೀಡಿರುವ ವೀಸಾವನ್ನು ಈ ಕಾರಣಕ್ಕಾಗಿ ರದ್ದು ಮಾಡಿದೆ, ಆದ್ದರಿಂದ ಆತ ಈಗ ಕೆಲಸ ಕಳಕೊಂಡಿದ್ದಾನೆ.

ಖಾಸಗಿ ಸ್ನಾತಕೋತ್ತರ ಮೆಡಿಕಲ್‌ನಲ್ಲಿ ಮೀಸಲಾತಿ ಬಂದ್

ಉತ್ತರಪ್ರದೇಶದಲ್ಲಿ ಖಾಸಗಿ ಮೆಡಿಕಲ್ ಕಾಲೇಜುಗಳಲ್ಲಿ ಸ್ನಾತಕೋತ್ತರ ಕೋರ್ಸ್‌ಗಳಿಗೆ ಇದ್ದ ಎಸ್‌ಸಿ/ಎಸ್‌ಟಿ ಮತ್ತು ಒಬಿಸಿ ಕೋಟಾಗಳನ್ನು ರದ್ದು ಮಾಡಲು ಯೋಗಿ ಸರಕಾರ ನಿರ್ಧರಿಸಿದೆ ಎಂದು ವರದಿಯಾಗಿದೆ. 2006ರಲ್ಲಿ ಎಸ್‌ಪಿ ಸರಕಾರ ಇದನ್ನು ಆರಂಭಿಸಿತ್ತು.

ಆರೆಸ್ಸೆಸ್ ಮುಖ್ಯಸ್ಥರು ಮೀಸಲಾತಿಯ ವಿರುದ್ಧ ಒಂದಕ್ಕಿಂದ ಹೆಚ್ಚು ಬಾರಿ ಅಭಿಪ್ರಾಯ ವ್ಯಕ್ತಪಡಿಸಿದ್ದರು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ಪ್ರಾಮಾಣಿಕತೆ ಎಂದರೆ ಇದೇ ಇರಬಹುಲ್ಲವೇ?

ತಮಿಳುನಾಡಿನ ವಿಧಾನಸಭೆಯಲ್ಲಿ ದಿವಂಗತ ಜಯಲಲಿತಾ ರವರು ಪ್ರತಿನಿಧಿಸಿದ್ದ ಚೆನ್ನೈಯ ಆರ್.ಕೆ.ನಗರ ಉಪಚುನಾವಣೆಯಲ್ಲಿ ಆಳುವ ಪಕ್ಷ ನೋಟು ಹಂಚಿದ್ದನ್ನು ಗಮನಿಸಿದ ಚುನಾವಣಾ ಆಯೋಗ ಚುನಾವಣೆಯನ್ನು ರದ್ದು ಮಾಡಿದೆ.

–ಸುದ್ದಿ



ವ್ಯಂಗ್ಯಚಿತ್ರ: ಇ.ಪಿ.ಉನ್ನಿ, ಇಂಡಿಯನ್ ಎಕ್ಸ್‌ಪ್ರೆಸ್

ಮೇಕ್ ಇನ್ ಇಂಡಿಯ' ಭಾರತದ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸಲಿಕ್ಕೋ, ಧ್ವಂಸ ಮಾಡಲಿಕ್ಕೋ

ಭಾರತ ಉಕ್ಕು ಪ್ರಾಧಿಕಾರ(ಸೆಯಿಲ್)ದ ಅಡಿಯಲ್ಲಿರುವ ಮೂರು ಸ್ಥಾವರಗಳನ್ನು ಖಾಸಗಿಯವರಿಗೆ ಮಾರುವ ಸರಕಾರದ ನಿರ್ಧಾರವನ್ನು ಪ್ರತಿಭಟಿಸಿ ಈ ಮೂರೂ ಘಟಕಗಳ ಸುಮಾರು 10 ಸಾವಿರ ಕಾರ್ಮಿಕರು ಎಪ್ರಿಲ್ 11 ರಂದು ಒಂದು ದಿನದ ಮುಷ್ಕರ ನಡೆಸಿದರು.

ಮೇಕ್ ಇನ್ ಇಂಡಿಯ' ಘೋಷಣೆ ಭಾರತದ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸಲಿಕ್ಕೋ ಅಥವ ಧ್ವಂಸ ಮಾಡಲಿಕ್ಕೋ ಎಂಬ ಸಂದೇಹ ಈ ಕಾರ್ಮಿಕರಿಗೆ. ನಮ್ಮ ರಾಜ್ಯದ ಭದ್ರಾವತಿಯ ವಿಶ್ವೇಶ್ವರಯ್ಯ ಉಕ್ಕು ಸ್ಥಾವರ, ತಮಿಳುನಾಡಿನ ಸೇಲಂ ಉಕ್ಕು ಸ್ಥಾವರ ಮತ್ತು ಪಶ್ಚಿಮ ಬಂಗಾಲದ ದುರ್ಗಾಪುರದ ಮಿಶ್ರ ಉಕ್ಕು ಸ್ಥಾವರ ಇವು ಮೂರು ವಿಶಿಷ್ಟ ಉಕ್ಕು ತಯಾರಿಸುವ ಘಟಕಗಳು. ಇದಕ್ಕೆ ಸಾಟಿಯಾದ ಸ್ಥಾವರಗಳು ಖಾಸಗಿ ವಲಯದಲ್ಲಿ ಒಂದೂ ಇಲ್ಲ. ಇಂತಹವನ್ನೂ ಕೂಡ ಮಾರಾಟ ಮಾಡುತ್ತಿದ್ದಾರೆ ಎಂದರೆ ಇಂತಹ ಸಂದೇಹ ಸಹಜವೇ ತಾನೇ?

ಈ ಮೂರು ಘಟಕಗಳಲ್ಲಿರುವ ಎಲ್ಲ ಯೂನಿಯನ್‌ಗಳು ಈ ಮುಷ್ಕರಕ್ಕೆ ಕರೆ ನೀಡಿದ್ದವು. ಇದರ ಹಿಂದಿನ ದಿನ ಸಂಸತ್ತಿನಲ್ಲಿ ಮಾತನಾಡುತ್ತ ರಾಜ್ಯಸಭಾ ಸದಸ್ಯರೂ ಆಗಿರುವ ಸಿಐಟಿಯು ಪ್ರಧಾನ ಕಾರ್ಯದರ್ಶಿ ತಪನ್‌ಸೇನ್ ಸಮಸ್ತ ರಾಷ್ಟ್ರೀಯ ಉತ್ಪಾದನಾ ಸಾಮರ್ಥ್ಯವನ್ನು ಖಾಸಗಿಯವರ ಕೈಗಳಿಗೆ ಕೊಡುವ ಅಪಾಯಕಾರಿ ಪ್ರಕ್ರಿಯೆಗೆ ಕಾರ್ಮಿಕರು ಪ್ರತಿಭಟನೆ ವ್ಯಕ್ತ ಪಡಿಸುತ್ತಿದ್ದಾರೆ ಎಂದು ಹೇಳಿದರು.

ಉತ್ತರ ಪ್ರದೇಶದ ಅಲಹಾಬಾದ್ ಹೈಕೋರ್ಟಿನ ಒಂದೂವರೆ ಶತಮಾನೋತ್ತವದ ಸಮಾರಂಭದಲ್ಲಿ ಮಾತಾಡುತ್ತ ನ್ಯಾಯಾಲಯಗಳಲ್ಲಿ ಮೊಕದ್ದಮೆಗಳ ರಾಶಿಯನ್ನು ಇಳಿಸುವಲ್ಲಿ ಸರಕಾರ ನೆರವಾಗುತ್ತದೆ ಎಂದು ಪ್ರಧಾನ ಮಂತ್ರಿಗಳು ಹೇಳಿದರು.–ಸುದ್ದಿ




ವ್ಯಂಗ್ಯಚಿತ್ರ: ಗೋಕುಲ್, ಡೆಕ್ಕನ್ ಕ್ರಾನಿಕಲ್

ಮೋಟಾರುವಾಹನ ತಿದ್ದುಪಡಿ ಮಸೂದೆ: ರಾಜ್ಯಸಭೆಯಲ್ಲಿ ವಿರೋಧ

ಸಾರಿಗೆ ಕಾರ್ಮಿಕರು ಒಂದು ಕರಾಳ ಮಸೂದೆ ಎಂದು ವಿರೋಧಿಸುತ್ತಿರುವ ಮೋಟಾರು ವಾಹನ ಕಾಯ್ದೆ ತಿದ್ದುಪಡಿ ಮಸೂದೆಯನ್ನು ಲೋಕಸಭೆಯಲ್ಲಿ ಸಿಪಿಐ(ಎಂ) ಮತ್ತು ಇತರ ಪ್ರತಿಪಕ್ಷಗಳ ಆಕ್ಷೇಪಗಳನ್ನೂ ಬದಿಗೊತ್ತಿ ತನ್ನ ಬಹುಮತವನ್ನು ಉಪಯೋಗಿಸಿಕೊಂಡು ಪಾಸು ಮಾಡಿಕೊಂಡ ಸರಕಾರ ಅದನ್ನು ರಾಜ್ಯಸಭೆಯಲ್ಲೂ ಚರ್ಚೆಯಿಲ್ಲದೆ ಪಾಸು ಮಾಡಿಸಿಕೊಳ್ಳಲು ಎಪ್ರಿಲ್ 12ರಂದು ಪ್ರಯತ್ನಿಸಿತು. ಆದರೆ ಸೀತಾರಾಮ್ ಯೆಚುರಿ ಇದರ ಮೇಲೆ ವಿವರವಾದ ಚರ್ಚೆ ನಡೆಯಬೇಕು ಎಂದು ಆಗ್ರಹಿಸಿದರು. ಸಾರಿಗೆ ಮಂತ್ರಿಗಳು ಎಪ್ರಿಲ್12ರಿಂದ ಸದನ ಅನಿರ್ದಿಷ್ಟ ಸಮಯದ ವರೆಗೆ ಮುಂದೂಡಲ್ಪಡುತ್ತದೆ. ಆದ್ದರಿಂದ ಅದನ್ನು ಪಾಸು ಮಾಡಬೇಕಲೆಂದು ಒತ್ತಾಯ ಪಡಿಸಿದರು. ಆದರೆ ಅವರಿಗೆ ಆ ಮಸೂದೆಯನ್ನು ಮಂಡಿಸಲು ಬಿಡಲಿಲ್ಲ. ರಾಜ್ಯಸಭೆಯ ಅಧ್ಯಕ್ಷರೂ ಈ ಬಗ್ಗೆ ವಿವರವಾದ ಚರ್ಚೆ ನಡೆಯಬೇಕು ಎಂದರು. ಸಾರಿಗೆ ಮಂತ್ರಿಗಳಿಗೆ ಅದನ್ನು ಪಾಸು ಮಾಡಿಸಿಕೊಳ್ಳಲು ಆಗಲಿಲ್ಲ.

ಕೋಮುವಾದಕ್ಕೆ ಎದುರಾಗಿ ಕಾರ್ಮಿಕ ವರ್ಗದ ಹೋರಾಟ ವೈಯಕ್ತಿಕತೆಯನ್ನು ಮೀರಿ ನಿಲ್ಲುವ ವರ್ಗಪ್ರಜ್ಞೆ

ಪ್ರೊ.ಪ್ರಭಾತ್ ಪಟ್ನಾಯಕ್



ಕೆ.ಎಂ.ನಾಗರಾಜ್

ಸ್ವಾತಂತ್ರ್ಯ ಪೂರ್ವ ಮುಂಬೈ ಪ್ರದೇಶದಲ್ಲಿ, ಆಗ ಬಹಳ ಶಕ್ತಿಶಾಲಿಯಾಗಿದ್ದ ಕಮ್ಯೂನಿಸ್ಟ್ ನಾಯಕತ್ವದ ಯೂನಿಯನ್‌ಗಳ ಕರೆಯ ಮೇರೆಗೆ ಆಗಾಗ್ಗೆ ನಡೆಯುತ್ತಿದ್ದ ಬಹಳ ಪರಿಣಾಮಕಾರಿ ಮುಷ್ಕರಗಳಲ್ಲಿ, ಹಿಂದೂ ಮತ್ತು ಮುಸ್ಲಿಂ ಕಾರ್ಮಿಕರು ಐಕಮತ್ಯದಿಂದ ಭಾಗವಹಿಸುತ್ತಿದ್ದರು. ವಸಾಹತುಶಾಹಿ ಸನ್ನಿವೇಶದಲ್ಲಿ, ಈ ಮುಷ್ಕರಗಳು ಯಾವಾಗಲೂ ಯಶಸ್ವಿಯಾಗುತ್ತಿರಲಿಲ್ಲ ಮತ್ತು ಆ ಮುಷ್ಕರಗಳ ಬೆನ್ನಲ್ಲೇ ಕೋಮು ಗಲಭೆಗಳೂ ನಡೆಯುತ್ತಿದ್ದುದು ಆಶ್ಚರ್ಯವೇನಲ್ಲ ಎಂದು ಕಾಮ್ರೇಡ್ ಬಿ.ಟಿ ರಣದಿವೆ ನೆನಪಿಸುತ್ತಿದ್ದರು.

ಐಕ್ಯತೆಯನ್ನು ಹಿಂಬಾಲಿಸುತ್ತಿದ್ದ ಘೋರ ಅನೈಕ್ಯತೆ ಕಾರ್ಮಿಕರನ್ನು ಕೋಮು ಗಲಭೆಗಳತ್ತ ಕೊಂಡೊಯ್ಯುತ್ತಿತ್ತು. ಇಂತಹ ಐಕ್ಯತೆಯ ಮತ್ತು ಅನೈಕ್ಯತೆಯ ಘಟನೆಗಳು ಮರುಕಳಿಸುತ್ತಿದ್ದವು. ಈ ಘಟನೆಗಳು, ಅವರು ವ್ಯಕ್ತಪಡಿಸುತ್ತಿದ್ದ ಪ್ರಜ್ಞೆಯ ಬೇರೆ ಬೇರೆ ರೂಪಗಳ ನಡುವಿನ ಸೆಣಸಾಟವೂ ಆಗಿದ್ದವು. ಧರ್ಮ, ಜಾತಿ, ಭಾಷೆ ಮತ್ತಿತರ ಭೇದಭಾವಗಳನ್ನು ದಾಟಿ ಒಟ್ಟುಗೂಡಿ ಎಲ್ಲರ ವಿಮೋಚನೆಗಾಗಿ ಹೋರಾಡುವಂತೆ ಆಗ ತಾನೇ ಚಿಗುರೊಡೆಯುತ್ತಿದ್ದ ವರ್ಗ ಪ್ರಜ್ಞೆ ಅವರನ್ನು ಪ್ರೇರೇಪಿಸುತ್ತಿತ್ತು. ಇನ್ನೊಂದೆಡೆ, ಪ್ರತಿಗಾಮಿ ಮತ್ತು ಪಟ್ಟಭದ್ರ ಹಿತಾಸಕ್ತಿಗಳು ಕೋಮುವಾದಿ ಪ್ರಜ್ಞೆಯನ್ನು ಪಟ್ಟು ಹಿಡಿದು ಬೆಳೆಸುತ್ತಿದ್ದವು. ಇದು, ಯಾರಿಗೂ ವಿಮೋಚನೆ ಇಲ್ಲದ, ಮತ್ತು ವಿಮೋಚನೆಗೆ ತದ್ವಿರುದ್ಧವಾಗಿ ಎಲ್ಲರನ್ನೂ ಅಸ್ವಾತಂತ್ರ್ಯದ ನೊಗಕ್ಕೆ ಬಿಗಿಯಾಗಿ ಕಟ್ಟಿಹಾಕುವಂತಹ ಮತ್ತು ಕಾರ್ಮಿಕರನ್ನು ದಿಕ್ಕು ತಪ್ಪಿಸುವಂತಹ ಒಂದು ಹುಸಿ ಪ್ರಜ್ಞೆ.

ಮತ್ತೆ–ಮತ್ತೆ ಸಂಭವಿಸುವ ಇಂತಹ ಘಟನೆಗಳು ಒಂದು ಅಂಶವನ್ನು ಒತ್ತಿ ಹೇಳುತ್ತವೆ. ಅದೇನೆಂದರೆ, **ಜನರು ಕೇವಲ ವ್ಯಕ್ತಿಗಳಾಗಿ ಬದುಕುವುದಿಲ್ಲ. ವೈಯಕ್ತಿಕತೆಯನ್ನು ಮೀರಿದ ಒಂದು ಪ್ರಜ್ಞೆ ಜನಮನದಲ್ಲಿ ನೆಲೆಸಿರುತ್ತದೆ. ಅದು, ಅವರ ಒಂದು ರೀತಿಯ ಸಮೂಹ ಜೀವನಕ್ಕೆ ಪ್ರೇರೇಪಣೆಯೂ ಮತ್ತು ಅವರ ಅಸ್ತಿತ್ವದ ಅನಿವಾರ್ಯ ಅಂಶವೂ ಆಗಿದೆ. ಈ ಅಂಶವನ್ನು ಉದಾರವಾದಿ ವಿಚಾರ ಪರಂಪರೆ ಉದ್ದೇಶಪೂರ್ವಕವಾಗಿ ನಿರ್ಲಕ್ಷಿಸಿದೆ. ಈ ಅಂಶವನ್ನು ಒಪ್ಪಿಕೊಂಡ ಕೂಡಲೇ ಹುಸಿ ಪ್ರಜ್ಞೆಯಿಂದ ಹೊರಬರಬೇಕಾಗುತ್ತದೆ ಮತ್ತು ಪಂಗಡಗಳ ನಡುವೆ ಒಳ ಜಗಳ ಹುಟ್ಟಿಹಾಕಿ, ಸಮಾಜದಲ್ಲಿ ಒಡಕುಂಟುಮಾಡುವ ಪ್ರತಿಗಾಮಿ ಮತ್ತು ಪಟ್ಟಭದ್ರ ಹಿತಾಸಕ್ತಿಗಳು ಬೆಳೆಸುವ ಕೋಮುವಾದಿ ಪ್ರಜ್ಞೆಯನ್ನು ಮೆಟ್ಟಿ ನಿಲ್ಲಬೇಕಾಗುತ್ತದೆ. ವೈಯಕ್ತಿಕತೆಯ ಮೂಲಕ ಈ ಉದ್ದೇಶ ಈಡೇರುವುದಿಲ್ಲ, ಬದಲಿಗೆ, ವೈಯಕ್ತಿಕತೆಯನ್ನು ಮೀರಿದ ಪ್ರಜ್ಞೆಯಲ್ಲಿ ವ್ಯಕ್ತಿಯನ್ನು ಕಾಣುವ ಪರ್ಯಾಯ ಪ್ರಜ್ಞೆಯ ಮೂಲಕ ಅದು ಸಾಧ್ಯವಾಗುತ್ತದೆ.**

ಪರ್ಯಾಯ ಪ್ರಜ್ಞೆ ಎಂದರೆ ಬೇರೇನೂ ಅಲ್ಲ, ವರ್ಗ ಪ್ರಜ್ಞೆಯೇ ಪರ್ಯಾಯ ಪ್ರಜ್ಞೆ. ಒಂದು ಗುಂಪನ್ನು ಇನ್ನೊಂದು ಗುಂಪಿನ ವಿರುದ್ಧ ಎತ್ತಿ ಕಟ್ಟುವ ಕೆಲಸ ವರ್ಗಪ್ರಜ್ಞೆಯಲ್ಲ. ಸಮಾಜದ ಸಂರಚನೆಯಲ್ಲಿ ಅಂತರ್ಗತವಾಗಿರುವ ಪ್ರವೃತ್ತಿಗಳ ಬಗ್ಗೆ ಅರಿವು ಹೆಚ್ಚಿಸಿಕೊಳ್ಳುವುದೇ ವರ್ಗ ಪ್ರಜ್ಞೆ. ಅಂದರೆ, ಅದು ಸಮಾಜದ ಸಂರಚನೆಯ ವಿರುದ್ಧವಾಗಿ ಇಡೀ ಜನತೆಯನ್ನು ಹೋರಾಟಕ್ಕಿಳಿಸುವ ಕೆಲಸ. ಜಾತಿ, ಮತ, ಭಾಷೆ ಮುಂತಾದ ಭೇದ ಭಾವಗಳನ್ನು ಮೀರಿ, ಜನತೆಯ ಲೌಕಿಕ ಪರಿಸ್ಥಿತಿ ಉತ್ತಮಗೊಳಿಸುವ ಸಲುವಾಗಿ ನಡೆಯುವ ಹೋರಾಟಗಳಲ್ಲಿ ತೊಡಗಿಕೊಳ್ಳುವ ಪ್ರಕ್ರಿಯೆಯಲ್ಲಿ ವರ್ಗ ಪ್ರಜ್ಞೆ ಜಾಗೃತಗೊಳ್ಳುತ್ತದೆ. ಇದನ್ನೇ ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಜನರ ದೈನಂದಿನ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ಸಲುವಾಗಿ ನಡೆಯುವ, ಜಾತಿ, ಮತ, ಮುಂತಾದ ಭಿನ್ನತೆಗಳನ್ನು ಲೆಕ್ಕಿಸದೆ, ದುಡಿಯುವ ಜನತೆಯನ್ನೊಳಗೊಂಡ ಹೋರಾಟಗಳು, ಜಾತ್ಯಾತೀತತೆ ಮತ್ತು ಪ್ರಜಾಪ್ರಭುತ್ವಗಳಿಗೆ ಅವಶ್ಯವಾದ ಸಾಮಾಜಿಕ ಪೂರ್ವಾಪೇಕ್ಷೆಯಾಗುತ್ತವೆ. ಈ ಕಾರಣದಿಂದ, ಇಂತಹ ಹೋರಾಟಗಳನ್ನು ಆರಂಭಿಸುವ ಟ್ರೇಡ್ ಯೂನಿಯನ್‌ಗಳು, ಜಾತ್ಯಾತೀತ ಪ್ರಜಾಪ್ರಭುತ್ವ ಸಮಾಜ ವ್ಯವಸ್ಥೆ ಬದುಕುಳಿಯಲು ಅವಶ್ಯವಾದ ಪೂರ್ವಾಪೇಕ್ಷೆಯಾಗುತ್ತವೆ.

ಈ ಪ್ರತಿಪಾದನೆ ಬಹಳ ಸ್ಪಷ್ಟವಾಗಿದೆ. ಆದರೆ, ಪ್ರಜಾಪ್ರಭುತ್ವವನ್ನು ಎತ್ತಿಹಿಡಿಯುವುದಾಗಿ ತೋರಿಸಿಕೊಳ್ಳುವ ಬಂಡವಾಳಶಾಹಿ ಸಿದ್ಧಾಂತವು ಈ ಪ್ರತಿಪಾದನೆಯನ್ನು ಅಲ್ಲಗಳೆಯುವುದು ಆಶ್ಚರ್ಯಕರವಾಗಿದೆ. ತನ್ನ ಉಗಮದ ಕಾಲದಿಂದಲೂ ಟ್ರೇಡ್ ಯೂನಿಯನ್‌ಗಳ ರಚನೆಯನ್ನೇ ವಿರೋಧಿಸಿದ ಬಂಡವಾಳಶಾಹಿಯು ವೈಯಕ್ತಿಕತೆಯನ್ನು ದೇವತ್ವಕ್ಕೇರಿಸಿತು. ಬಂಡವಾಳಶಾಹಿಯು ಈ ಆಷಾಢಭೂತಿತನವನ್ನು ಆದಿಮ ಉದಾರವಾದಿ ಚಿಂತಕ ಆ್ಯಡಂ ಸ್ಮಿತ್ ಬಲವಾಗಿ ಖಂಡಿಸಿದ್ದರು. ಏಕೆಂದರೆ, ಎಲ್ಲ ಮಾಲಿಕರೂ ವ್ಯಕ್ತಿಗಳಾಗಿ ಅಲ್ಲದೆ, ಮೋಸದ ಒಳ ಸಂಚಿನ ಮೂಲಕ ಸಾಮೂಹಿಕತೆಯನ್ನು (ಕಾರ್ಮಿಕ ಸಂಘಟನೆಗಳನ್ನು) ವಿರೋಧಿಸುತ್ತಿದ್ದರು. ನಂತರ, ಉದಾರವಾದಿ ಬರಹಗಾರರು, ಮಾರ್ಕ್ಸ್ ಯಾವುದನ್ನು vulgar economy ಎಂದು ಕರೆದಿದ್ದರೋ ಅದರಿಂದ ಪ್ರೇರಣೆ ಪಡೆದು, ವ್ಯಕ್ತಿಯನ್ನು ದೇವತ್ವಕ್ಕೇರಿಸಿದರು; ವ್ಯವಸ್ಥೆಯ ಸ್ವರೂಪದ ಅಂಶವೆಂದು ಭಾವಿಸದಿದ್ದರೂ ಅದರ ಅಪ್ರತಿಮ ಸದ್ಗುಣದ ಪ್ರತೀಕವಾಗಿ. ಕಾರ್ಮಿಕರ ಸಂಯೋಜನೆಗಳನ್ನು ಮುರಿಯುತ್ತಿದ್ದರು. ಕಾರ್ಮಿಕರು ಒಟ್ಟುಗೂಡುವ ಉತ್ಸಾಹವನ್ನು ಮಾಲಿಕರು ಕುಗ್ಗಿಸುತ್ತಿದ್ದರು. ಕಾರ್ಮಿಕ ಸಂಘಟನೆಗಳು ಸಾಮಾಜಿಕವಾಗಿ ಹಾನಿಕಾರಕವೆಂಬುದು ಅವರ ಅಭಿಪ್ರಾಯವಾಗಿತ್ತು.

ಈ ಅಭಿಪ್ರಾಯವೇ ಅಂತಿಮ ಸತ್ಯ ಎಂದು ಬಗೆಯುವ ನವ ಉದಾರವಾದಿ ಬಂಡವಾಳಗಾರರು ವರ್ತಮಾನದಲ್ಲಿ 'ಶ್ರಮ ಮಾರುಕಟ್ಟೆ ಸುಧಾರಣೆ'ಗಳನ್ನು ತರುವುದು ಸಾಮಾಜಿಕವಾಗಿ ಅಪೇಕ್ಷಣೀಯವೆಂದು ಒತ್ತಾಯಿಸುತ್ತಾರೆ. ಕಾರ್ಮಿಕ ಕಾನೂನು ಜಾರಿ ಮಾಡದಿರುವುದು ಮತ್ತು ಕಾರ್ಮಿಕರ ಹಕ್ಕು ಮತ್ತು ಸವಲತ್ತುಗಳನ್ನು ಮೊಟಕುಗೊಳಿಸುವ ಕಾನೂನು ತಿದ್ದುಪಡಿಗಳಿಗೆ 'ಶ್ರಮ ಮಾರುಕಟ್ಟೆ ಸುಧಾರಣೆ' ಎಂಬ ನಯವಾದ ಹೆಸರಿದೆ. ಕಾನೂನಿನ ತೊಡಕಿಲ್ಲದೆ, ತಮ್ಮ ಇಚ್ಛಾನುಸಾರವಾಗಿ ಕಾರ್ಮಿಕರನ್ನು ಕೆಲಸದಿಂದ ಕಿತ್ತೊಗೆಯುವ ಸ್ವಾತಂತ್ರ್ಯವನ್ನು ಮಾಲಿಕರಿಗೆ ಕೊಡುವ ಈ ಸುಧಾರಣೆಗಳು ಕಾರ್ಮಿಕ ಸಂಘಟನೆಗಳ ಚಟುವಟಿಕೆಗಳ ಮೇಲೆ ನಡೆಯುವ ದೊಡ್ಡ ಹಲ್ಲೆಯಾಗುತ್ತವೆ. ಏಕೆಂದರೆ, ಯೂನಿಯನ್‌ಗೆ ಸೇರಿದ ಕೂಡಲೇ ಕಾರ್ಮಿಕ ವಜಾ ಆಗುತ್ತಾನೆ.

ಉದಾರವಾದಿಗಳ ಇಂದಿನ ವಿಶ್ವ–ದೃಷ್ಟಿಯು ವಿರೋಧಾಭಾಸಗಳಿಂದ ನರಳುತ್ತಿದೆ. ಉದಾರವಾದಿಗಳು ಒಂದು ಕಡೆ, ಕೋಮುವಾದ, ಲಿಂಗ, ಜಾತಿ, ಮತ ಮತ್ತಿತರ ಶ್ರೇಷ್ಠತೆಯ ಭಾವನೆಗಳನ್ನು ಧಿಕ್ಕರಿಸುವುದಾಗಿ ಹೇಳುತ್ತಾರೆ. ಅದು ಸರಿಯೇ. ಅವರ ಮಾತನ್ನು ಸದ್ಯಕ್ಕೆ ಒಪ್ಪಿಕೊಳ್ಳೋಣ. **ಇನ್ನೊಂದೆಡೆ ಉದಾರವಾದಿಗಳು ಟ್ರೇಡ್ ಯೂನಿಯನ್‌ವಾದವನ್ನೇ ವಿರೋಧಿಸುವುದರಿಂದಾಗಿ, ಜನರು ವರ್ಗ ದಬ್ಬಾಳಿಕೆಯನ್ನು ವಿರೋಧಿಸುವ ಕ್ರಿಯೆ ಅಸಾಧ್ಯವಾಗುವಂತೆ ಮಾಡುವ ಮೂಲಕ ಅವರು ಧಿಕ್ಕರಿಸುವುದಾಗಿ ಹೇಳುವ ಕೋಮುವಾದ, ಮತ್ತಿತರ ಶ್ರೇಷ್ಠತೆಯ ಭಾವನೆಗಳು ಪ್ರಾಬಲ್ಯ ಹೊಂದಲು ಬೇಕಾಗುವ ಅವಕಾಶವನ್ನು ಕಲ್ಪಿಸಿಕೊಟ್ಟಿದ್ದಾರೆ.**

ಆಧುನಿಕ ಬಂಡವಾಳಶಾಹಿಯು ಇಂದಿನ ಪರಿಸ್ಥಿತಿಯಲ್ಲಿ, ನಮ್ಮಂತಹ ಸಮಾಜಗಳಲ್ಲಿ, ದುಡಿಯುವ ಜನತೆ ಹರಿದು ಹಂಚಿ ಹೋಗುವಂತೆ ಮಾಡಲು ಏನು ಬೇಕೋ ಅದೆಲ್ಲವನ್ನೂ ಬಂಡವಾಳಶಾಹಿ ಮಾಡುತ್ತದೆ. ತಮ್ಮ ಆರ್ಥಿಕ ಏಳಿಗೆಗಾಗಿ ದುಡಿಯುವ ಜನತೆ ಹೋರಾಡುವ ಅವಶ್ಯಕತೆ ಇಲ್ಲ ಎಂದು ಉದಾರವಾದಿಗಳು ವಾದಿಸುತ್ತಾರೆ. ಅವರಿಗೆ, ದುಡಿಯುವ ಜನತೆ ಒಗ್ಗೂಡುವುದಿಲ್ಲ ಎಂಬ ವಿಶ್ವಾಸವಿದೆ ಮತ್ತು ಒಗ್ಗೂಡಬಾರದು ಎಂದೂ ಆಶಿಸುತ್ತಾರೆ. ಉದಾರವಾದಿಗಳು ಬಯಸಿದಂತೆ ಕಾರ್ಮಿಕರು ಒಟ್ಟಾಗದಿದ್ದರೆ, ಬಂಡವಾಳಗಾರರಲ್ಲಿ ಹೂಡಿಕೆಮಾಡುವ ವಿಶ್ವಾಸ ಮೂಡುತ್ತದೆ. ಹೆಚ್ಚಿನ ಮಟ್ಟದ ಹೂಡಿಕೆಯಾಗುತ್ತದೆ. ಆರ್ಥಿಕ ಬೆಳವಣಿಗೆ ಉನ್ನತವಾಗುತ್ತದೆ. ಅದರ ಪ್ರಯೋಜನ ಹನಿ ಹನಿಯಾಗಿ ಕೆಳಗಿಳಿಯುತ್ತದೆ. ಹೆಚ್ಚಿನ ತೆರಿಗೆಗಳಿಂದ ಸಂಗ್ರಹ ಅಧಿಕವಾಗುವುತ್ತದೆ. ಸರ್ಕಾರ ಜನಕಲ್ಯಾಣಕ್ಕಾಗಿ ಹೆಚ್ಚು ಹಣ ವಿನಿಯೋಗಿಸುತ್ತದೆಯಂತೆ.

ಎರಡು ಕಾರಣಗಳಿಂದ ಉದಾರವಾದಿಗಳ ಈ ಅಭಿಪ್ರಾಯ ತಪ್ಪಾಗಿದೆ. ಒಂದು ಕಾರಣವು ಬಹಳಷ್ಟು ಚರ್ಚೆಗೆ ಒಳಗಾಗಿದೆ. ಇನ್ನೊಂದರ ಬಗ್ಗೆ ಹರಿಸಿರುವ ಗಮನ ಇಲ್ಲವೇ ಇಲ್ಲ ಎನ್ನುವಷ್ಟು ಕಡಿಮೆ.

ಬಹಳಷ್ಟು ಚರ್ಚೆಗೆ ಒಳಗಾದ ವಿಷಯವು ವಾಸ್ತವವಾಗಿ ತಪ್ಪು. ಏಕೆಂದರೆ, ಬಂಡವಾಳಗಾರರು ಮಾಡುವ ಹೂಡಿಕೆಯು ಮಾರುಕಟ್ಟೆಯ ಬೆಳವಣಿಗೆಗೆ ಅನುಗುಣವಾಗಿರುತ್ತದೆ. ಕಾರ್ಮಿಕರನ್ನು ಹೇಳಿದಂತೆ ಕೇಳುವ ಹಾಗೆ ಮಾಡುವ ಮೂಲಕ ಹೂಡಿಕೆ ಹೆಚ್ಚುವುದಿಲ್ಲ. ಅವರ ಸಂಬಳ ಇಳಿಸಿ ಅವರನ್ನು ಪಳಗಿಸುವುದರಿಂದ ಮಾರುಕಟ್ಟೆಯ ಗಾತ್ರ ಕುಗ್ಗುತ್ತದೆ. ಅದರಿಂದಾಗಿ ಹೂಡಿಕೆ ಇಳಿಯುತ್ತದೆ. ಅದರಿಂದಾಗಿ ಬೆಳವಣಿಗೆಯೂ ಇಳಿಯುತ್ತದೆ. ಜಾನ್ ಮೇನಾರ್ಡ್ ಕೀನ್ಸ್ ಅವರೇ ಈ ಅಂಶವನ್ನು ಒತ್ತಿ ಹೇಳಿದ್ದಾರೆ. ಜೊತೆಗೆ, ಇಂತಹ ಪರಿಸ್ಥಿತಿಯಲ್ಲಿ, ದುಡಿಯುವ ಜನತೆಯ ವಿಘಟನೆ ಮತ್ತು ಪಳಗಿಸುವ ಮೂಲಕ ಆಗಿದ್ದ ಬೆಳವಣಿಗೆಯ ಪ್ರಯೋಜನ, ಅವರನ್ನು ಛಿದ್ರಮಾಡಿದ ಮತ್ತು ಪಳಗಿಸಿದ ಕಾರಣದಿಂದಲೇ ಕೆಳಗಿಳಿಯುವುದಿಲ್ಲ. ಪ್ರಯೋಜನ ತನ್ನಷ್ಟಕ್ಕೆ ತಾನೇ ಕೆಳಗಿಳಿಯುವುದಿಲ್ಲ. ಏಕೆಂದರೆ, ನಿರುದ್ಯೋಗ ಮತ್ತು ಅರೆ ಉದ್ಯೋಗಗಳು ದೊಡ್ಡ ಪ್ರಮಾಣದಲ್ಲಿರುತ್ತವೆ. ಅದರಿಂದಾಗಿ, ಉದ್ಯೋಗಗಳಿಗೆ ಪೈಪೋಟಿ ತೀವ್ರಗೊಳ್ಳುತ್ತದೆ. ಪರಿಣಾಮವಾಗಿ, ಅವರಿಗೆ ಸಿಗುವ ಸಂಬಳ ಬದುಕುಳಿಯುವಷ್ಟು ಮಾತ್ರ ಇರುತ್ತದೆ. ಪ್ರಭುತ್ವ ಮಧ್ಯಪ್ರವೇಶ ಮಾಡುವ ಮೂಲಕವೂ ಬೆಳವಣಿಗೆಯ ಪ್ರಯೋಜನ ಅವರಿಗೆ ಇಳಿಯುವುದಿಲ್ಲ. ಏಕೆಂದರೆ, ಪ್ರಭುತ್ವವು ಹೂಡಿಕೆದಾರರ ವಿಶ್ವಾಸ ಉತ್ತೇಜಿಸಿ ಬೆಳವಣಿಗೆ ಸಾಗುವಂತೆ ಮಾಡುವ ಸಲುವಾಗಿ ಬಂಡವಾಳಗಾರರಿಗೆ ನೀಡುವ ಆರ್ಥಿಕ ನೆರವಿನ ಪ್ರಮಾಣ ಹೆಚ್ಚುತ್ತಾ ಹೋಗುತ್ತದೆ. ಇಷ್ಟೆಲ್ಲಾ ಆಗಿ ಬೆಳವಣಿಗೆ ಸಾಧಿಸಿದರೂ ಮತ್ತು ಅದರಿಂದಾಗಿ ಹೆಚ್ಚಿನ ತೆರಿಗೆ ಸಂಗ್ರಹವಾದರೂ, ದುಡಿಯುವ ಜನತೆಯ ಶ್ರೇಯಸ್ಸಿಗಾಗಿ ಸರ್ಕಾರದ ಖಜಾನೆಯಿಂದ ಮಾಡುವ ಖರ್ಚು ಕಡಿಮೆಯಾಗುತ್ತಾ ಹೋಗುತ್ತದೆ.

ಕಡಿಮೆ ಚರ್ಚೆಗೆ ಒಳಗಾಗಿರುವ ಎರಡನೆಯ ಕಾರಣವೇ ಇಲ್ಲಿ ಮುಖ್ಯವಾಗುತ್ತದೆ. ಅದು ಜನರನ್ನು ಒಟ್ಟಿಗೆ ತರುವ ವಿಷಯಕ್ಕೆ ಸಂಬಂಧಿಸುತ್ತದೆ. ವರ್ಗ ಆಧಾರಿತವಾಗಿ ದುಡಿಯುವ ಜನತೆಯನ್ನು ಒಟ್ಟುಗೂಡಿಸಿ ಹೋರಾಟಕ್ಕೆ ಅಣಿನೆರೆಸುವ ಕೆಲಸ ಆಗುತ್ತಿಲ್ಲ. ಉದಾರವಾದ ಎಣಿಸಿದ ರೀತಿಯಲ್ಲಿ ಸ್ವತಂತ್ರಭಾವದ ವ್ಯಕ್ತೀಕರಣವೂ ಆಗಲಿಲ್ಲ. ಆಗುತ್ತಿರುವುದು ಏನೆಂದರೆ, ವ್ಯಕ್ತಿ–ಅತೀತ ಪ್ರಜ್ಞೆಯ ಗುಂಪುಗಳ ರಚನೆ. ಸಮೂಹ ಜೀವನಕ್ಕೆ ಕಾರಣವಾಗಿರುವ ವ್ಯಕ್ತಿ–ಅತೀತ ಪ್ರಜ್ಞೆಯನ್ನು ಪ್ರತಿಗಾಮಿ ಮತ್ತು ಪಟ್ಟಭದ್ರ ಹಿತಾಸಕ್ತಿಗಳು ತಮ್ಮ ಬೇಳೆ ಬೇಯಿಸಿಕೊಳ್ಳಲು ಉತ್ತೇಜಿಸುತ್ತಿರುವ ವ್ಯಕ್ತಿಯ ಕೋಮುವಾದೀಕರಣವು ಇದಕ್ಕೊಂದು ಮುಖ್ಯವಾದ ನಿದರ್ಶನ. ಇದನ್ನೇ ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, **ಅರ್ಥವ್ಯವಸ್ಥೆಯ ಕ್ಷೇತ್ರದಲ್ಲಿ ದುಡಿಯುವ ಜನತೆಯ ವಿಘಟನೆಯು, ನಮ್ಮ ದೇಶದ ಇಂದಿನ ಪರಿಸ್ಥಿತಿಯಲ್ಲಿ, ಬಹುಸಂಖ್ಯಾತ ಹಿಂದೂ ಕೋಮುವಾದ ಮತ್ತು ಜಾತಿ–ಮತ–ಭಾಷೆ–ಲಿಂಗ ಶ್ರೇಷ್ಠತೆಗಳೊಂದಿಗೆ ಕೈ ಹಿಡಿದು ಸಾಗುತ್ತಿದೆ. ಇದು, ಅಲ್ಪ ಸಂಖ್ಯಾತರ ಪ್ರತಿಕ್ರಿಯೆಗೆ ಪ್ರಚೋದನೆಯಾಗುತ್ತದೆ.**

ನವ–ಉದಾರಿ ಆಳ್ವಿಕೆಯಲ್ಲಿ ದುಡಿಯುವ ಜನರನ್ನು ಹರಿದು ಹಂಚಲಾಗಿರುವ ಅಂಶವನ್ನು ನಿರಾಕರಿಸುವಂತಿಲ್ಲ. ಕೇಂದ್ರ ಕಾರ್ಮಿಕ ಸಂಘಟನೆಗಳ ಕರೆಯ ಮೇರೆಗೆ, ಅಖಿಲ ಬಾರತ ಮಟ್ಟದಲ್ಲಿ ಅನೇಕ ಧೀರೋದಾತ್ತ ಮುಷ್ಕರಗಳ ಮೂಲಕ ಕಾರ್ಮಿಕರ ಬಲ ಪ್ರದರ್ಶನವಾಗಿದೆ, ನಿಜ. ಆದರೆ, ಸಾರ್ವಜನಿಕ ವಲಯವನ್ನು ಬಲಹೀನಗೊಳಿಸುತ್ತಿರುವ ಅಂಶವು ಕಾರ್ಮಿಕರನ್ನು ಸಂಘಟಿಸುವ ಪ್ರಕ್ರಿಯೆಗೆ ತೊಡಕಾಗಿದೆ. ಸಾರ್ವಜನಿಕ ಉದ್ದಿಮೆಗಳನ್ನು ಸಾರಾಸಗಟಾಗಿ ಖಾಸಗಿಯವರಿಗೆ ಮಾರುವುದು ಮಾತ್ರವಲ್ಲದೆ ಅನೇಕ ವಿಧಾನಗಳ ಮೂಲಕ ಸಾರ್ವಜನಿಕ ವಲಯವನ್ನು ಬಲಹೀನಗೊಳಿಸಲಾಗುತ್ತಿದೆ. ಸಾರ್ವಜನಿಕ ಉದ್ದಿಮೆಗಳ ಚಟುವಟಿಕೆಗಳು ಹೊರ ಗುತ್ತಿಗೆಯ ಮೂಲಕ ನಡೆಯುತ್ತಿವೆ. ರೈಲ್ವೇ ಇದಕ್ಕೆ ಉತ್ತಮ ಉದಾಹರಣೆ. ನಿರುದ್ಯೋಗದ ಹೆಚ್ಚಳ, ಅರ್ಥವ್ಯವಸ್ಥೆಯ ಅನೌಪಚಾರೀಕರಣ, ಬೇಕಾದಾಗ ಮಾತ್ರ ಶ್ರಮ ಶಕ್ತಿಯ(casualisation) ಬಳಕೆ, ಈ ಎಲ್ಲವೂ ನಿರುದ್ಯೋಗದ ಹೆಚ್ಚಳದಿಂದ ಒದಗಿಬಂದ ಪರಿಣಾಮಗಳೇ. ಈ ಎಲ್ಲ ಅಂಶಗಳ ಮೇಳೈಕೆಯು ಕಾರ್ಮಿಕರ ಬಲ ಕುಗ್ಗಲು ಕಾರಣವಾಗಿದೆ. ವರ್ಗ ಐಕ್ಯತೆ ಸಾಧಿಸಿದ ಬಲಶಾಲಿ ಕಾರ್ಮಿಕ ವರ್ಗ ಮಾತ್ರ ಕೋಮು ಆಧಾರಿತ ಒಗ್ಗೂಡುವಿಕೆಗೆ ಅಡ್ಡಿಯಾಗಬಲ್ಲದು. 1974ರ ರೈಲ್ವೆ ಮುಷ್ಕರದ ನಂತರ, ಇಂದಿನವರೆಗೂ ಆ ಪ್ರಮಾಣದ ಮುಷ್ಕರ ಆಗಿಲ್ಲ. ಮುಷ್ಕರ ಆಗಿಲ್ಲ ಅಂದರೆ, ದುಡಿಯುವ ಹೆಚ್ಚಿನ ಮಂದಿಗೆ ಜಾಗತೀಕರಣದಿಂದ ಪ್ರಯೋಜನವಾಗಿದೆ ಎಂದಲ್ಲ. ಅವರಿಗೆ ಆಗಿರುವುದು ತೊಂದರೆಯೇ. ಮುಷ್ಕರಗಳು ಆಗದಿರುವ ಕಾರಣವೆಂದರೆ, ನವ–ಉದಾರಿ ಆಳ್ವಿಕೆಯ ರಾಚನಿಕ ಪರಿಣಾಮಗಳು– ಅಂದರೆ ಹಲವು ಹತ್ತಾರು ವಿಧಾನಗಳ ಮೂಲಕ ಕಾರ್ಮಿಕರ ಸಂಘಟಿತ ಬಲ ಕುಂದುವಂತೆ ಮಾಡಿರುವುದು. ಇಷ್ಟೆಲ್ಲಾ ಸಾಲದು ಎಂಬಂತೆ, 'ಶ್ರಮ ಮಾರುಕಟ್ಟೆ ಸುಧಾರಣೆ'ಯ ಹೆಸರಿನಲ್ಲಿ ಕಾರ್ಮಿಕರ ಹಕ್ಕುಗಳ ಮೇಲಿನ ಹಲ್ಲೆಯನ್ನು ಕಾನೂನುಬದ್ಧಗೊಳಿಸಲಾಗುತ್ತಿದೆ. ಟ್ರೇಡ್ ಯೂನಿಯನ್‌ಗಳಿಗೆ ಹಿನ್ನಡೆಯಾಗಿರುವ ಅಂಶವೇ, ಇತೀಚಿನ ದಿನಗಳಲ್ಲಿ, ಕೋಮುವಾದದ ಬೆಳವಣಿಗೆ ಕಾರಣವಾಗಿದೆ.

ಕಾಮ್ರೇಡ್ ಬಿ.ಟಿ ರಣದಿವೆಯವರು ಸ್ವಾತಂತ್ರ್ಯ ಪೂರ್ವ ಮುಂಬೈ ಪ್ರದೇಶದ ಮುಷ್ಕರ ಮತ್ತು ಕೋಮು ಗಲಭೆಗಳ ಬಗ್ಗೆ ಏನು ಹೇಳಿದ್ದರೋ ಅದು ಇಲ್ಲಿ ಪ್ರತಿಧ್ವನಿಸುತ್ತಿದೆ. **ಪೈಪೋಟಿಗಿಳಿದ ಪ್ರಜ್ಞೆಯ ರೂಪಗಳು, ಐಕ್ಯತೆಯ ಆಧಾರದಮೇಲೆ ಮುಷ್ಕರಗಳನ್ನೂ ಮತ್ತು ಪ್ರತಿಗಾಮಿ ಶಕ್ತಿಗಳು ಹರಡುತ್ತಿದ್ದ ದ್ವೇಷಾಧಾರಿತವಾದ ಕೋಮು ಗಲಭೆಗಳನ್ನೂ ಸೃಷ್ಟಿಸುತ್ತಿದ್ದವು. ನವ–ಉದಾರಿ ಆಳ್ವಿಕೆಯಲ್ಲಿ, ರಾಚನಿಕ ಕಾರಣಗಳಿಂದಾಗಿ, ಐಕ್ಯತೆ ಆಧಾರಿತ ಮುಷ್ಕರಗಳು ಸೊರಗುತ್ತಿರುವುದರಿಂದಾಗಿ, ಪ್ರತಿಗಾಮಿ ಶಕ್ತಿಗಳು ಸಮಾಜ ಮತ್ತು ನಾಗರಿಕ ಆಡಳಿತ ವ್ಯವಸ್ಥೆಯನ್ನು ಕೋಮುವಾದಿತನಕ್ಕೆ ಕೊಂಡೊಯ್ಯುವ ಫಲವತ್ತಾದ ವಾತಾವರಣ ನಿರ್ಮಾಣವಾಗಿದೆ.**

ದುಡಿಯುವ ಜನತೆಯನ್ನು ಹಿಂಡಿ ಹಿಪ್ಪೆಮಾಡಿದ ನವ–ಉದಾರವಾದವು ವರ್ಗ ನೆಲೆಯಲ್ಲಿ ಕಾರ್ಮಿಕರನ್ನು ಹೋರಾಟಕ್ಕೆ ಅಣಿನೆರಸಲು ಸಾಧ್ಯವಾಗದಂತೆ ಮಾಡಿ, ಬಹು ಸಂಖ್ಯಾತ ಕೋಮುವಾದ ಬೆಳೆಯಲು ಮತ್ತು ಅಲ್ಪ ಸಂಖ್ಯಾತರ ಪ್ರತಿಕ್ರಿಯೆಯನ್ನು ಪ್ರಚೋದಿಸುವ ಪ್ರಕಿಯೆಗೆ ಅಗತ್ಯವಾದ ಪರಿಸ್ಥಿತಿಯನ್ನು ಸೃಷ್ಟಿಸಿದೆ. ಹೀಗೆ ಹೇಳುವುದರ ಅರ್ಥ ಕೋಮುವಾದವನ್ನು ಎದುರಿಸಲಾಗದು ಎಂದಲ್ಲ. ಬದಲಿಗೆ, ಈ ವಿದ್ಯಮಾನವನ್ನು ಗುರುತಿಸುವುದೇ ಕೋಮುವಾದವನ್ನು ಎದುರಿಸುವ ನಿಟ್ಟಿನಲ್ಲಿ ಒಂದು ಮುಖ್ಯವಾದ ಹೆಜ್ಜೆ.

ಸಂಕ್ಷಿಪ್ತವಾಗಿ ಹೇಳುವುದಾದರೆ, **ನವ–ಉದಾರವಾದ ಮತ್ತು ಕೋಮುವಾದ, ತಾತ್ವಿಕವಾಗಿ, 'ಅಖಂಡ'(unity), ಅವು 'ಅನನ್ಯ'ವಲ್ಲ (identity). ಅಖಂಡತೆ ಮತ್ತು ಅನನ್ಯತೆ (unity & identity) ಇವುಗಳ ನಡುವಿನ ವ್ಯತ್ಯಾಸಗಳನ್ನು ನಿರೂಪಿಸುವುದು ಯಾವಾಗಲೂ ಎಲ್ಲ ಸಂದರ್ಭಗಳಲ್ಲೂ ಅವಶ್ಯ. ಮಾರ್ಕ್ಸ್‌ವಾದಿ ತತ್ವಜ್ಞಾನದಲ್ಲಿ ಇದು ನಿರ್ಣಾಯಕ ಅಂಶ.**

(ಪ್ರೊ. ಪಟ್ನಾಯಕ್ ಅವರ Communalism and Working Class Struggles ಸಾರಾಂಶ.)






ತ್ರಿಪುರ ಮುಖ್ಯಮಂತ್ರಿಗಳಿಗೆ ಪಾರಂಪರಿಕ ಸ್ವಾಗತ

ಬುಡಕಟ್ಟು ಜನಗಳ ಭೂಹೋರಾಟದ ಘೋಷಣೆಗಳೊಂದಿಗೆ ಕೆಂಪಾದ ರಾಂಚಿ

ಝಾರ್ಖಂಡ್‌ನ ಬುಡಕಟ್ಟು ಜನಗಳ ಒಂದು ಬೃಹತ್ ರ್‍ಯಾಲಿ ರಾಜಧಾನಿ ರಾಂಚಿಯಲ್ಲಿ ಎಪ್ರಿಲ್ 8ರಂದು ನಡೆಯಿತು. ಮುಖ್ಯವಾಗಿ ಬುಡಕಟ್ಟು ಜನಗಳ ಭೂಮಿ ಅಧಿಕಾರಕ್ಕಾಗಿ ಹೋರಾಟದ ಭಾಗವಾಗಿ ನಡೆದ ಈ ರ್‍ಯಾಲಿಯಲ್ಲಿ ರಾಜ್ಯದ ಬುಡಕಟ್ಟು ಜನಗಳ ಭೂಮಿ ಹಕ್ಕುಗಳನ್ನು ಕಿತ್ತುಕೊಳ್ಳುವ ಸಿಎನ್‌ಟಿ ಮತ್ತು ಎಸ್‌ಪಿಟಿ ಕಾಯ್ದೆಗಳ ತಿದ್ದುಪಡಿಗಳ ವಿರುದ್ಧ, ಒಂದು ನ್ಯಾಯಯುತ ವಾಸ ಧೋರಣೆ, ಸ್ಥಳೀಯ ನಿರುದ್ಯೋಗಿಗಳಿಗೆ ಉದ್ಯೋಗ, ಖನಿಜ ಸಮೃದ್ಧ ಪ್ರದೇಶಗಳ ನಿವಾಸಿಗಳಿಗೆ ಖನಿಜ ಸಂಪತ್ತಿನ ಪಾಲು ಕುರಿತ ಘೋಷಣೆಗಳಲ್ಲದೆ ವಿದ್ಯಾರ್ಥಿಗಳಿಗೆ ಸ್ಟೈಪಂಡ್‌ಗಳಲ್ಲಿ ಹೆಚ್ಚಳ, ಮಹಿಳೆಯರ ಮೇಲೆ ಅತ್ಯಾಚಾರಗಳ ಅಂತ್ಯ, ಗೋರಕ್ಷಣಾ ತಂಡಗಳು ಎಂದು ಹೇಳಿಕೊಳ್ಳುವವರ ಮೇಲೆ ನಿಷೇಧದ ಘೋಷಣೆಗಳೂ ಕೇಳ ಬಂದವು.

ರಾಜ್ಯದ ಹಿರಿಯ ಮುಖಂಡ ರಾಜೇಂದ್ರ ಸಿಂಗ್ ಮುಂಡಾ ರವರ ಅಧ್ಯಕ್ಷತೆಯಲ್ಲಿ ನಡೆದ ಈ ಸಭೆಯಲ್ಲಿ ದೇಶದಲ್ಲಿ ಬುಡಕಟ್ಟು ಜನಗಳ ಆಂದೋಲನಕ್ಕೆ ನೇತೃತ್ವ ನೀಡುತ್ತಿರುವ ಬೃಂದಾ ಕಾರಟ್ ಹಾಗೂ ತ್ರಿಪುರಾ ಮುಖ್ಯಮಂತ್ರಿ ಮಾಣಿಕ್ ಸರ್ಕಾರ್ ಮುಖ್ಯ ಅತಿಥಿಗಳಾಗಿ ಮಾತಾಡಿದರು. ರಾಜ್ಯದ ಸಿಪಿಐ(ಎಂ) ಮತ್ತು ಬುಡಕಟ್ಟು ಚಳುವಳಿಯ ಮುಖಂಡರು ಸಭೆಯನ್ನುದ್ದೇಶಿಸಿ ಮಾತಾಡಿದರು.

ವೇದಿಕೆಯ ಮೇಲೆ ಗೋರಕ್ಷಕ ಗೂಂಡಾಗಳು ನೇಣು ಹಾಕಿದ ಬಾಲಕ ಇಮ್ತಿಯಾಜ್‌ನ ತಾಯಿ, ಬರ್ಕಾಗಾಂವ್‌ನಲ್ಲಿ ಪೋಲೀಸ್ ಗೋಲೀಬಾರ್ ಇಬ್ಬರನ್ನು ಬಲಿ ತೆಗೆದುಕೊಂಡ ಹೋರಾಟದಲ್ಲಿ ಪಾಲ್ಗೊಂಡ ಹೋರಾಟಗಾರರು ಮತ್ತಿತರ ಹೋರಾಟಗಾರರೂ ಇದ್ದರು.

ಸಾಂಸ್ಕೃತಿಕ ತಂಡಗಳು, ವಿದ್ಯಾರ್ಥಿಗಳು ಭಾಗವಹಿಸಿದ್ದ ಈ ರ್‍ಯಾಲಿಯಲ್ಲಿ ಎಲ್ಲೆಡೆಗಳಲ್ಲೂ ಕೆಂಬಾವುಟಗಳು ಹಾರುತ್ತಿದ್ದವು, ಜತೆಗೆ ಹೋರಾಟ ಮುಂದುವರೆಯುತ್ತದೆ ಎಂಬ ಘೋಷಣೆಗಳು ಮೊಳಗುತ್ತಿದ್ದವು.

ರಾಂಚಿ ವಿಶ್ವವಿದ್ಯಾಲಯಕ್ಕೆ ಬಿರ್ಸ ಮುಂಡಾ, ಸಿಧೊ ಕಾನ್ಹೊ ಅಥವ ಇತರ ಹಲವಾರು ಸ್ವಾತಂತ್ರ್ಯ ಹೋರಾಟಗಾರರ ಹೆಸರಿಡುವ ಬದಲು ಭಾರತದ ಸಂವಿಧಾನದ ಬಗ್ಗೆ, ಸ್ವಾತಂತ್ರ್ಯ ಹೋರಾಟದ ಬಗ್ಗೆ ತುಚ್ಛೀಕಾರವನ್ನೇ ಹೊಂದಿದ್ದ ಆರೆಸ್ಸೆಸ್‌ನ ಶ್ಯಾಮ ಪ್ರಸಾದ ಮುಖರ್ಜಿ ಹೆಸರಿಡಲಾಗಿದೆ. ಆದರೆ ಝಾರ್ಖಂಡ್‌ನ್ನು ಆರೆಸ್ಸೆಸ್‌ಖಂಡ್ ಮಾಡಲು ಎಂದೂ ಸಾಧ್ಯವಿಲ್ಲ ಎಂದು ಬೃಂದಾ ಕಾರಟ್ ಹೇಳಿದರು.

ಮಾಣಿಕ್ ಸರ್ಕಾರ್ ಮಾತಾಡುತ್ತ ನಾವು ಕಾರ್ಪೊರೇಟ್ ಪರ ಸರಕಾರವನ್ನು ತಿರಸ್ಕರಿಸುತ್ತೇವೆ, ರಾಜ್ಯದ ಎರಡು ಬುಡಕಟ್ಟು ಕಾಯ್ದೆಗಳಾದ ಸಿಎನ್‌ಟಿ ಮತ್ತು ಎಸ್‌ಪಿಟಿ ಕಾಯ್ದೆಗಳನ್ನು ದುರ್ಬಲಗೊಳಿಸುವುದನ್ನು ನಿಲ್ಲಿಸಿ ಎಂದು ಆಗ್ರಹಿಸಿದರು.

ರಾಂಚಿಯಲ್ಲಿ ತ್ರಿಪುರ ಮುಖ್ಯಮಂತ್ರಿಗಳಿಗೆ ನಾಗರಿಕ ಸನ್ಮಾನ

ರಾಂಚಿಗೆ ಆಗಮಿಸಿದ್ದ ತ್ರಿಪುರ ಮುಖ್ಯಮಂತ್ರಿ ಮಾಣಿಕ್ ಸರ್ಕಾರ್ ಅವರಿಗೆ ಅಲ್ಲಿನ ಜನವಾದಿ ಲೇಖಕ್ ಸಂಘ್ ಮತ್ತು ಅಖಿಲ ಭಾರತ ವಕೀಲರ ಸಂಘದ ರಾಜ್ಯ ಘಟಕಗಳು ಹಾಗೂ ಸೈನ್ಸ್ ಫೋರಂ ಒಂದು ನಾಗರಿಕ ಸನ್ಮಾನವನ್ನು ಏರ್ಪಡಿಸಿದವು. ಈ ಸಭೆಯಲ್ಲಿ ರಾಜ್ಯದ ಎಡಪಕ್ಷಗಳ ಮುಖಂಡರಲ್ಲದೆ ಲೇಖಕರು, ಕವಿಗಳು, ಪ್ರಾಧ್ಯಾಪಕರು, ಆದಿವಾಸಿ ಕಾರ್ಯಕರ್ತರು ಮತ್ತು ವಿವಿಧ ಎನ್‌ಜಿಒಗಳ ಪ್ರತಿನಿಧಿಗಳು ಭಾಗವಹಿಸಿದ್ದರು.

ನಗದು, ಕೊಡುಗೆ ವಿತರಣೆ: ಚೆನ್ನೈ ಆರ್.ಕೆ.ನಗರ ಉಪಚುನಾವಣೆ ರದ್ದು

ತಮಿಳುನಾಡಿನ ಮಾಜಿ ಮುಖ್ಯಮಂತ್ರಿ ಜಯಲಲಿತ ಅವರ ನಿಧನದಿಂದ ತೆರವಾಗಿದ್ದ ಚೆನ್ನೈನ ಆರ್.ಕೆ.ನಗರ ಕ್ಷೇತ್ರದಲ್ಲಿ ಎಪ್ರಿಲ್ 12ರಂದು ನಡೆಯಬೇಕಾಗಿದ್ದ ಉಪಚುನಾವಣೆಯನ್ನು ರದ್ದುಗೊಳಿಸಲಾಗಿದೆ.

"ಹಣ ಮತ್ತು ಇತರ ಕೊಡುಗೆಗಳ ವಿತರಣೆ ದೊಡ್ಡ ಪ್ರಮಾಣದಲ್ಲಿ ಗುಪ್ತರೀತಿಯಲ್ಲಿ ನಡೆಯುತ್ತಿದ್ದು ಇದು ಚುನಾವಣಾ ಪ್ರಕ್ರಿಯೆಯ ಶುದ್ಧತೆಯನ್ನು ಮತ್ತು ಸಮ ಪ್ರಮಾಣದ ಅವಕಾಶವನ್ನು ಕದಡಿರುವುದರಿಂದಾಗಿ" ಈ ಚುನಾವಣೆಯನನು ರದ್ದು ಮಾಡಲಾಗಿದ ಎಂದು ಚುನಾವಣಾ ಆಯೋಗ ಹೇಳಿದೆ. ವಾಸ್ತವವಾಗಿ ಈಗ ಆಳುತ್ತಿರುವ ಎಐಎಡಿಎಂಕೆ ಗುಂಪು ಒಂದು ಮತಕ್ಕೆ 4000ರೂ., ವಿರೋಧಿ ಗುಂಪು 3000ರೂ. ಮತ್ತು ಹಿಂದಿನ ಆಳುವ ಪಕ್ಷ ಡಿಎಂಕೆ 2000ರೂ.ನಂತೆ ಹಣ ಹಂಚುತ್ತಿದೆ ಎಂದು ಆಗಲೇ ಎಲ್ಲರಿಗೂ ಗೊತ್ತಾಗಿತ್ತು. ಸಿಪಿಐ(ಎಂ) ಈ ಬಗ್ಗೆ ಚುನಾವಣಾ ಆಯೋಗಕ್ಕೆ ದೂರನ್ನೂ ಕೊಟ್ಟಿತ್ತು. ಅದರೆ ಅದು ಇದನ್ನು ಆಗ ಗಮನಕ್ಕೆ ತಗೊಳ್ಳಲಿಲ್ಲ. ಈ ಮೊದಲೂ ಇಲ್ಲಿ ಎಐಡಿಎಂಕೆ ಮತ್ತು ಡಿಎಂಕೆ ಎರಡೂ ಪಕ್ಷಗಳು ಹಣ ಹಂಚಿದ್ದ ದಾಖಲೆ ಇದ್ದರೂ ಅಗತ್ಯ ಎಚ್ಚರವನ್ನು ವಹಿಸಲಿಲ್ಲ.

ಆದರೆ ನಂತರ 94,73,44,000(ಸುಮಾರು 95 ಕೋಟಿ)ರೂ.ಗಳನ್ನು ಮತದಾರರಿಗೆ ಹಂಚಲು ಬಳಸಲಾಗಿದೆ ಎಂದು ರಾಜ್ಯ ಆರೋಗ್ಯ ಮಂತ್ರಿ ಮತ್ತು ಅವರಿಗೆ ಸಂಬಂಧಪಟ್ಟವರ ಮೇಲೆ ಆದಾಯ ತೆರಿಗೆ ದಾಳಿಗಳಲ್ಲಿ ಸಿಕ್ಕಿದ ದಸ್ತಾವೇಜುಗಳಲ್ಲಿ ತಿಳಿದು ಬಂದಾಗ ಚುನಾವಣಾ ಆಯೋಗ ಎಚ್ಚೆತ್ತುಕೊಂಡು ಮತದಾನವನ್ನು ರದ್ದು ಮಾಡಿದೆ.

ಈ 95 ಕೋಟಿ ರೂ. ನಗದು ಮೋದಿಯವರ ನೋಟುರದ್ದತಿಯ ಪೊಳ್ಳುತನವನ್ನು ಬಯಲು ಮಾಡಿದೆ, ಇಂತಹ ಲೆಕ್ಕಕ್ಕೆ ಕೊಡದ ಹಣ ಚುನಾವಣೆಗಳಲ್ಲಿ ಮತ ಖರೀದಿಸಲು ಹೇಗೆ ಬಳಕೆಯಾಗುತ್ತದೆ ಎಂಬುದನ್ನು ಮತ್ತೊಮ್ಮೆ ನೆನಪಿಸಿದೆ.

ಆದರೆ ಕೇವಲ ಚುನಾವಣೆಯನ್ನು ರದ್ದು ಮಾಡಿದರೆ ಸಾಲದು, ಹಣ ಹಂಚಿರುವ ಅಭ್ಯರ್ಥಿಗಳನ್ನು ಸ್ಪರ್ಧೆಗೆ ಅನರ್ಹಗೊಳಿಸಬೇಕು. ಆದರೆ ಚುನಾವಣಾ ಆಯೋಗ ಹೀಗೆ ಮಾಡುತ್ತಿಲ್ಲ. ಕಳೆದ ವರ್ಷ ಅರವಕುರುಚಿ ಮತ್ತು ತಂಜಾವೂರಿನಲ್ಲಿ ಹೀಗೇ ಚುನಾವಣೆಯನ್ನು ರದ್ದು ಮಾಡಲಾಗಿತ್ತು. ಆದರೆ ನಂತರ ನಡೆದ ಚುನಾವಣೆಯಲ್ಲಿ ಮತ್ತೆ ಅದೇ ಅಭ್ಯರ್ಥಿಗಳು ಭಾಗವಹಿಸಿದ್ದರು ಎಂದು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಜಿ. ರಾಮಕೃಷ್ಣನ್ ಹೇಳಿದ್ದಾರೆ.

ಶುಲ್ಕ ವಿಪರೀತ ಏರಿಸಿದ್ದನ್ನು ವಿರೋಧಿಸಿದ್ದಕ್ಕೆ ವಿದ್ಯಾರ್ಥಿಗಳ ಮೇಲೆ ಲಾಠಿ, ಅಶ್ರುವಾಯು, ಜಲಫಿರಂಗಿ ಮತ್ತು ರಾಜದ್ರೋಹದ ಕೇಸು!

ಚಂಡೀಗಡದಲ್ಲಿರುವ ಪಂಜಾಬ್ ವಿಶ್ವವಿದ್ಯಾಲಯದಲ್ಲಿ ಶುಲ್ಕಗಳಲ್ಲಿ ವಿಪರೀತ ಹೆಚ್ಚಳವನ್ನು ವಿರೋಧಿಸುತ್ತಿದ್ದ ವಿದ್ಯಾರ್ಥಿಗಳ ಮೇಲೆ ಎಪ್ರಿಲ್ 11ರಂದು ಪೋಲೀಸರು ಬರ್ಬರವಾಗಿ ಹಲ್ಲೆ ಮಾಡಿದ್ದಾರೆ. ವಿವಿ ಕ್ಯಾಂಪಸ್ ನುಗ್ಗಿ ಅಶ್ರುವಾಯು, ಜಲಫಿರಂಗಿ , ಲಾಠಿ ಪ್ರಹಾರ ಎಲ್ಲವನ್ನೂ ಪ್ರಯೋಗಿಸಿರುವುದಲ್ಲದೆ ಶುಲ್ಕ ಹೆಚ್ಚಳವನ್ನು ವಿರೋಧಿಸಿದ್ದಕ್ಕೆ 52 ವಿದ್ಯಾರ್ಥಿಗಳ ಮೇಲೆ ರಾಜದ್ರೋಹದ ಆರೋಪ ಜಡಿದಿದ್ದಾರೆ.

ಪಂಜಾಬ್ ವಿವಿ ದೇಶದ ಉತ್ತಮ ವಿವಿಗಳಲ್ಲಿ ಒಂದು ಎಂದು ಪರಿಗಣಿಸಲ್ಪಟ್ಟಿದೆ. ಆದರೆ ಈಗ ಅದು ಶಿಕ್ಷಣದಲ್ಲಿ ನವ–ಉದಾರವಾದದ ದಿವಾಳಿಕೋರತನದ ಮಾದರಿಯಾಗಿ ಬಿಟ್ಟಿದೆ. ಕೇಂದ್ರದ ಮಾನವ ಸಂಪನ್ಮೂಲ ಮಂತ್ರಾಲಯ ಸಂಪನ್ಮೂಲಗಳನ್ನು ನೀವೇ ಆಂತರಿಕವಾಗಿ ಸಂಗ್ರಹಿಸಿ ಎಂದು ಕೈತಿರುಚಿದ್ದ–ರಿಂದ ಶುಲ್ಕಗಳಲ್ಲಿ ವಿಪರೀತ ಹೆಚ್ಚಳ ಮಾಡಲಾಯಿತು. ಬಿ.ಫಾರ್ಮ ಕೋರ್ಸಿನ ಶುಲ್ಕವನ್ನು 5080 ರೂ.ನಿಂದ 50,000 ರೂ.ಗೆ ಏರಿಸಲಾಗಿದೆ; ಎಂ.ಎ.(ಜರ್ನಲಿಸಂ)ಗೆ 5290 ರೂ.ನಿಂದ 30,000 ರೂ.ಗೇ ಏರಿಸಲಾಗಿದೆ. ಇದರ ವಿರುದ್ಧ ವಿದ್ಯಾರ್ಥಿಗಳ ಮನವಿಯನ್ನು ಕಿವಿಗೆ ಹಾಕಿಕೊಳ್ಳದ ಉಪಕುಲಪತಿ ಮತ್ತು ಆಡಳಿತದ ವಿರುದ್ಧ ಹಲವಾರು ಮೆರವಣಿಗೆಗಳು, ಧರಣಿಗಳ ನಂತರ ಎಪ್ರಿಲ್ 11ರಂದು ವಿವಿ ಮುಷ್ಕರಕ್ಕೆ ಮತ್ತು ಉಪಕುಲಪತಿ ಕಚೇರಿಯೆದುರು ಮತಪ್ರದರ್ಶನಕ್ಕೆ ಕರೆ ಕೊಡಲಾಗಿತ್ತು.

ಇದನ್ನು ಮುರಿಯಲು ಕೇಂದ್ರ ಸರಕಾರದ ಅಧೀನದಲ್ಲಿರುವ ಚಂಡೀಗಡ ಪೋಲೀಸರನ್ನು ಬಳಸಲಾಗಿದೆ. ಹೊಸದಾಗಿ ಅಧಿಕಾರ ವಹಿಸಿಕೊಂಡ ಕಾಂಗ್ರೆಸ್ ರಾಜ್ಯ ಸರಕಾರ ಈ ಶುಲ್ಕ ಹೆಚ್ಚಳವನ್ನು ಮತ್ತು ಪೋಲೀಸ್ ದಮನವನ್ನು ಖಂಡಿಸದಿರುವುದನ್ನು ನೋಡಿದರೆ ಅದೂ ಇದರಲ್ಲಿ ಶಿಕ್ಷಣದ ಈ ರೀತಿಯ ವ್ಯಾಪಾರೀಕರಣದಲ್ಲಿ ಮತ್ತು ಕಾರ್ಮಿಕರು, ರೈತರ ಮಕ್ಕಳಿಗೆ ಶಿಕ್ಷಣವನ್ನು ವಂಚಿಸುವ ಪ್ರಕ್ರಿಯೆಯಲ್ಲಿ ಶಾಮೀಲಾಗಿರುವುದನ್ನು ತೋರಿಸುತ್ತದೆ ಎಂದು ಈ ದಮನವನ್ನು ಬಲವಾಗಿ ಖಂಡಿಸಿರುವ ಎಸ್‌ಎಫ್‌ಐ ಕೇಂದ್ರೀಯ ಕಾರ್ಯಕಾರಿ ಸಮಿತಿ ಹೇಳಿದೆ.

ವಿದ್ಯಾರ್ಥಿಗಳ ಮೇಲೆ ಹಾಕಿರುವ ಕರಾಳ ಕೇಸುಗಳನ್ನು ತಕ್ಷಣವೇ ಹಿಂತೆಗೆದುಕೊಳ್ಳಬೇಕು ಎಂದು ಆಗ್ರಹಿಸಿರುವ ಅದು ವಿದ್ಯಾರ್ಥಿಗಳ ಪ್ರಜಾಸತ್ತಾತ್ಮಕ ಬೇಡಿಕೆಗಳನ್ನು ದಮನ ಮಾಡಲು ಮುಂದಾದರೆ ಅದು ವಿದ್ಯಾರ್ಥಿಗಳ ಆಂದೋಲನವನ್ನು ಮತ್ತಷ್ಟು ಬಲಪಡಿಸುತ್ತದೆಯಷ್ಟೇ ಎಂದು ಚಂಡೀಗಡ ಪೋಲೀಸ್ ಪಡೆಗೆ ನೆನಪಿಸಿದೆ.

ಶ್ರೀನಗರದಲ್ಲಿ ಪ್ರಹಸನವಾಗಿ ಬಿಟ್ಟ ಚುನಾವಣಾ ಪ್ರಕ್ರಿಯೆ: ಈಗಲೂ ರಾಜಕೀಯ ಸಂವಾದ ಆರಂಭಿಸದಿದ್ದರೆ ನಾಗರಿಕರು ಮತ್ತು ಭದ್ರತಾ ಸಿಬ್ಬಂದಿಯ ಬಲಿ ಮುಂದುವರೆಯುತ್ತದೆ–ಸಿಪಿಐ(ಎಂ) ಪೊಲಿಟ್‌ಬ್ಯುರೊ ಖೇದ

ಜಮ್ಮು ಮತ್ತು ಕಾಶ್ಮೀರ ರಾಜ್ಯದ ಶ್ರೀನಗರ ಲೋಕಸಭಾ ಕ್ಷೇತ್ರದ ಉಪಚುನಾವಣೆಯಲ್ಲಿ ಅತ್ಯಂತ ಕಡಿಮೆ, ಶೋಚನೀಯ ಪ್ರಮಾಣದಲ್ಲಿ ಮತದಾನ ನಡೆದಿರುವುದು ಚುನಾವಣಾ ಪ್ರಕ್ರಿಯೆಯನ್ನು ಸಂಪೂರ್ಣವಾಗಿ ಒಂದು ಪ್ರಹಸನದ ಮಟ್ಟಕ್ಕೆ ಇಳಿಸಿದೆ. ಅಲ್ಲದೆ ಇದು ಜಮ್ಮು ಮತ್ತು ಕಾಶ್ಮೀರದ ಜನತೆಯಲ್ಲಿ ಪರಕೀಯ ಭಾವನೆ ಎಷ್ಟು ಆಳಕ್ಕೆ ಇಳಿದಿದೆ ಎಂಬುದನ್ನು ಪ್ರದರ್ಶಿಸುತ್ತದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಖೇದ ವ್ಯಕ್ತಪಡಿಸಿದೆ.

2014 ರ ಲೋಕಸಭಾ ಚುನಾವಣೆಗಳಲ್ಲಿ ಚುನಾಯಿತರಾಗಿದ್ದ ಆಳುವ ಪಿಡಿಪಿ ಪಕ್ಷದ ತಾರೀಖ್ ಹಮೀದ್ ಕರ್ರ ಅವರು ಕಳೆದ ವರ್ಷ ಹಿಜ್ಬುಲ್ ಮುಜಾಹಿದಿನ್ ಕಮಾಂಡರ್ ಬುರ್ಹನ್ ವಾನಿಯ ಸಾವಿನ ಹಿನ್ನೆಲೆಯಲ್ಲಿ ವ್ಯಾಪಕ ಪ್ರತಿಭಟನೆ ಭುಗಿಲೆದ್ದಾಗ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದ–ರಿಂದ ಎಪ್ರಿಲ್ 9ರಂದು ಈ ಉಪಚುನಾವಣೆ ನಡೆದಿದೆ. ಇದರಲ್ಲಿ ಕೇವಲ 7.14ಶೇ. ಮತದಾನವಾಗಿದೆ. ಇದು ರಾಜ್ಯದಲ್ಲಿ ಯಾವುದೇ ಲೋಕಸಭಾ ಮತದಾನದಲ್ಲಿ ಅತೀ ಕಡಿಮೆ ಮತದಾನ ಎನ್ನಲಾಗಿದೆ. ಅಲ್ಲದೆ ಈ ದಿನ ನಡೆದ ವ್ಯಾಪಕ ಗಲಭೆಗಳಲ್ಲಿ 8 ಮಂದಿ ಅಸು ನೀಗಿದ್ದಾರೆ, ಭದ್ರತಾ ಸಿಬ್ಬಂದಿ ಸೇರಿದಂತೆ 170ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ.

ನಮ್ಮ ದೇಶದ ಆಂತರಿಕ ಭದ್ರತೆ ಮತ್ತು ಸಾರ್ವಭೌಮತೆಯ ಪ್ರಶ್ನೆಯಲ್ಲಿ ಎರಡು ಮಾತಿಲ್ಲ. ಆದರೆ ಇದನ್ನು ಜನರನ್ನು ಒಳಗೊಳ್ಳುವುದರಿಂದ ಮಾತ್ರವೇ ಬಲಪಡಿಸಲು ಸಾಧ್ಯ. ಹೀಗಾಗಬೇಕಾದರೆ, ಅದು ಈ ರಾಜ್ಯಕ್ಕೆ ಸರ್ವಪಕ್ಷ ಸಂಸದೀಯ ನಿಯೋಗದ ಭೇಟಿಯ ನಂತರ ಈ ಬಿಜೆಪಿ ಕೇಂದ್ರ ಸರಕಾರ ಒಪ್ಪಿದ್ದ ಮತ್ತು ಗೃಹಮಂತ್ರಿಗಳು ಪ್ರಕಟಿಸಿದ್ದ ಒಂದು ರಾಜಕೀಯ ಪ್ರಕ್ರಿಯೆಯ ಮೂಲಕ ಮಾತ್ರ ಸಾಧ್ಯ. ಈ ಪ್ರಕ್ರಿಯೆ ವಿಶ್ವಾಸ ಬೆಸೆಯುವ ಕ್ರಮಗಳ ಮೂಲಕ ಮತ್ತು ಸಂಬಂಧಪಟ್ಟ ಎಲ್ಲರೊಂದಿಗೂ ಸಮಗ್ರ ರಾಜಕೀಯ ಸಂವಾದಕ್ಕೆ ಮುತುವರ್ಜಿ ವಹಿಸುವ ಮೂಲಕ ನಡೆಯಬೇಕಿತ್ತು. ಈ ಬಗ್ಗೆ ಭರವಸೆ ನೀಡಿದ್ದರೂ, ಕೇಂದ್ರ ಸರಕಾರ ಇದುವರೆಗೂ ಎಂದೂ ಅದನ್ನು ಅನುಸರಿಸಲಿಲ್ಲ. ಇದು ರಾಜ್ಯದ ಜನತೆ ಇನ್ನಷ್ಟು ಪರಕೀಯ ಭಾವ ಅನುಭವಿಸುವಂತೆ ಮಾಡಿದೆ ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ ಈ ಪ್ರಕ್ರಿಯೆ ಆರಂಭಿಸದಿದ್ದರೆ ನಮ್ಮ ಭದ್ರತಾ ಸಿಬ್ಬಂದಿಗಳು ಮತ್ತು ಮುಗ್ಧ ನಾಗರಿಕರು ಇಬ್ಬರೂ ತಮ್ಮ ಪ್ರಾಣಗಳನ್ನು ಕೊಡುತ್ತಿರಲೇ ಇರಬೇಕಾಗುತ್ತದೆ ಎಂದು ಎಚ್ಚರಿಸಿದೆ.

ಕೇಂದ್ರ ಸರಕಾರ ದೇಶಕ್ಕೆ ಮತ್ತು ಜನತೆಗೆ ತಾನೇ ನೀಡಿದ ಭರವಸೆಯನ್ನು ತಕ್ಷಣವೇ ಜಾರಿಗೊಳಿಸಬೇಕು ಮತ್ತು ವಿಶ್ವಾಸ ಬೆಸೆಯುವ ಕ್ರಮಗಳನ್ನು ಕೈಗೊಳ್ಳಲಾರಂಭಿಸಬೇಕು ಹಾಗೂ ರಾಜಕೀಯ ಪ್ರಕ್ರಿಯೆಯನ್ನು ಆರಂಭಿಸಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಕರೆ ನೀಡಿದೆ. ○

ತೀರ್ಪು ಜಾರಿ ಮಾಡದಿದ್ದರೆ................ ಪುಟ 6 ರಿಂದ

ನೌಕರರು ಗುತ್ತಿಗೆ ಮತ್ತು ಹೊರಗುತ್ತಿಗೆ ಆಧಾರದಲ್ಲಿ ದುಡಿಯಬೇಕಾದ ಅನಿವಾರ್ಯತೆ ಸೃಷ್ಠಿಯಾಗಿದೆ.

ತೀವ್ರವಾದ ಶೋಷಣೆ:

BBM, B.Com, BSC, ITI, ಡಿಪ್ಲೋಮಾ, MA, M.Com MSC, PHD ನೆಟ್, JOC ನ ಟೆಕ್ನಿಷಿಯನ್ಸ್, ವಾಹನ ಚಾಲಕರು, ನರ್ಸಿಂಗ್ ಮುಂತಾದ ಪದವಿಗಳನ್ನು ಪಡೆದ ಯುವಕ–ಯುವತಿಯರನ್ನು ಕೆಲಸಗಳಿಗೆ ನೇಮಿಸಿಕೊಳ್ಳಲಾಗುತ್ತಿದೆ. ಅವರನ್ನು 5–6 ವರ್ಷಗಳು ದುಡಿಸಿದ ನಂತರ ಆ ಹುದ್ದೆಗಳಿಗೆ ನೇರ ನೇಮಕಾತಿಯನ್ನು ಮಾಡಿಕೊಳ್ಳುವ ಮುಖಾಂತರ ಅವರನ್ನು ಕೆಲಸದಿಂದ ತೆಗೆದು ಹಾಕಲಾಗುತ್ತದೆ.

ಉದಾ: ವಿದ್ಯುತ್ ವಿತರಣೆಯಲ್ಲಿರುವ ಪವರ್ ಸ್ಟೇಷನ್ ಆಪರೇಟರ್‌ಗಳು, ಗನ್‌ಮ್ಯಾನ್‌ಗಳು, ಅತಿಥಿ ಉಪನ್ಯಾಸಕರು, ಆದರ್ಶ ಶಿಕ್ಷಕರು, ನರ್ಸ್‌ಗಳು, ಹಾಸ್ಟೆಲ್‌ಗಳಲ್ಲಿನ ಸಿಬ್ಬಂದಿಗಳು. ಅತಿಥಿ ಉಪನ್ಯಾಸಕರಿಗೆ 9 ಸಾವಿರಗಳ ವೇತನ ಬಿಟ್ಟರೆ ಬೇರ್‍ಯಾವುದೇ ಸವಲತ್ತುಗಳಿಲ್ಲ. ನಿವೃತ್ತಿಯಲ್ಲಿದ್ದರೂ ಕೂಡಾ ಇವರಿಗೆ ಸಾಮಾಜಿಕ ಭದ್ರತೆಯೂ ಇಲ್ಲ.

ವಿದ್ಯುತ್ ವಿತರಣೆಯಲ್ಲಿ ದುಡಿಯುವ ನೌಕರರು ಹೆಚ್ಚಾಗಿ ಅಪಘಾತಗಳಲ್ಲಿ ಮರಣ ಹೊಂದುತ್ತಿದ್ದಾರೆ. ಒಂದೇ ತಿಂಗಳಲ್ಲಿ ಕನಕಪುರ, ಗುಲ್ಬರ್ಗಾ ಜಿಲ್ಲೆಗಳಲ್ಲಿ ಇಬ್ಬರು ಸಾವನಪ್ಪಿದ್ದು, ಇಬ್ಬರಿಗೆ ಗಂಭೀರ ಗಾಯಗಳಾಗಿವೆ. ಏಕಖಿಅಐ ಈ ಘಟನೆಗಳನ್ನು ದಾಖಲಿಸದೇ ಮೌಖಿಕವಾಗಿ ಪರಿಹಾರ ಕೊಟ್ಟು ಮುಚ್ಚಿ ಹಾಕಲಾಗುತ್ತಿದೆ.

1970ರ ಗುತ್ತಿಗೆ ಕಾರ್ಮಿಕ ಕಾಯ್ದೆಯ ಪ್ರಕಾರ PF, ESI, ಬ್ಯಾಂಕಿನ ಮುಖಾಂತರ ವೇತನ, ಲಾಗ್‌ಬುಕ್, ಹಾಜರಾತಿ ಪುಸ್ತಕ, ಐ.ಡಿ.ಕಾರ್ಡ್, ರಜೆ, ಬೋನಸ್, ಕನಿಷ್ಠ ವೇತನಗಳು ಯಾವುದೂ ಸರಿಯಾಗಿ ಜಾರಿಯಾಗುತ್ತಿಲ್ಲ.

ಈ ಹಿನ್ನೆಲೆಯಲ್ಲಿ ಸಿಐಟಿಯು ಮುತುವರ್ಜಿ ವಹಿಸಿ ಈ ಎಲ್ಲ ನೌಕರರನ್ನು ಸಂಘಟಿಸಿ ಕೆಳಕಂಡ ಬೇಡಿಕೆಗಳ ಆಧಾರದಲ್ಲಿ ಮುಂದಿನ ಹೋರಾಟಗಳನ್ನು ನಡೆಸಲು ಸೂಚಿಸುತ್ತಿದೆ.

- ಸುಪ್ರಿಂಕೋರ್ಟ್ ತೀರ್ಪಿನ ಪ್ರಕಾರ ಸಮಾನ ಕೆಲಸಕ್ಕೆ ಸಮಾನ ವೇತನ ನಿಗದಿ ಮಾಡುವುದು.
- ಆಯಾ ಇಲಾಖೆಗಳಲ್ಲಿ ಮತ್ತು ನಿಗಮ ಮಂಡಳಿಗಳಲ್ಲಿ ನೇರ ನೇಮಕಾತಿ ಮಾಡುವಾಗ ಗುತ್ತಿಗೆ–ಹೊರಗುತ್ತಿಗೆ ನೌಕರರಿಗೆ ಮೊದಲ ಆದ್ಯತೆ ನೀಡುವುದು.
- ಗುತ್ತಿಗೆ–ಹೊರಗುತ್ತಿಗೆ ಏಜೆನ್ಸಿ ಯಾವುದೇ ಬದಲಾವಣೆಯಾದರೂ ಅದೇ ನೌಕರರನ್ನು ಸೇವೆಯಲ್ಲಿ ಮುಂದುವರಿಸುವುದು.
- ಒಂದೇ ತರನಾದ ಹುದ್ದೆಗಳಲ್ಲಿ ಕೆಲಸ ಮಾಡುವವರಿಗೆ ಏಕರೀತಿಯ ವೇತನ ನೀಡುವುದು.
- 1970ರ ಗುತ್ತಿಗೆ ಕಾರ್ಮಿಕ ಪದ್ಧತಿ ನಿಯಂತ್ರಣ ಮತ್ತು ನಿಷೇಧ ಕಾಯ್ದೆಯ ಪ್ರಕಾರ ಕಾರ್ಮಿಕ ಇಲಾಖೆಯಲ್ಲಿ ಅಧಿಕೃತವಾದ ನೊಂದಣಿಯಾಗಿರುವ ಏಜೆನ್ಸಿಗಳಿಗೆ ಮಾತ್ರ ಗುತ್ತಿಗೆ ನೀಡಬೇಕು.
- ಕಾರ್ಮಿಕ ಕಾಯ್ದೆ – ಕಾನೂನುಗಳ ಪ್ರಕಾರ ಕೊಡಬೇಕಿದ ಸವಲತ್ತುಗಳನ್ನು ಗುತ್ತಿಗೆದಾರರು ನೀಡದಿದ್ದರು, ಮೂಲ ಮಾಲೀಕರು ಜವಾಬ್ದಾರಿ ವಹಿಸಿಕೊಂಡು ಸವಲತ್ತುಗಳನ್ನು ಜಾರಿ ಮಾಡಿಸಬೇಕು.
- ಮಹಿಳಾ ನೌಕರರಿಗೆ ಕಡ್ಡಾಯವಾಗಿ 6 ತಿಂಗಳ ಹೆರಿಗೆ ಭತ್ಯೆಯನ್ನು ಜಾರಿ ಮಾಡಬೇಕು.
- ಸೇವೆಯಲ್ಲಿ ವಿಲೀನ ಗೊಳ್ಳುವವರೆಗೆ ಅತಿಥಿ ಉಪನ್ಯಾಸಕರಿಗೆ 25 ಸಾವಿರ ಮಾಸಿಕ ವೇತನ ಪ್ರತಿ ತಿಂಗಳು ಮೊದಲ ವಾರದಲ್ಲಿ ನೀಡಬೇಕು.
- ಸೇವಾ ಹಿರಿತನ ಮತ್ತು ವಯೋಮಿತಿ ಆಧಾರದ ಮೇಲೆ ಅತಿಥಿ ಉಪನ್ಯಾಸಕರನ್ನು ವಿಲೀನಗೊಳಿಸಿ ಸೇವಾ ಭದ್ರತೆ ಕೊಡಬೇಕು.
- ಮಹಿಳಾ ಅತಿಥಿ ಉಪನ್ಯಾಸಕರಿಗೆ 6 ತಿಂಗಳ ಹೆರಿಗೆ ರಜೆ, ಎಲ್ಲ ಉಪನ್ಯಾಸಕರಿಗೆ ಪೆನ್ಷನ್ ನೀಡಬೇಕು.

ಹೋರಾಟಗಳು :

- ಕರ್ನಾಟಕ ರಾಜ್ಯ ಸರ್ಕಾರದ ಗುತ್ತಿಗೆ–ಹೊರಗುತ್ತಿಗೆ ನೌಕರರ ಸಮನ್ವಯ ಸಮಿತಿ ರಚನೆ.
- ಜಿಲ್ಲಾವಾರು ಸಮಾವೇಶಗಳು (ಮೇ–ಜೂನ್ ತಿಂಗಳೊಳಗೆ) ಎಲ್ಲಾ ವಿಭಾಗಗಳ ಕಾರ್ಯಕರ್ತರು ಜಿಲ್ಲಾ ಸಮಾವೇಶದ ಜವಾಬ್ದಾರಿ ತೆಗೆದುಕೊಳ್ಳುವುದು.
- ಜಿಲ್ಲೆಗಳಲ್ಲಿ ಆಯ್ಕೆಯಾದ ಪ್ರಮುಖ ಕಾರ್ಯಕರ್ತರಿಗೆ ಸಂಘಟನಾ ಕಾರ್ಯಗಾರ ಮಾಡುವುದು.
- ಹಂತ ಹಂತವಾಗಿ ಹೋರಾಟಗಳನ್ನು ರೂಪಿಸುವುದು.

ಸಮಾವೇಶ ನಿರೀಕ್ಷೆ ಮುಟ್ಟಿತೇ? ....

ಪುಟ 16 ರಿಂದ

ಜಾರಿಯೂ ಆಗಲಿಲ್ಲ. ಗೋಷ್ಟಿಯ ವಿಷಯಗಳು ಪ್ರಸ್ತುತ ಹಾಗೂ ಅಗತ್ಯವಾದರೂ ವಿಷಯದ ಬಗ್ಗೆ ಆಳ ಹರವು ಇಲ್ಲದ ಟಿಪ್ಪಣಿಗಳಿಂದ ಗೋಷ್ಟಿಗಳು ಸೊರಗಿದವು. ಟಿಪ್ಪಣಿಗಳ ಆಳ ಹರವು ಇಲ್ಲದಿರುವುದು ಟಿಪ್ಪಣಿಕಾರರಿಗೆ ಪೂರ್ವ ಸೂಚನೆಯ ಹಾಗೂ ಸಮಯದ ಅಭಾವದಿಂದಲೂ, ಕೆಲವೊಮ್ಮೆ ಟಿಪ್ಪಣಿಕಾರರ ವಿಷಯ ಪಾರಿಣತ್ಯದ ಕೊರತೆಯಿಂದಲೂ ಮತ್ತು ತಪ್ಪು ಆಯ್ಕೆಯಿಂದಲೂ ಆಯಿತೆಂದು ಕಾಣುತ್ತದೆ. ಹೆಚ್ಚಾಗಿ ಟಿಪ್ಪಣಿಗಳ ಆಳ ಹರವುಗಳ ಕೊರತೆಯಿಂದ "ಸಹಚಿಂತನೆ ಹಾಗೂ ಸಮಾಲೋಚನೆ" ಸಾಧ್ಯ ಮಾಡಬೇಕಿದ್ದ ಸಂವಾದ ಸಹ ಬಹುಪಾಲು ಪರಿಣಾಮಕಾರಿಯಾಗಲಿಲ್ಲ. ಗೋಷ್ಟಿಗಳನ್ನು ನಡೆಸಿಕೊಟ್ಟವರ ಆಶಯ ನುಡಿ ಸೂಚಿಸಿದ ಆಳ ಹರವುಗಳನ್ನೂ ಗೋಷ್ಟಿಗಳು ಮುಟ್ಟಲಿಲ್ಲ. ವಿವಿಧ ಹಿನ್ನೆಲೆ ನೆಲೆ ನಿಲುವುಗಳಿಂದ ಬಂದವರ "ಸಹಚಿಂತನೆ ಹಾಗೂ ಸಮಾಲೋಚನೆ"ಗಳಿಂದ ವಿಷಯದ ಬಗ್ಗೆ ಸ್ಪಷ್ಟತೆ, ಸಾಮಾನ್ಯ ನಿಲುವು ರೂಪಿಸುವುದಂತೂ ದೂರವೇ ಉಳಿಯಿತು.

ಇದೇ ರೀತಿ ಸಮಾವೇಶ ಸಂಕಲ್ಪ ಮತ್ತು ಮುಂದಿನ ಯೋಜನೆಗಳೂ ಅಗತ್ಯ "ಸಹಚಿಂತನೆ ಹಾಗೂ ಸಮಾಲೋಚನೆ"ಗಳಿಲ್ಲದೆ ಸೊರಗಿದವು. ಸಂಘಟಕರ ನಿರೀಕ್ಷೆ ಮೀರಿದ ಪಾಲುಗೊಳ್ಳುವಿಕೆ ಅಥವಾ ಸಂಪನ್ಮೂಲ/ಸಮಯಗಳ ಅಭಾವದ ಪರಿಣಾಮ, ಸಮಾವೇಶ ಪಡೆದ ಈ ಸ್ವರೂಪಕ್ಕೆ ಸ್ವಲ್ಪ ಮಟ್ಟಿಗೆ ಕಾರಣವಾಗಿರಬಹುದು. ಅದರಷ್ಟೇ ಸಮಾವೇಶ ಸಂಘಟನೆಯಲ್ಲಿ, ಅದರ ಸ್ವರೂಪ ನಿರ್ಧರಿಸುವಲ್ಲಿ ವ್ಯಾಪಕ ಪಾಲುಗೊಳ್ಳುವಿಕೆ ಮತ್ತು ಒಳಗೊಳ್ಳುವಿಕೆ ಇಲ್ಲದಿರುವುದು ಕಾರಣವಾಗಿದೆ. ಸಮಾವೇಶದ ಹಿಂದಿನ ದಿನದ ವರೆಗೂ ಅದರ ಸ್ವರೂಪದ ಬಗ್ಗೆ (ಬಹುಶಃ ಒಂದು ಸಣ್ಣ ಗುಂಪಿಗೆ ಬಿಟ್ಟರೆ) ಸ್ಪಷ್ಟತೆ ಇರಲಿಲ್ಲ ಅಥವಾ ಆ ಸಣ್ಣ ಗುಂಪಿಗೂ ಸಾಕಷ್ಟು ಗೊಂದಲಗಳಿದ್ದವು. ಮಾತ್ರವಲ್ಲ ಬಹುಶಃ ಈಗಿನ ದಕ್ಷಿಣಾಯನದ ಅಪಾರದರ್ಶಕ ಸಂಘಟನಾ ಸ್ವರೂಪವೂ ವ್ಯಾಪಕ ಪಾಲುಗೊಳ್ಳುವಿಕೆ ಮತ್ತು ಒಳಗೊಳ್ಳುವಿಕೆಗೆ ಮತ್ತು ಅಂತಿಮವಾಗಿ ಫ್ಯಾಸಿಸ್ಟ್–ವಿರೋಧಿ ಶಕ್ತಿಗಳ ಐಕ್ಯತೆಗೆ ಸೂಕ್ತವಾದುದಲ್ಲ. ಈ ಎಲ್ಲಾ ಗೊಂದಲಗಳ ನಡುವೆ 'ವಿಐಪಿ" ಅತಿಥಿಗಳನ್ನು ವೇದಿಕೆಯಲ್ಲಿ ತೊಡಗಿಸಿಕೊಳ್ಳುವುದು (ಮತ್ತು ಬಹುಶಃ ಕೆಲವರನ್ನು ದೂರವಿಡುವುದು) ಆದ್ಯತೆಯ ವಿಷಯವಾಗಿ ಬಿಟ್ಟಿತ್ತು.

ಈ ಎಲ್ಲಾ ಕಾರಣಗಳಿಂದ ಸಮಾವೇಶಕ್ಕೆ ಬಂದ ಹಿರಿಯ–ಕಿರಿಯರಾಗಲಿ "ಕಾಲಕೆಳಗೆ ಮಾತ್ರವಲ್ಲ, ನೆತ್ತಿಯ ಮೇಲೂ ಸುತ್ತಲೂ ಎಲ್ಲೆಲ್ಲೂ ಇರುವ ಬೆಂಕಿ"ಯ ಸ್ವರೂಪ, ಕಾರಣಗಳ ಬಗೆಗೂ ಸಾಮಾನ್ಯ ಹೊಸ ಅರಿವು ಹೊಂದಿ ಮರಳುವುದು ಸಾಧ್ಯವಾಗಿಲ್ಲ. "ಎಲ್ಲಾ ಶಕ್ತಿಗಳನ್ನು ಬಳಸಿಕೊಂಡು ಮಾಡಬೇಕಾದುದರ ಬಗ್ಗೆ ಸ್ಪಷ್ಟತೆ ಪಡೆದುಕೊಂಡು ಮಾಡಬೇಕಾದ ಕೆಲಸಗಳನ್ನು ಆರಂಭಿಸಲು" ಬೇಕಾದ "ಕಣ್ಣ ಮುಂದಿನ ಬೆಳಕು" ಪಡೆಯುವದಂತೂ ದೂರವೇ ಉಳಿಯಿತು. ಈ ನಿಟ್ಟಿನಲ್ಲಿ ಸಮಾವೇಶ ಪಾಲುಗೊಂಡವರ ನಿರೀಕ್ಷೆಗಳನ್ನು ಬಹುಪಾಲು ಮುಟ್ಟಲಿಲ್ಲವೆಂದೇ ಹೇಳಬೇಕು.

ಈ ನಿರೀಕ್ಷೆಯನ್ನು ಮುಟ್ಟಲು ಗಂಭೀರ ವಿಮರ್ಶೆ ನಡೆಯಬೇಕಾಗಿದೆ. ಈ ಸಮಾವೇಶದ ಸಾಧ್ಯತೆ ಅನ್ನು ಸರಿಯಾಗಿ ಅರ್ಥೈಸಬೇಕು.

ಮತಾಂಧ, ಕೋಮುವಾದಿ, ಫ್ಯಾಸಿಸ್ಟ್ ರಾಜಕೀಯ ಪ್ರಭುತ್ವವನ್ನು ಹಿಮ್ಮೆಟ್ಟಿಸಲು ಸಂಘಟಿತ ಶಕ್ತಿಯ ಅವಶ್ಯಕತೆ ಇದೆ, ಆ ನಿಟ್ಟಿನಲ್ಲಿ ಎಲ್ಲಾ ಪ್ರಜಾಸತ್ತಾತ್ಮಕ, ಜಾತ್ಯತೀತವಾದಿ ಮನಸ್ಸುಗಳನ್ನು ಒಂದುಗೂಡಿಸಿ ಪ್ರಬಲ ಶಕ್ತಿಯನ್ನಾಗಿ ಮಾರ್ಪಡಿಸುವ ಕೆಟಲಿಸ್ಟ್ ಆಗಿ ದಕ್ಷಿಣಾಯನದ ಮುಂದಿನ ಹೆಜ್ಜೆ ಅತ್ಯಂತ ಸ್ಪಷ್ಟವಾಗಿ ಆ ಸಮಯದಲ್ಲೇ ಜಾಗರೂಕವಾಗಿ ಇರಬೇಕಾದ ಅನಿವಾರ್ಯತೆ ಮತ್ತು ತುರ್ತು ಇದೆ.

ಶಿವಮೊಗ್ಗ ಸಮಾವೇಶ ಸಂಕಲ್ಪ

ದಕ್ಷಿಣಾಯನ ಕರ್ನಾಟಕದಲ್ಲಿ ಇಲ್ಲಿ ಸಮಾವೇಶಗೊಂಡ ಸಾಹಿತಿಗಳು, ಕಲಾವಿದರು, ಚಿಂತಕರು, ಪತ್ರಕರ್ತರು ಹಾಗೂ ಹೋರಾಟಗಾರರು ಸಂವಿಧಾನಬದ್ಧವಾಗಿ ಈ ನೆಲವಾಸಿಗಳಿಗೆ ಕೊಡಲ್ಪಟ್ಟ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಕಲೆ–ಸಾಹಿತ್ಯಗಳ ಸೃಜನಶೀಲ ಮಧ್ಯ ಪ್ರವೇಶದ ಮೂಲಕ ಎತ್ತಿ ಹಿಡಿಯಲು ಬದ್ಧರಾಗಿದ್ದೇವೆ. ಈ ನೆಲದ ಬಹುತ್ವದ ಹಾಗೂ ನಿರ್ಭೀತ ಜನ ಪರಂಪರೆಗಳನ್ನು ಒಳಗೊಂಡು ಮುಂದುವರೆಸುತ್ತೇವೆಂದು ಈ ಮೂಲಕ ಘೋಷಿಸುತ್ತೇವೆ.

ಮುಂದಿನ ಹೆಜ್ಜೆಗಳು

1. ಕರ್ನಾಟಕದ ಸೌಹಾರ್ದ ಪರಂಪರೆಯ ತಾಣಗಳ "ಜಾಥಾ"
2. ದಕ್ಷಿಣಾಯನದ ಪತ್ರಿಕೆ ಪ್ರಕಟಣೆ
3. ದಕ್ಷಿಣಾಯನದ ತಂಡದಿಂದ ಜಿಲ್ಲೆಗಳ ಭೇಟಿ ಮತ್ತು ಜಿಲ್ಲಾ ತಂಡಗಳ ರಚನೆ (ಎಪ್ರಿಲ್ 19 – ಮೇ 19)
4. "ಯುವಜನರ ಭೇಟಿ" ಕಾರ್ಯಕ್ರಮ

"ಅಭಿವ್ಯಕ್ತಿ"ಯಲ್ಲಿ ದನಿಗಳು

ಇಂದಿನ ಎಲ್ಲಾ ಚರ್ಚೆ ಮತ್ತು ಸಂವಾದ ಗಮನಿಸಿದ ನನಗೆ ದಕ್ಷಿಣಾಯನ ಒಂದು ದೊಡ್ಡ ವಿದ್ಯಮಾನವಾಗಿ ಬೆಳೆಯುತ್ತದೆ ಎಂಬ ನಂಬಿಕೆ ಬಂದಿದೆ....

– ದೇವನೂರು ಮಹಾದೇವ

ಅಭಿವ್ಯಕ್ತಿಯ ಹಕ್ಕನ್ನು ಕಾಲಕಾಲಕ್ಕೆ ಕಷ್ಟಪಟ್ಟು ಹೋರಾಟ ಮಾಡಿ ಉಳಿಸಿಕೊಳ್ಳುವ ಅನಿವಾರ್ಯತೆ ಇದೆ. ಬಸವಣ್ಣ ಒಲಿದಂತೆ ಹಾಡುವೆ ಅನ್ನುವಾಗ ಒಲಿದಂತೆ ಅನ್ನುವುದು ಸ್ವಾತಂತ್ರ್ಯವನ್ನು ಸೂಚಿಸುತ್ತದೆ. ಅದರ ಜೊತೆಗೇ ಅವರು 'ನಿನಗೆ ಕೇಡಿಲ್ಲವಾಗಿ' ಎಂದೂ ಹೇಳುತ್ತಾರೆ. ಕೇಡಿಲ್ಲದ ಸಮಾಜ ಕಟ್ಟುವುದಕ್ಕಾಗಿ ಅಭಿವ್ಯಕ್ತಿ ಇರಬೇಕು. ರಕ್ಷಣಾತ್ಮಕ ಅಭಿವ್ಯಕ್ತಿ ಆಕ್ರಮಣಕಾರಿ ಅಭಿವ್ಯಕ್ತಿಯ ನಡುವೆ ಫರಕು ಇದೆ. ಕೇಡಿಲ್ಲದ ಕಲ್ಯಾಣ ಕಟ್ಟುವುದಕ್ಕಾಗಿ ಅಭಿವ್ಯಕ್ತಿ ಇರುವ ಅಭಿವ್ಯಕ್ತಿಯ ರಕ್ಷಣೆಯಾಗಬೇಕು.

– ಡಾ.ರೆಹಮತ್ ತರಿಕೆರೆ

ನಮ್ಮೊಳಗೂ ಅಸಹಿಷ್ಣುತೆ ಇದೆ, ನಮ್ಮೊಳಗೂ ಫ್ಯಾಸಿಸಮ್ ಇದೆ, ನಮ್ಮೊಳಗೂ ಮೋದಿ ಇದ್ದಾರೆ, ಅದನ್ನು ನಾವು ನೋಡಿಕೊಳ್ಳಬೇಕು.

– ಡಾ.ಎಚ್.ಎಸ್. ಅನುಪಮಾ

ಪ್ಯಾಸಿಸಂ ಶಕ್ತಿ ಮತ ಪೆಟ್ಟಿಗೆಯಿಂದ ಬಂದಿಲ್ಲ. ಬದಲಾಗಿ ನಿರಂತರ ಸಾಂಸ್ಕೃತಿಕ ರಾಜಕಾರಣದಿಂದ ಬಂದಿದೆ...

– ನಟರಾಜ್ ಬೂದಾಳ್

ಫ್ಯಾಸಿಸಮ್ ಅನ್ನು ವಿಶ್ವ–ರಾಷ್ಟ್ರಮಟ್ಟದಲ್ಲಿ ಕೌಂಟರ್ ಆ್ಯಕ್ಟ್ ಮಾಡೋದಕ್ಕಾಗಲ್ಲ. ಅದನ್ನು ಸ್ಥಳೀಯ ಮಟ್ಟದಲ್ಲಿ ಮಾಡಬೇಕಾಗುತ್ತದೆ. ಈ ಹೋರಾಟಕ್ಕಾಗಿ ಪರ್ಯಾಯ ಶಕ್ತಿಯನ್ನು ರೂಪಿಸಬೇಕಾಗುತ್ತದೆ. ಮತ್ತು ಈ ಪರ್ಯಾಯ ಶಕ್ತಿ ಯಾವುದೇ ಧರ್ಮ – ಜಾತಿಗಳ ವಿರುದ್ಧ ಅಲ್ಲ, ಅಸಮಾನತೆ ಅನ್ಯಾಯದ ವಿರುದ್ಧ ಹೋರಾಡಬೇಕಾಗುತ್ತದೆ. ಅದಕ್ಕಾಗಿ ನಮಗಿಂದು ಕಲ್ಚರಲ್ ಆ್ಯಕ್ಟಿವಿಸಮ್ ಅಲ್ಲ, ಕಲ್ಚರಲ್ ಪೊಲಿಟಿಕ್ಸ್ ಅಗತ್ಯವಿದೆ.

– ಚೇತನ್, ನಟ, ಚಿಂತಕ

ಇಂದು ನಾವು ಅಭಿವ್ಯಕಿ ಸ್ವಾತಂತ್ರ್ಯದ ಹರಣದ ಕುರಿತಲ್ಲ ಮಾತನಾಡಬೇಕಿರುವುದು...! ನಾವು ಮಾತನಾಡಬೇಕಿರುವುದು ಅಭಿವ್ಯಕ್ತಿ ಸ್ವಾತಂತ್ರ್ಯದ ಆತ್ಮಹತ್ಯೆಯ ಕುರಿತು..

– ದಿನೇಶ್ ಅಮಿನ್ ಮಟ್ಟು...

ದಕ್ಷಿಣಾಯನ ಕಣ್ಣು ಮಾತ್ರ ಆದರೆ ಸಾಲದು, ಕನ್ನಡಿ ಕೂಡ ಆಗಬೇಕು. ಹೊರಗನ್ನು ನೋಡುವ ಹಾಗೆ ಒಳಗನ್ನೂ ನೋಡಿಕೊಳ್ಳುವಂತೆ ಆಗಬೇಕು. ಆಗ ಸಮಾಜದ ಅನೇಕ ಸಮಸ್ಯೆಗಳಿಗೆ ಬೇರೆ ಯಾ–ರೋ ಮಾತ್ರ ಕಾರಣ ಅಲ್ಲ, ನಾವು ಕೂಡ ಕಾರಣ ಅಂತ ಗೊತ್ತಾಗತ್ತೆ. ಆದ್ದರಿಂದ ನಮಗೆ ಈ ಹೊತ್ತು ಸಂತೋಷದ ಜೊತೆಗೆ ನಾಚಿಕೆ ಮತ್ತು ಅಪರಾಧಿ ಭಾವನೆ ಕೂಡ ಕಾಡಬೇಕು?

ಅಭಿವ್ಯಕ್ತಿ ಅಂದರೆ ವೈಯಕ್ತಿಕ ಮಾತ್ರವಲ್ಲ. ಅಭಿವ್ಯಕ್ತಿ ಅಂದರೆ ಮಾತಾಗುವ, ಮಾತಾಗಬಲ್ಲ, ಮಾತಾಡಬಲ್ಲ, ಮಾತಾಡಲಾಗದ, ಮಾತು ಕಿತ್ತುಕೊಂಡಿರಬಹುದಾದ ಹಲವು ಸಮುದಾಯಗಳ ದನಿಯಾಗಬೇಕು. ಅಭಿವ್ಯಕ್ತಿ ವೈಯಕ್ತಿಕವಾಗಿಬಿಟ್ಟರೆ, ಮಾತಾಡಲು ಆಗದೆ ಇರುವವರ ಕತೆ ಏನು?

– ಹೆಚ್.ಎಸ್. ರಾಘವೇಂದ್ರರಾವ್

ಕರ್ನಾಟಕದಲ್ಲಿ 'ಬಂಡಾಯ', 'ಸಮುದಾಯ'ದ ನಂತರ ಚಳವಳಿಗಳು ಸತ್ತು ಹೋಗಿವೆ ಅನ್ನುತ್ತಾರೆ. ಆದರೆ ಅದು ಸುಳ್ಳು. ನದಿ ಹರಿಯುವುದು ಕೆಲವೊಮ್ಮೆ ಕಾಣುವುದಿಲ್ಲ. ಆದರವು ಗುಪ್ತಮಗಾಮಿನಿಯಾಗಿ ಹರೀತಾ ಇರುತ್ತವೆ, ಪ್ರಸಂಗ ಬಂದಾಗ ಪ್ರಕಟ ಆಗುತ್ತವೆ. ಈ 60 ವರ್ಷಗಳ ಕಾಲ ನೆಲದ ಕೆಳಗೆ ಸಾವಿರಾರು ನದಿಗಳು ಹರಿದಿವೆ. ಮಣ್ಣಿನೆಲ್ಲ ಗುಣವನ್ನು, ಜೀವಸತ್ವವನ್ನ ಹೀರಿಕೊಂಡು ಒಂದು ಅರ್ಥದಲ್ಲಿ ಇಂದು ಶಿವಮೊಗ್ಗದಲ್ಲಿ ಈ ಸತ್ವ ಪ್ರಕಟವಾಗಿದೆ.

– ಪ್ರೊ.ಚಂದ್ರಶೇಖರ ಪಾಟೀಲ

ಫ್ಯಾಸಿಸ್ಟ್ ಪ್ರಭುತ್ವದ ಮೂರು ತಂತ್ರಗಳು

ಸರ್ವಾಧಿಕಾರಿ ಪ್ರಭುತ್ವದ ಪ್ರಕ್ರಿಯೆ ಭಾರತದಲ್ಲೂ ಆರಂಭವಾಗಿದೆ. ಗುಜರಾತ್‌ನಲ್ಲಿ ಫ್ಯಾಸಿಸಂ ಶಕ್ತಿಗಳು ಬಂಡವಾಳಶಾಹಿಗಳ ಜತೆ ಮೈತ್ರಿ ಮಾಡಿಕೊಂಡು ಅಧಿಕಾರಕ್ಕೆ ಬಂದಿವೆ. ಈ ವ್ಯವಸ್ಥೆ ದೇಶದ ಇತರೆ ಭಾಗಗಳಿಗೂ ವಿಸ್ತಾರವಾಗುತ್ತಿದೆ. ಇಂತಹ ಪ್ರಭುತ್ವ ಮೂರು ತಂತ್ರ ಅನುಸರಿಸುತ್ತಿವೆ. ಜನರಲ್ಲಿ ಭಯ ಮೂಡಿಸುವುದು. ಸುಳ್ಳು ಸುದ್ದಿಗಳನ್ನು ಸತ್ಯ ಎಂದು ಬಿಂಬಿಸುವುದು, ಮುಖವಾಡವನ್ನೇ ಮುಖ, ನಕಲಿ ಅಭಿವೃದ್ಧಿಯನ್ನೇ ನೈಜ ಎಂದು ಒಪ್ಪಿಕೊಳ್ಳುವಂತೆ ಮಾಡುವುದು...

'ದೇಶದ 12 ರಾಜ್ಯಗಳಲ್ಲಿ ದಕ್ಷಿಣಾಯನ ಚಳವಳಿ ಸಕ್ರಿಯವಾಗಿದೆ. ಸಾಂಸ್ಕೃತಿಕ ಚಳವಳಿಯಾಗಿ ಮುಂದುವರಿಯುತ್ತದೆ. ಎಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಧಕ್ಕೆ ಯಾಗುತ್ತೋ ಅಲ್ಲಿ ಪ್ರತಿರೋಧ ಒಡ್ಡುವುದು ಚಳವಳಿಯ ಪ್ರಮುಖ ಉದ್ದೇಶ.

ಮಾನವಹಕ್ಕುಗಳ ಮೇಲಿನ ದಾಳಿ ತಡೆಯಲು, ಮೂಲಭೂತ ಹಕ್ಕು ಸಂರಕ್ಷಿಸಲು, ಅಭಿವ್ಯಕ್ತಿ ಸ್ವಾತಂತ್ರ್ಯ ಹತ್ತಿಕ್ಕುವ ಫ್ಯಾಸಿಸಂ ಎದುರಿಸಲು ಎಲ್ಲರೂ ಒಗ್ಗಟ್ಟು ಪ್ರದರ್ಶಿಸಬೇಕು'

– ಗಣೇಶ ದೇವಿ

JANASHAKTHI KANNADA VARA PATRIKE April 17-23, 2017 Price : Rs. 10/- Date of Publication : 14 April 2017 RNI No. KARKAN /2006/17926 Posted on every Satuarday
"REGISTERD" Postal Reg. No. RNP/KA/BGS/2078/2016-18 Posted at Bangalore PSO, BG - 560026 Licensed to Post without prepayment License No. WPP-283

"ಕಾಲಕೆಳಗಿನ ಬೆಂಕಿಗಿಂತ ಕಣ್ಣ ಮುಂದಿನ ಬೆಳಕು ದೊಡ್ಡದು"

ಐತಿಹಾಸಿಕ ದಕ್ಷಿಣಾಯನ "ಅಭಿವ್ಯಕ್ತಿ" ಸಮಾವೇಶ



1974ರಲ್ಲಿ ಬರಹಗಾರರ ಒಕ್ಕೂಟ, 1979ರಲ್ಲಿ ಬಂಡಾಯ ಸಾಹಿತ್ಯ ಸಮಾವೇಶದ ದಶಕಗಳ ನಂತರ ಅಷ್ಟೇ ಐತಿಹಾಸಿಕವಾದ ದಕ್ಷಿಣಾಯನ "ಅಭಿವ್ಯಕ್ತಿ" ಬರಹಗಾರರ ಸಮಾವೇಶ ಶಿವಮೊಗ್ಗದಲ್ಲಿ ಏಪ್ರಿಲ್ 8 ರಂದು ನಡೆಯಿತು. "ಕಾಲಕೆಳಗಿನ ಬೆಂಕಿಗಿಂತ ಕಣ್ಣ ಮುಂದಿನ ಬೆಳಕು ದೊಡ್ಡದು" ಎಂಬ ಡಾ. ಕಲಬುರ್ಗಿಯವರ ಅರ್ಥಪೂರ್ಣ ಹೇಳಿಕೆ ಸಮಾವೇಶದ 'ಮಂಟೇಸ್ವಾಮಿ ಮಂಟಪ'ದ ವೇದಿಕೆಯ ಹಿನ್ನೆಲೆಯಲ್ಲಿ ಇತ್ತು. ಸಮಾವೇಶದ ಉದ್ದಕ್ಕೂ "ಕಾಲಕೆಳಗೆ ಮಾತ್ರವಲ್ಲ, ನೆತ್ತಿಯ ಮೇಲೂ ಸುತ್ತಲೂ ಎಲ್ಲೆಲ್ಲೂ ಇರುವ ಬೆಂಕಿ" ಇಂದಿನ ಸನ್ನಿವೇಶದ ಗಂಭೀರತೆಯನ್ನು ನೆನಪಿಸುವ ಪ್ರತಿಮೆಯಾಗಿ ಬಿಟ್ಟಿತು. ಸಮಾವೇಶ ಸಾಕಷ್ಟು ನಿರೀಕ್ಷೆ ಹುಟ್ಟಿಸಿದೆ ಎಂಬುದನ್ನು ಪಾಲುಗೊಂಡವರ ಸಂಖ್ಯೆ ಮತ್ತು ವೈವಿಧ್ಯಮಯ ಹಿನ್ನೆಲೆಗಳು ಹೇಳುತ್ತಿದ್ದವು. ಬಹುಶಃ ಸಂಘಟಕರ ನಿರೀಕ್ಷೆ ಮೀರಿ ನಾಲ್ಕು ತಲೆಮಾರುಗಳನ್ನು ಪ್ರತಿನಿಧಿಸುವ ಸುಮಾರು 450ರಷ್ಟು ಲೇಖಕರು, ಕಲಾವಿದರು, ಚಳುವಳಿಗಾರರು, ಬುದ್ಧಿಜೀವಿಗಳು ಭಾಗವಹಿಸಿದ್ದರು.

ಸಮಾವೇಶಕ್ಕೆ ಬಂದಿದ್ದ ಹಲವು ಹಿರಿಯ-ಕಿರಿಯರು ವೇದಿಕೆಯ ಮೇಲೆ "ದಕ್ಷಿಣಾಯನ"ದ ಪ್ರಮುಖ ಆಶಯಗಳು ಎನ್ನಲಾದ "ನಿರ್ಭೀತಿ", "ಬಹುತ್ವ", "ಸಂವಾದ" ಮತ್ತು "ವಿಕೇಂದ್ರೀಕರಣ"ಗಳ ಪ್ಲೇಕಾರ್ಡುಗಳನ್ನು ಹಿಡಿದುಕೊಳ್ಳುವ ಮೂಲಕ ವಿಶಿಷ್ಟವಾಗಿ ಸಮಾವೇಶದ ಉದ್ಘಾಟನೆ ನಡೆಯಿತು. ಚಂಪಾ, ಕಡಿದಾಳು ಶಾಮಣ್ಣ, ಗಣೇಶ್ ದೇವಿ, ಕೆ ಮರುಳಸಿದ್ದಪ್ಪ, ನಾ.ಡಿಸೋಜಾ, ರಾಜೇಂದ್ರ ಚೆನ್ನಿ, ದಿನೇಶ್ ಅಮೀನ್ ಮಟ್ಟು, ಜಿಕೆ ಗೋವಿಂದ ರಾವ್, ಓ ಎಲ್ ನಾಗಭೂಷಣ ಸ್ವಾಮಿ, ಎಚ್.ಎಸ್. ರಾಘವೇಂದ್ರ ರಾವ್, ರಾಜಾರಾಮ ತೋಳ್ಪಾಡಿ, ರಹಮತ್ ತರಿಕೆರೆ, ಅಲ್ಲಮಪ್ರಭು ಬೆಟ್ಟದೂರು, ಅಗ್ರಹಾರ ಕೃಷ್ಣಮೂರ್ತಿ, ಶ್ರೀಕಂಠ ಕೂಡಿಗೆ, ಅನಸೂಯಾ ಕಾಂಬ್ಳೆ, ಕೆ.ಫಣಿರಾಜ್, ಕೆಪಿ ಸುರೇಶ, ಕೆ.ಅಕ್ಷತಾ, ಅನಂತ ನಾಯಕ್, ಟಿಕೆ ದಯಾನಂದ, ಎಸ್.ಜಿ. ಸಿದ್ದರಾಮಯ್ಯ, ಕೆ.ನೀಲಾ ಹಾಗೂ ರಾಜೇಂದ್ರ ಚೆನ್ನಿ ಚೇತನ್, ಮೊದಲಾದವರು ಉಪಸ್ಥಿತರಿದ್ದು ಸಮಾವೇಶವನ್ನು ಉದ್ಘಾಟಿಸಿದರು. ಆ ನಂತರ ಉದ್ಘಾಟನಾ ಗೋಷ್ಠಿಯಲ್ಲಿ ರಾಜೇಂದ್ರ ಚೆನ್ನಿ, ಗಣೇಶ ದೇವಿ, ಚಂಪಾ ಹಾಗೂ ಯುವ ನಟ ಚೇತನ್ ಮಾತನಾಡಿದರು.

ಸಮಾವೇಶದಲ್ಲಿ ಮೂರು-"ಅಭಿವ್ಯಕ್ತಿ", "ಫ್ಯಾಸಿಸಂ", "ಸದ್ಯದ ರಾಜಕೀಯ ತಲ್ಲಣಗಳು: ಮುಂದಿನ ದಾರಿ" - ಗೋಷ್ಠಿಗಳಿದ್ದವು. ಪ್ರತಿ ಗೋಷ್ಠಿಯಲ್ಲಿ ಕೆಲವು ಟಿಪ್ಪಣಿಗಳು ಮತ್ತು ಅವುಗಳ ಬಗ್ಗೆ ಚರ್ಚೆ ನಡೆಯಿತು. "ಅಭಿವ್ಯಕ್ತಿ" ಗೋಷ್ಠಿಯಲ್ಲಿ ದಿನೇಶ್ ಅಮಿನ್ ಮಟ್ಟು, ಟಿ.ಕೆ.ದಯಾನಂದ್, ಎಚ್.ಎಸ್.ರಾಘವೇಂದ್ರ ರಾವ್, ಎಚ್.ಎಸ್.ಅನುಪಮ ಟಿಪ್ಪಣಿಗಳನ್ನು ಮಂಡಿಸಿದರು. ಈ ಗೋಷ್ಠಿಯನ್ನು ರಹಮತ್ ತರಿಕೆರೆ ನಡೆಸಿಕೊಟ್ಟರು. "ಫ್ಯಾಸಿಸಂ" ಗೋಷ್ಠಿಯನ್ನು ಕೆ. ಫಣಿರಾಜ್ ನಡೆಸಿಕೊಟ್ಟರು. ಜಿ. ರಾಜಶೇಖರ್ ಮತ್ತು ರಾಜಾರಾಂ ತೋಳ್ಪಾಡಿ ಟಿಪ್ಪಣಿಗಳನ್ನು ಮಂಡಿಸಿದರು. ಗಾಯತ್ರಿಯವರು ಪ್ರತಿಕ್ರಿಯಿಸಿದರು. "ಸದ್ಯದ ರಾಜಕೀಯ ತಲ್ಲಣಗಳು: ಮುಂದಿನ ದಾರಿ" ಗೋಷ್ಠಿಯಲ್ಲಿ ನಟರಾಜ ಬೂದಾಳ ಮತ್ತು ವಿಕಾಸ್ ಮೌರ್ಯ ಟಿಪ್ಪಣಿಗಳನ್ನು ಮಂಡಿಸಿದರು. ದೇವನೂರ ಮಹಾದೇವ ಅವರೂ ಈ ಗೋಷ್ಠಿಯಲ್ಲಿ ಮಾತನಾಡಿದರು.

ಸಮಾರೋಪದಲ್ಲಿ ಜಿ.ಕೆ. ಗೋವಿಂದ ರಾವ್, ಕೆ ಮರುಳಸಿದ್ದಪ್ಪ, ಬಿ.ಟಿ. ಲಲಿತಾ ನಾಯಕ್, ಶ್ರೀಕಂಠ ಕೂಡಿಗೆಯವರು ಮಾತನಾಡಿದರು. ಗಣೇಶ್ ದೇವಿ ಅವರು ದಕ್ಷಿಣಾಯನದ ಮುಂದಿನ ಹೆಜ್ಜೆಗಳನ್ನು ಮಂಡಿಸಿದರು. ಸಮಾರೋಪದಲ್ಲಿ "ಶಿವಮೊಗ್ಗ ಘೋಷಣೆ" ಅಂಗೀಕರಿಸಲಾಯಿತು. ಸಮಾರೋಪದ ಮೊದಲು ಕುವೆಂಪು ಅವರ "ಕಲ್ಕಿ"ಯ ರಂಗ ಪ್ರಸ್ತುತಿಯನ್ನೂ ಮಾಡಲಾಯಿತು. ಗೋಷ್ಠಿಗಳ ನಡುವೆ ನಡೆದ ಮಹಿಳೆಯರ "ಆಜಾದಿ ಘೋಷಣೆ" ಸ್ಫೂರ್ತಿದಾಯಕವಾಗಿತ್ತು. ●

ಸಮಾವೇಶ ನಿರೀಕ್ಷೆ ಮುಟ್ಟಿತೇ?

ಶಿವಮೊಗ್ಗದ "ಅಭಿವ್ಯಕ್ತಿ" ಸಮಾವೇಶ ದಕ್ಷಿಣಾಯನ ಕರ್ನಾಟಕದ ಮೊದಲ ಸಾರ್ವಜನಿಕ ಕಾರ್ಯಕ್ರಮವಾಗಿತ್ತು. ಇಂತಹ ವೇದಿಕೆ ಅಥವಾ ಸಮಾವೇಶವೊಂದರ ಅಗತ್ಯ ಖಂಡಿತಾ ಇತ್ತು ಎಂಬುದನ್ನು ಇದರಲ್ಲಿ ವ್ಯಾಪಕ ಉತ್ಸಾಹಕರ ಪಾಲುಗೊಳ್ಳುವಿಕೆಯೇ ಹೇಳಿದೆ. ಆದರೆ "ಕಾಲಕೆಳಗೆ ಮಾತ್ರವಲ್ಲ, ನೆತ್ತಿಯ ಮೇಲೂ ಸುತ್ತಲೂ ಎಲ್ಲೆಲ್ಲೂ ಇರುವ ಬೆಂಕಿ" ಇರುವ ಇಂದಿನ ಗಂಭೀರ ಸನ್ನಿವೇಶದಲ್ಲಿ ಮುಂದೆ ಸಾಗಲು "ಕಣ್ಣ ಮುಂದಿನ ಬೆಳಕು" ಹುಡುಕುತ್ತಾ ಅಲ್ಲಿಗೆ ಬಂದ ನೂರಾರು ಲೇಖ-ಕರು, ಕಲಾವಿದರ, ಚಳುವಳಿಗಾರರ ನಿರೀಕ್ಷೆಯನ್ನು ಮುಟ್ಟಿತೇ? ವಿವಿಧ ಹಿನ್ನೆಲೆ ನೆಲೆ ನಿಲುವುಗಳಿಂದ ಬಂದ ಎಲ್ಲರ ನಿರೀಕ್ಷೆ ಮುಟ್ಟುವುದು ಸುಲಭವಲ್ಲ. ಆದ್ದರಿಂದ "ಇದು ವಿಚಾರಸಂಕಿರಣವಲ್ಲ; ಅತಿಥಿಗಳೂ ಇರುವುದಿಲ್ಲ. ಇದು ಒಂದು ಸಹಚಿಂತನೆ ಹಾಗೂ ಸಮಾಲೋಚನೆಯ ಸ್ವರೂಪದ್ದು. ನಾವು ತುರ್ತಾಗಿ, ಅಗತ್ಯವಾಗಿ ನಮ್ಮೆಲ್ಲ ಶಕ್ತಿಗಳನ್ನು ಬಳಸಿಕೊಂಡು ಮಾಡಬೇಕಾದುದರ ಬಗ್ಗೆ ಸ್ಪಷ್ಟತೆ ಪಡೆದುಕೊಂಡು ಮಾಡಬೇಕಾದ ಕೆಲಸಗಳನ್ನು ಆರಂಭಿಸಲು ಒಂದು ವೇದಿಕೆ." ಎಂಬ ಸಮಾವೇಶ ಮೊದಲಿನ ಟಿಪ್ಪಣಿಯ ಹೇಳಿಕೆಯ ಆಧಾರದಲ್ಲಿ ಸಮಾವೇಶದ ಸಫಲತೆಯನ್ನು ಅಳೆಯಲು ಪ್ರಯತ್ನಿಸಬಹುದು.

"ವಿಚಾರ ಸಂಕಿರಣವಲ್ಲ; ಅತಿಥಿಗಳೂ ಇರುವುದಿಲ್ಲ. ಇದು ಒಂದು ಸಹಚಿಂತನೆ ಹಾಗೂ ಸಮಾಲೋಚನೆಯ ಸ್ವರೂಪದ್ದು." ಎಂಬುದು ಸಮಾವೇಶದಲ್ಲಿ ಜಾರಿಯಾಗಲಿಲ್ಲ ಎಂಬುದು ಮೇಲುನೋಟಕ್ಕೆ ಕಾಣುವಂತಹುದು. ಸಮಾವೇಶದ ಕಾರ್ಯಕ್ರಮ ವಿಚಾರಸಂಕಿರಣದ ಮಾದರಿಯಲ್ಲೇ ಇತ್ತು. ವಿಚಾರಸಂಕಿರಣದ ಮಾದರಿಯ ಸಮರ್ಥ

ಪುಟ 15 ಕ್ಕೆ

"ಸಮಾವೇಶದ ಹಿಡನ್ ಅಜೆಂಡಾಗಳು":

ಸಾಮಾನ್ಯವಾಗಿ ಯಾವುದೇ ಕ್ರಿಯೆ, ಕಾರ್ಯಕ್ರಮಗಳು ನಡೆಯುತ್ತಿರುವಾಗ ಹಿಡನ್ ಅಜೆಂಡಾವನ್ನು ಮೊದಲು ಹೇಳುವುದಿಲ್ಲ. ಆದರೆ ನಮ್ಮ ಈ ಸಮಾವೇಶದ ಹಿಡನ್ ಅಜೆಂಡಗಳನ್ನು ಮೊದಲಿಗೆ ನಿಮಗೆ ಹೇಳಿಬಿಡುತ್ತೇವೆ.

ಮೊದಲನೆಯದಾಗಿ ನಿಮ್ಮ ಮುಖದ ಮೇಲಿರುವ ಆತಂಕದ ಛಾಯೆಗಳನ್ನು ತೆಗೆದುಹಾಕುವುದು, ಎರಡನೇಯದು ನಮ್ಮೊಳಗಿನ ಬಿಕ್ಕಟ್ಟುಗಳು, ಸಿಕ್ಕುಗಳನ್ನು ಬಿಡಿಸಿ ಸರಳಗೊಳಿಸುವುದು, ಮೂರನೇಯದು ಬಹುಮತವೆಂದರೆ ಅದು ಜನಮತ ಅಲ್ಲ. ಜನ ಯಾಕೆ ನಮ್ಮ ಮಾತು ಕೇಳದೇ ಕೋಮುವಾದಿಗಳ ಹಿಂದೆ ಹೋಗುತ್ತಿದ್ದಾರೆ ಎನ್ನುವ ಆತಂಕ ನಮಗಿದೆ. ನಿಜ ಏನೆಂದರೆ ಜನರ ಮನಸ್ಸಿನ್ನಲ್ಲಿ ವಿವೇಕ ಇರುತ್ತದೆ. ಅದು ಕೆಲವು ಕಾಲದಲ್ಲಿ ಮಂಕಾಗುತ್ತದೆ. ಈ ಕಾಲದಲ್ಲಿಯೂ ಸಹ. ಆದರೆ ಅವರು ಖಂಡಿತಾ ಜೀವಪರವಾಗಿ ಆಲೋಚಿಸುತ್ತರೆ ಎಂಬ ಆತ್ಮವಿಶ್ವಾಸ ಮೂಡಿಸುವುದು. ಕೊನೆಯದಾಗಿ ಕೆಲವಾರು ವರ್ಷಗಳಿಂದ ಕೆಲವು ಮಾತುನಾಡುವವರ ಗಂಟಲಿನಲ್ಲಿ ಕೂಗುಮಾರಿ ಗುಣ ಬಂದು ಬಿಟ್ಟಿದೆ. ಇದನ್ನು ಎದುರಿಸುವ ಬಗೆ ಏನೆಂಬುದು...

ದಕ್ಷಿಣಾಯನ ಯಾಕೆಂದರೆ ನಾವು ಇಂದು ನಡೆಯುತ್ತಿರುವ ಹಲವು ಚಳವಳಿಗಳು ಮತ್ತು ಹೋರಾಟಗಳನ್ನು ಗೌರವಪೂರ್ವಕವಾಗಿ ನೆನಪು ಮಾಡಿಕೊಳ್ಳುತ್ತೇವೆ. ಹಲವು ವಿಚಾರಗಳಿಗೆ ಹಲವಾರು ಜನ ಹಲವಾರು ಸಿದ್ಧಾಂತಗಳನ್ನು ಇಟ್ಟುಕೊಂಡು ಹೋರಾಟಗಳು ನಡೆಯುತ್ತಲೇ ಇವೆ. ಪ್ರಭುತ್ವ ದಮನಕೋರ ಹಲ್ಲೆಗಳ ವಿರುದ್ಧ ಪ್ರಬಲ ಪ್ರತಿರೋಧ ಕಟ್ಟುತ್ತಿದ್ದಾರೆ. ಇದನ್ನು ಒಂದು ವೇದಿಕೆಯಲ್ಲಿ ಒಂದು ಚಾವಡಿಯ ಕೆಳಗೆ ಕೂತು ಮಾತಾಡಬೇಕಿದೆ. ನಂತರ ಅದು ಸಮುದಾಯದ ಜೊತೆಗಿನ ಮಾತಾಗಬೇಕಿದೆ...

ದಕ್ಷಿಣಾಯನ ಇದು ಒಂದು ಸಂಘಟನೆಯಲ್ಲ. .. ..ಇದೊಂದು ಪಯಣ, ಅಭಿಯಾನ, ಪ್ರಯೋಗವೇ ದಕ್ಷಿಣಾಯನವಾಗಿದೆ.

ನಮಗೆ ಸಿದ್ಧ ಸಿದ್ಧಾಂತಗಳ ಗೊಡವೆಯಿಲ್ಲ. ಮತ್ತು ಯಾವುದೇ ಹುನ್ನಾರ ಇಲ್ಲ. ಬರಹಗಾರರ, ಕಲಾವಿದರ, ಸೃಜನಶೀಲ ವ್ಯಕ್ತಿಗಳ ಒಕ್ಕೂಟವಾಗಿದೆ...

ಪಂಪನಿಂದ ಆರಂಭವಾಗಿರುವ ಪರಂಪರೆಯ ಪ್ರಭುತ್ವವನ್ನು ಪ್ರಶ್ನೆ ಮಾಡುವುದನ್ನು ನಮಗೆ ಕಲಿಸಿದೆ. ಈ ವಿವೇಕ ಕನ್ನಡ ಸಂಸ್ಕೃತಿಯ ಆತ್ಮವಾಗಿದೆ. ಕುವೆಂಪು ಮಲೆಗಳಲ್ಲಿ ಸ್ಥಳೀಯ ದೇವತೆಗಳನ್ನು ಪ್ರತಿಷ್ಠಾಪಿಸಬೇಕು ಎಂದು ಬರೆದಿದ್ದಾರೆ. ಸ್ಥಳೀಯ ಬಹು ಸಂಸ್ಕೃತಿಯ, ಬಹುತ್ವವನ್ನು ಗೌರವಿಸುವ ಈ ಕಲ್ಪನೆಯನ್ನು ದಕ್ಷಿಣಾಯನ ಇಟ್ಟುಕೊಂಡಿದೆ.

– ರಾಜೇಂದ್ರ ಚೆನ್ನಿ





JANASHAKTHI KANNADA VARA PATRIKE: Printed, Published by G.V.SRIRAMA REDDY, EMS Bhavana, No.37/A, 8th Cross, Mahalakshmi Layout, BANGALORE-560086 Karnataka on behalf of COMMUNIST PARTY OF INDIA (MARXIST) and Printed at : Kriya Prakashana, No. 12, 18th Cross, Sampangirama Nagar, Bangalore 560027
Editor : G.V.SRIRAMA REDDY